# ಸಂಪಾದಕೀಯ



ಸಕಾರಾತ್ಮಕ ಬದಲಾವಣೆ ಇಲ್ಲದೆ ಪ್ರಗತಿ ಎಂಬುದು ದುಸ್ತರ. ಸಕಾರಾತ್ಮಕ ಚಿತ್ತಸ್ಥಿತಿಯನ್ನು ರೂಢಿಸಿಕೊಳ್ಳದವರು ಏನನ್ನೂ ಸೃಷ್ಟಿಸಲಾರರು, ಯಾವುದನ್ನೂ ಬದಲಿಸಲಾರರು. ಮನಸ್ಸಿನಲ್ಲಿ ಸಂಶಯ ಪ್ರವೃತ್ತಿ ಮನೆಮಾಡಿದರೆ ಸಂಸಾರದ ಕಷ್ಟಕೋಟಲೆಗಳು ಹೆಚ್ಚಾಗಿ ಶಿವದರ್ಶನ ಸಾಧ್ಯವಾಗುವುದಿಲ್ಲ. ವಿಷಯ ಸುಖದಲ್ಲಿ ತಪ್ತ ಇಂದ್ರಿಯಗಳು ಶಿವಪಥದಲ್ಲಿ ಮುನ್ನಡೆಯಲಾರವು. ಆದರೆ ಶರಣರ, ಸಂತರ, ಅನುಭಾವಿಗಳ ಸಂಗದಲ್ಲಿದ್ದರೆ ಸಂಸಾರದ ದುಃಖಗಳು ದೂರವಾಗಿ ಶಿವದರ್ಶನ ಸಾಧ್ಯವೆಂಬ ಅಭಿಪ್ರಾಯ ಬಸವಣ್ಣನವರದು. ಪ್ರಪಂಚದ ಇತಿಹಾಸದಲ್ಲಿ ಧಾರ್ಮಿಕ ಸಂಸ್ಥೆಗಳು ಮಹತ್ತರವಾದ ಪಾತ್ರವನ್ನು ವಹಿಸಿರುವಂತೆಯೇ ಲಿಂಗಾಯತ ಮಠಗಳು ಹಾಗೂ ಮಠಾಧಿಪತಿಗಳು ನಮ್ಮ ನಾಡಿನ ಚರಿತ್ರೆಯಲ್ಲಿ ಮಹತ್ತರವಾದ ಪಾತ್ರ ವಹಿಸಿದ್ದಾರೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಮಠಗಳು ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ಹೆಚ್ಚಿನ ಹೊಣೆಯನ್ನು ಹೊತ್ತು ಅದನ್ನು ಯಶಸ್ವಿಯಾಗಿ ನಿರ್ವಹಿಸಿವೆ. ಅನ್ನದಾಸೋಹ, ಜ್ಞಾನ ದಾಸೋಹ, ಆಶ್ರಯ ದಾಸೋಹ ಮತ್ತು ಸಾಂಸ್ಕೃತಿಕ ಹಾಗೂ ಸಾಹಿತ್ಯ ದಾಸೋಹಗಳನ್ನು ನೀಡುವುದರೊಂದಿಗೆ, ವೈಯಕ್ತಿಕ ಆಸಕ್ತಿಯನ್ನು ಗುರುತಿಸಿ ಆ ನಿಟ್ಟಿನಲ್ಲಿ ಅವರನ್ನು ಬೆಳೆಸಿ ಪರಿಪೂರ್ಣ ಉನ್ನತ ಮಾನವರನ್ನಾಗಿಸಲು ಮಠಗಳು ಸಾಕಷ್ಟು ಶ್ರಮಿಸುತ್ತಿವೆ. ಈ ಮಠಗಳು ಸಮಾಜದ ಭಾಗವಾಗಿ, ಚೇತನ ಶಕ್ತಿಗಳಾಗಿ, ಸ್ಫೂರ್ತಿಯ ನೆಲೆಗಳಾಗಿ ಇಂದಿಗೂ ಮುಂದುವರೆದುಕೊಂಡು ಬರುತ್ತಿವೆ.

ಲಿಂಗಾಯತ ಮಠಗಳು ಯಾವುದೇ ಜಾತಿ, ಮತ, ಪಂಥ, ಧರ್ಮಗಳ ಬೇಧವಿಲ್ಲದೆ ಜನತೆಯ ಸಮಗ್ರ ಅಭಿವೃದ್ಧಿಗಾಗಿ ಸಮಾಜ ಸೇವೆಯನ್ನು ಕೈಗೊಂಡಿವೆ. ಲಿಂಗಾಯತ ಮಠಗಳ ಸಾಂಸ್ಕೃತಿಕ ಸೇವಾಕಾರ್ಯಬಹು ವಿಶಾಲಾರ್ಥವನ್ನು ಪಡೆದುಕೊಂಡಿದೆ. ಸಮಾಜದ ಪ್ರಗತಿ ಹಾಗೂ ಸಂರಕ್ಷಣೆಯ ಕಾರ್ಯಗಳಲ್ಲಿ ನಿರತವಾಗಿರುವ ಈ ಮಠಗಳು ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಗಮನಾರ್ಹ ಕೆಲಸ ಮಾಡಿವೆ. ಒಂದು ಕಾಲಕ್ಕೆ ನೊಳಂಬ ಲಿಂಗಾಯತ ಮಠಗಳು ಕೇವಲ ವಿದ್ಯಾರ್ಥಿಗಳಿಂದ ಕೂಡಿದ ಶಿಕ್ಷಣ ಕೇಂದ್ರಗಳಾಗಿದ್ದವು. ಮುಂದೆ ಆಧುನಿಕ ಬದಲಾವಣೆಗೆ ಅನುಗುಣವಾಗಿ ತಮ್ಮ ಕೆಲಸ ಕಾರ್ಯಗಳಲ್ಲಿ ಮಾರ್ಪಾಡುಗಳನ್ನು ಮಾಡಿಕೊಳ್ಳುತ್ತ ಬಂದಿವೆ. ಈ ಹಾದಿಯಲ್ಲಿ ಸಾಗಿಬಂದಿರುವ ಇಂದಿನ ಲಿಂಗಾಯತ ಮಠಗಳು ಪ್ರಜಾಪ್ರಭುತ್ವದ ತಳಹದಿಯ ಮೇಲೆ ನವ ಸಮಾಜವನ್ನು ನಿರ್ಮಿಸುವ ಕಾರ್ಯದಲ್ಲಿ ನಿರತವಾಗಿವೆ. ಸಮಾನತೆ, ಕಾಯಕನಿಷ್ಠೆ ಪ್ರಸಾದ, ದಾಸೋಹ ಭಾವಗಳನ್ನು ಜನಮಾನಸದಲ್ಲಿ ಹರಡುವ ಮಹತ್ವದ ಉದ್ದೇಶದ ಸಮಾಜೋ-ಧಾರ್ಮಿಕ ಚಳುವಳಿಯಲ್ಲಿ ತೊಡಗಿದ್ದ ಬಸವಾದಿ ಶರಣರು ನ್ಯಾಯ ನಿಷ್ಠುರಿಗಳಾಗಿದ್ದು ತಮ್ಮೆದುರಿನ ಅನ್ಯಾಯ ಅಕ್ರಮ ಢಾಂಬಿಕತೆಗಳನ್ನು ಕಟುವಾಗಿ ವಿಡಂಬಿಸುತ್ತಿದ್ದರು. ಪರಸ್ಪರರು ಅಪಾರ ಗೌರವ

## ನಿನಗೆ ಕೇಡಿಲ್ಲವಂತೆ

ಭಾವನೆಯನ್ನು ಹೊಂದಿದ್ದರೂ ಅವರ ನಡೆ-ನುಡಿ, ಆಚಾರ-ವಿಚಾರಗಳನ್ನು ಕುರುಡಾಗಿ ಒಪ್ಪಿಕೊಳ್ಳುತ್ತಿರಲಿಲ್ಲ. ಶರಣರಿಗೆ ಭಕ್ತಿ ಎನ್ನುವುದು ಈಗಿನಂತೆ ತೋರಿಕೆಯ ಆಡಂಬರವಾಗಿರಲಿಲ್ಲ. ಯಾರಿಗೂ ತಿಳಿಯದಂತೆ ಅಂತರಂಗದಲ್ಲಿ ಶಿವಧ್ಯಾನ, ಬಾಹ್ಯದಲ್ಲಿ ಲೋಕದ ಕಾಯಕದಲ್ಲಿ ತೊಡಗುವುದು ಅವರ ರೂಢಿಯಾಗಿತ್ತು.

ಪ್ರಸಾದ-ದಾಸೋಹ ಭಾವದ ಸಕಲ ಜೀವಾತ್ಮರಿಗೆ ಲೇಸ ಬಯಸುವ ಸದಾಚಾರ-ಸನ್ನಡತೆ-ಸದುವಿನಯಗಳ ಮೂಲಕ ಮನೆಯನ್ನೇ ಮಹಾಮನೆಯನ್ನಾಗಿಸಿದ, ದೇವಲೋಕ-ಮರ್ತ್ಯಲೋಕಗಳನ್ನು ಒಂದಾಗಿಸಿದ ಕಲ್ಯಾಣವನ್ನು ನೋಡುವ, ಸೇರುವ, ಅದರಲ್ಲಿ ಒಂದಾಗುವ ಹಂಬಲದಿಂದ ಕಲ್ಯಾಣದ ವಿಚಾರಧಾರೆಗಳು ಜಗತ್ತನ್ನು ಪಸರಿಸಿವೆ. ಇದರಲ್ಲಿ ನೊಳಂಬ ಲಿಂಗಾಯತ ಮಠಗಳು ಕಾರ್ಯಪ್ರವೃತ್ತರಾಗಿರುವುದು ಸಂತಸದ ಸಂಗತಿ.

ಬದುಕು ಎಲ್ಲವನ್ನು ಕಲಿಸುತ್ತದೆ. ಕಲಿಯುವ ಮನಸ್ಸಿರಬೇಕಷ್ಟೆ. ಜೀವನದಲ್ಲಿ ಎದುರಾಗುವ ಪ್ರತಿ ಘಟನೆಯೂ ಒಂದು ಪಾಠವೇ. ಕಲಿತು ಆತಂಕಗಳನ್ನು ನಿವಾರಿಸಿಕೊಳ್ಳೋಣ.

**ಡಾ. ರಾಕೇಶ್ ಬಿ.ಸಿ.**
ಸಂಪಾದಕರು



# ಅಧ್ಯಕ್ಷರ ಆಶಯ ನುಡಿ

"ಆತ್ಮೀಯ ಚಂದದಾರರೆ ಹಾಗು ಸಮಾಜದ ಬಂಧುಗಳೆ"

ತಾವುಗಳೆಲ್ಲರೂ ಕುಶಲವೆಂದು ಭಾವಿಸುತ್ತಾ ತಮ್ಮೆಲ್ಲರಿಗೂ ಜಗದ ಮೊದಲ ತೇದಿ ಯುಗಾದಿಯ ಶುಭಾಶಯಗಳು. ಕಳೆದ ಕ್ರೋಧಿ ನಾಮ ಸಂವತ್ಸರದಲ್ಲಿ ಏಳು ಬೀಳುಗಳನ್ನು ಕಂಡು ವಿಶ್ವಾವಸು ನಾಮ ಸಂವತ್ಸರದತ್ತ ಹೆಜ್ಜೆ ಇಡುತ್ತಿದ್ದೇವೆ. ಕಾಲ ಎಂದಿಗೂ ನಿಲ್ಲುವುದಿಲ್ಲ. ವರುಷಗಳು ಉರುಳಿದಂತೆ ಹೊಸ ಕ್ಷಣಕ್ಕೆ ನಾವೆಲ್ಲರು ಸಿದ್ಧರಾಗಬೇಕಿದೆ.

ಕನ್ನಡದ ವರಕವಿ ದ.ರಾ.ಬೇಂದ್ರೆಯವರು ಹಾಡಿದಂತೆ;

**ಯುಗ-ಯುಗಾದಿ ಕಳೆದರೂ**
**ಯುಗಾದಿ ಮರಳಿ ಬರುತಿದೆ**
**ಹೊಸ ವರುಷಕೆ ಹೊಸ ಹರುಷವ**
**ಹೊಸತು ಹೊಸತು ತರುತಿದೆ**

ಎಂಬ ಮಾತಿನಂತೆ ಯುಗಾದಿ ಕೇವಲ ವರುಷದ ಆರಂಭವಲ್ಲ. ಅದು ಪ್ರಕೃತಿಯ ಮನ್ವಂತರದ ಕಾಲಘಟ್ಟ ಹಳೆ ಬೇರು ಹೊಸ ಚಿಗುರು ಎಂಬಂತೆ ಬೇಸಿಗೆಯಲಿ ಜಡ ಹೊಡೆದ ಪ್ರಕೃತಿಯು ಹಸಿರ ತೊಟ್ಟು ಸಂಭ್ರಮಿಸುವ ಕಾಲ. ಹಾಗೆಯೇ ತಮ್ಮೆಲ್ಲರ ಉತ್ಸಾಹ ಜೀವನದಲ್ಲಿ ಚೈತನ್ಯ ತುಂಬಲಿ ಎಂದು ಆಶಿಸುತ್ತೇನೆ.

ಕಳೆದ ಸಂವತ್ಸರದಲ್ಲಿ ಸಂಘದ ವತಿಯಿಂದ ಸ್ಮರಣೀಯ ಕೆಲಸಗಳು ಆಗಿದ್ದು ಅವೆಲ್ಲವೂ ತಮ್ಮ ಗಮನಕ್ಕೆ ಬಂದಿವೆ ಎಂದು ಭಾವಿಸುತ್ತೇನೆ. ಅದರಲ್ಲಿಯೂ ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ 852ನೇ ಶ್ರೀ ಗುರುಸಿದ್ಧರಾಮೇಶ್ವರರ ಜಯಂತಿಯು ವ್ಯವಸ್ಥಿತವಾಗಿ ನಡೆದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಇದಕ್ಕೆ ಮುನ್ನುಡಿ ಬರೆದಂತೆ ಈ ಸಂವತ್ಸರದ ಆರಂಭದಲ್ಲಿಯೇ ಅಂದರೆ ದಿನಾಂಕ : 06-04-2025 ರಂದು ಸಂಘದ ವತಿಯಿಂದ ಬೆಂಗಳೂರಿನ ರಾಜಾಜಿನಗರ ದಲ್ಲಿ ಕಟ್ಟಿರುವ ಶ್ರೀಮತಿ ಸರ್ವಮಂಗಳಮ್ಮ ಶ್ರೀ ಸಿ.ಸಿದ್ದಯ್ಯನವರ ವಾಣಿಜ್ಯ ಸಂಕೀರ್ಣದ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಸದರಿ ಸಂಕೀರ್ಣದಿಂದ ಬರುವ ಆದಾಯವು ಸಂಘದ ಆರ್ಥಿಕ ಸ್ಥಿತಿಯನ್ನು ಮತ್ತಷ್ಟು ಸದೃಢವಾಗಿಸಲು ಪೂರಕವಾಗಿರುತ್ತದೆ. ತಮ್ಮೆಲ್ಲರಿಗೂ ಆ ಸಮಾರಂಭಕ್ಕೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಮುಂದೆ ಬರುವ ವಿಶ್ವಾವಸು ಸಂವತ್ಸರವು ತಮಗೂ ತಮ್ಮ ಕುಟುಂಬಕ್ಕೂ ಹಾಗೂ ದೇಶದ ಜನತೆಗೂ ಸುಖ-ಶಾಂತಿ-ನೆಮ್ಮದಿಯನ್ನುಂಟು ಮಾಡಲೆಂದು ಹಾರೈಸುತ್ತಾ ತಮ್ಮೆಲ್ಲರಿಗೂ ಮತ್ತೊಮ್ಮೆ ಶುಭಾಶಯ ಕೋರುತ್ತೇನೆ.

ವಂದನೆಗಳೊಂದಿಗೆ

ಶರಣು ಶರಣಾರ್ಥಿಗಳು
**ಶ್ರೀ ಬಿ.ಕೆ.ಚಂದ್ರಶೇಖರ್**
ಅಧ್ಯಕ್ಷರು
ನೊಳಂಬ ಲಿಂಗಾಯತ ಸಂಘ (ರಿ.), ಬೆಂಗಳೂರು.

**ನಮ್ಮ ಬ್ಯಾಂಕ್ : ತುಮಕೂರು ವೀರಶೈವ ಕೋ-ಆಪರೇಟೀವ್ ಬ್ಯಾಂಕ್ (ಲಿ)**
**ನೊಳಂಬವಾಣಿ**
**ಖಾತೆ ಸಂಖ್ಯೆ : 00063090000189**
**ಶಾಖೆ : ಬಸವೇಶ್ವರನಗರ, ಬೆಂಗಳೂರು.**
**ಐ.ಎಫ್.ಎಸ್.ಸಿ. : IBKL0362TVC**
**ಬ್ಯಾಂಕ್ :**
**IDBI BANK LTD**

# ನೊಳಂಬ ಲಿಂಗಾಯತ ಸಂಘದ ಕಾರ್ಯ ಚಟುವಟಿಕೆಗಳು

**1.** ದಿನಾಂಕ: 22.12.2024 ರಂದು 2023–24ನೇ ಸಾಲಿನ ಸರ್ವ–ಸದಸ್ಯರ ಸಭೆಯು ಬೆಂಗಳೂರಿನಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಬಿ.ಕೆ.ಚಂದ್ರಶೇಖರ್‌ರವರ ಸಮ್ಮುಖದಲ್ಲಿ ನಡೆಯಿತು. ಪ್ರಪ್ರಥಮ ಬಾರಿಗೆ ಸಂಘದ ಮುಂಗಡ ಪತ್ರವನ್ನು ಮಂಡಿಸಲಾಯಿತು.

**2.** ದಿನಾಂಕ: 14 ಮತ್ತು 15 ಜನವರಿ 2025 ರಂದು ಶ್ರೀಗುರುಸಿದ್ಧರಾಮೇಶ್ವರ ಜಯಂತಿಯನ್ನು ಅರಮನೆ ಮೈದಾನ ತ್ರಿಪುರವಾಸಿನಿಯಲ್ಲಿ ಹರ–ಗುರು–ಚರಮೂರ್ತಿಗಳ ನೇತೃತ್ವದಲ್ಲಿ ಹಾಗೂ ರಾಜಕೀಯ ಹಾಗೂ ಸಮಾಜದ ಮುಖಂಡರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. ಸಹಸ್ರಾರು ಭಕ್ತಾದಿಗಳು ಭಾಗವಹಿಸಿ ಗುರು ಕೃಪೆಗೆ ಪಾತ್ರರಾಗಿರುತ್ತಾರೆ.

**3.** ದಿನಾಂಕ: 26.01.2025ರಂದು 76ನೇ ಗಣರಾಜ್ಯೋತ್ಸವ ದಿನಾಚರಣೆಯನ್ನು ದಾನಿಗಳಾದ ಯು.ಎಸ್.ಎ. ಶ್ರೀ ಸುರೇಶ್‌ರವರಿಂದ ಧ್ವಜಾರೋಹಣ ನಡೆಯಿತು. ಅಧ್ಯಕ್ಷತೆಯನ್ನು ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಎಸ್.ಆರ್.ಪಾಟೀಲ್‌ರವರು ವಹಿಸಿದ್ದರು. ಸಂಘದ ಗೌ॥ ಕಾರ್ಯದರ್ಶಿಯವರು ಹಾಗೂ ನಿರ್ದೇಶಕರುಗಳು, ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳಿಗೆ ಗಣರಾಜ್ಯೋತ್ಸವದ ಪ್ರಾಮುಖ್ಯತೆಯನ್ನು ತಿಳಿಸಿದರು.

**4.** ದಿನಾಂಕ: 06.02.2025 ರಂದು ಸುಕ್ಷೇತ್ರ ಕೆರೆಗೋಡಿ–ರಂಗಾಪುರಕ್ಕೆ ಪದಾಧಿಕಾರಿಗಳು ಮತ್ತು ನಿರ್ದೇಶಕರುಗಳು ಭೇಟಿ ನೀಡಿ ಪರಮಪೂಜ್ಯರ ಆಶೀರ್ವಾದ ಪಡೆದು ಸರ್ಕಾರದಿಂದ 850ನೇ ಜಯಂತಿಗೆ ಮಂಜೂರಾಗಿದ್ದ 25,00,000/– ಲಕ್ಷ ರೂ.ಗಳ ಚೆಕ್‌ನ್ನು ಪೂಜ್ಯರಿಗೆ ನೀಡಿ 850ನೇ ಜಯಂತಿ ನೆನಪಿಗಾಗಿ ತಿಪಟೂರಿನಲ್ಲಿ ಸಂಘದ ಹೆಸರಿನಲ್ಲಿ ಆಸ್ತಿಯನ್ನು ಮಾಡಬೇಕೆಂದು ವಿನಂತಿ ಮಾಡಲಾಯಿತು. ಸಂಘದ ಮನವಿಯನ್ನು ಪರಮಪೂಜ್ಯರು ಸಮ್ಮತಿಸಿದ್ದಾರೆ.

**5.** ದಿನಾಂಕ: 04.04.2025ರಂದು ಶುಭ ಶುಕ್ರವಾರ 1ನೇ ಬ್ಲಾಕ್ ರಾಜಾಜಿನಗರದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಮತಿ ಸರ್ವಮಂಗಳಮ್ಮ ಸಿ.ಸಿದ್ದಯ್ಯ ವಾಣಿಜ್ಯ ಸಂಕೀರ್ಣದ ಪೂಜಾ ಕಾರ್ಯಕ್ರಮ ಹಾಗೂ ಸಂಕೀರ್ಣದ ಉದ್ಘಾಟನೆಯನ್ನು ದಿನಾಂಕ: 06.04.2025ರ ಭಾನುವಾರದಂದು ನೆರವೇರಿಸಲಾಗುವುದು. ಅಂದೇ ದಾನಿಗಳ ಸಂಸ್ಮರಣಾ ದಿನಾಚರಣೆಯನ್ನು ಸಹ ಹಮ್ಮಿಕೊಳ್ಳಲಾಗಿದೆ.

**6.** ನಮ್ಮ ಸಂಘದ ಸದಸ್ಯರುಗಳಾದ ತಿಪಟೂರು ನಗರದಲ್ಲಿರುವ ಶ್ರೀ ಎಸ್.ವಿ.ಪಿ. ವಿದ್ಯಾಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಕೆ.ರಾಜಶೇಖರ್‌ರವರು ಸಂಘಕ್ಕೆ ರೂ. 5,55,555/– (ಐದು ಲಕ್ಷದ ಐವತ್ತೈದು ಸಾವಿರದ ಐದು ನೂರು ಐವತ್ತೈದು) ರೂಪಾಯಿಗಳ ದೇಣಿಗೆಯನ್ನು ಕೊಟ್ಟಿರುತ್ತಾರೆ. ಹಾಗೂ ದಾನಿಗಳಾದ ಶ್ರೀ ಬಿ.ಎಸ್.ಸೋಮಶೇಖರಪ್ಪ ಬಿನ್. ಸಿದ್ದನಂಜಪ್ಪ, ಬಿಸಲೆರೆ, ಕಡೂರು ತಾ॥ ಇವರು ವಿದ್ಯಾರ್ಥಿಗಳ ವಸತಿಗೆ ಅನುಕೂಲವಾಗಲು ಒಂದು ಲಕ್ಷ ರೂ.ಗಳನ್ನು ದಾನವಾಗಿ ನೀಡಿದ್ದಾರೆ. ಈ ಎಲ್ಲಾ ದಾನಿಗಳಿಗೆ ಸಂಘವು ಕೃತಜ್ಞತೆಯನ್ನು ಅರ್ಪಿಸುತ್ತದೆ.

**7.** ಕಡೂರಿನಲ್ಲಿ ಹೊಸದಾಗಿ ನಿರ್ಮಿಸುತ್ತಿರುವ ಸಮುದಾಯ ಭವನದ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.



**ಕೆ.ಬಿ.ಶಶಿಧರ್ ಕಾಮನಕೆರೆ**
ಗೌರವ ಕಾರ್ಯದರ್ಶಿ
ನೊಳಂಬ ಲಿಂಗಾಯತ ಸಂಘ (ರಿ)
ಬೆಂಗಳೂರು.

**8.** ಪದಾಧಿಕಾರಿಗಳು, ನಿರ್ದೇಶಕರುಗಳು ಮತ್ತು ಇಂಜಿನಿಯರ್‌ಗಳು ಸಂಘದಿಂದ ಜರುಗುತ್ತಿರುವ ಕಾಮಗಾರಿಗಳನ್ನು ಆಗಿದಾಂಗ್ಗೆ ಭೇಟಿ ನೀಡಿ ಕಾಮಗಾರಿಗಳನ್ನು ವೀಕ್ಷಿಸುತ್ತಿದ್ದಾರೆ.

**9.** ಸಂಘದ ಅಧ್ಯಕ್ಷರಾದ ಶ್ರೀ ಬಿ.ಕೆ.ಚಂದ್ರಶೇಖರ್‌ರವರ ಸಮ್ಮುಖದಲ್ಲಿ ಸಂಘದ ಅಭಿವೃದ್ಧಿ ಕಾರ್ಯಗಳು ಸುಲಲಿತವಾಗಿ ನಡೆಯಲು ಮಾಸಿಕ, ದ್ವೈಮಾಸಿಕ ಸಭೆ ಹಾಗೂ ಕಾಮಗಾರಿ ಸಭೆಗಳನ್ನು ನಡೆಸಲಾಗುತ್ತಿದೆ.

## ಕುಡು ಒಕ್ಕಲಿಗ ಜಾತಿಯಲ್ಲಿ ಹುಟ್ಟಿದ ಸಿದ್ಧರಾಮ ಶೈವ ಧರ್ಮದ 'ಗುರು' ಆದ

# ಲಿಂಗಾಯತ ಧರ್ಮದ ಜಗದ್ಗುರುವೂ ಆದ–ಅದು ಹೇಗೆ!

ಯಾವುದೇ ಒಂದು ಸಮುದಾಯ, ತಾನು ಅಂಗೀಕರಿಸಿರುವ ಧರ್ಮದ ನೀತಿ, ನಿಯಮ, ನ್ಯಾಯಗಳಿಗೆ ಬದ್ಧರಾಗಿ ಅಧರ್ಮದ ತತ್ವ ಸಿದ್ಧಾಂತಗಳನ್ವಯ ಧಾರ್ಮಿಕ ವಿಧಿ–ವಿಧಾನಗಳನ್ನು ತನ್ನ ದೈನಂದಿನ ಆಚಾರ, ವಿಚಾರ, ನಡೆ ನುಡಿಗಳಲ್ಲಿ ತಪ್ಪದೆ ಪಾಲಿಸಿಕೊಂಡು ಬರುತ್ತಿದೆ ಎಂದಾದಲ್ಲಿ, ಅದರ ಪೂರ್ಣ ಶ್ರೇಯಸ್ಸು ಆ ಸಮುದಾಯದ ಧಾರ್ಮಿಕ ಹೊಣೆ ಹೊತ್ತ ಧರ್ಮದ ನಿರೂಪಕ, ನಿಯಂತ್ರಕ, ಮಾರ್ಗದರ್ಶಕರೂ ಆದ ಧರ್ಮ ಪೀಠದ ಧರ್ಮಾಧಿಕಾರಿ ಮಠಾಧೀಶರಿಗೆ ಸಲ್ಲುತ್ತದೆ. ಶಕ 11ನೇ ಶತಮಾನಕ್ಕೂ ಪೂರ್ವದಲ್ಲಿ, ನೊಳಂಬ ಸಮುದಾಯ ಶೈವ ಧರ್ಮಾವಲಂಬಿಗಳಾಗಿ, ಕ್ಷತ್ರಿಯ ಧರ್ಮಪಾಲಕರಾಗಿದ್ದರು. ಎಂಬ ಸತ್ಯವನ್ನು ಶಾಸನಗಳು ಹೇಳುತ್ತವೆ. ಸಾಮಾಜಿಕವಾಗಿ ಹಾಗು ಧಾರ್ಮಿಕವಾಗಿ ನೊಳಂಬ ಸಮುದಾಯ ಉನ್ನತಮಟ್ಟದ ಸಮಾಜ ಎನಿಸಿಕೊಂಡಿತ್ತು. ಶಕ 1055ರಲ್ಲಿ ರಾಜಕೀಯದಳ್ಳುರಿಗೆ ಸಿಕ್ಕಿ ಈ ಸಮುದಾಯ ಎಲ್ಲವನ್ನು ಕಳೆದುಕೊಂಡು ನಿರಾಶ್ರಿತರಾಗಿ ನಿಯಂತ್ರಕ ಮಾರ್ಗದರ್ಶಕ ರಿಲ್ಲದೆ, ಸಾಮಾಜಿಕವಾಗಿ ಹಾಗು ಧಾರ್ಮಿಕವಾಗಿ ಹೀನ ಸ್ಥಿತಿಗಿಳಿದರು.

ಶಕ 1196ರಲ್ಲಿ ಬಸವ ಪ್ರಣೀತ ಲಿಂಗಾಯತ ಧರ್ಮದ ಜಗದ್ಗುರು, 'ಶೂನ್ಯ' ಪೀಠಾಧೀಪತಿ ಶ್ರೀ ಗುರು ಸಿದ್ಧರಾಮೇಶ್ವರರ ಕೃಪಾದೃಷ್ಟಿಗೆ ಬಿದ್ದ ನೊಳಂಬ ಸಮುದಾಯ, ಲಿಂಗಾಯತ ಧರ್ಮವನ್ನು ಸ್ವೀಕರಿಸಿತು. ಸಿದ್ಧರಾಮೇ ಶ್ವರರಿಂದ 'ಇಷ್ಟಲಿಂಗದೀಕ್ಷೆ' ಹೊಂದಿ ತಮ್ಮ 'ಭವಿ' (ಕರ್ಮವನ್ನು ಮಾಡಿ ಮತ್ತೆ ಮತ್ತೆ ಹುಟ್ಟಿಬರುವವನು) ಸಂಸ್ಕೃತಿಯಿಂದ ಮುಕ್ತ ರಾದರು. ಜಗದ್ಗುರು ಶ್ರೀ ಸಿದ್ಧರಾಮೇಶ್ವರ ರಿಂದಾದ ಈ ಮಹೋಪಕಾರ ನೆನೆದು, ಅವರ ಜನ್ಮದಿನಾಚರಣೆಯನ್ನು ಭಕ್ತಿ ಶ್ರದ್ಧಾಪೂರ್ವಕವಾಗಿ ಆಚರಿಸಿಕೊಂಡು ಬರುತ್ತಿರುವ ಈ ಸಮುದಾಯ, ಅವರ ಮಹೋನ್ನತ ಜೀವನಚರಿತ್ರೆಯನ್ನು ತಿಳಿದುಕೊಂಡಿರುವುದಕ್ಕಿಂತಾ ತಿಳಿದುಕೊಂಡಿಲ್ಲದಿರುವುದೇ ಹೆಚ್ಚು.

ಶಕ ಹನ್ನೆರಡನೆ ಶತಮಾನದ ಸಾಮಾಜಿಕ ಪದ್ಧತಿಯಂತೆ ಜನಾಂಗವನ್ನು ನಾಲ್ಕು ವರ್ಗಗಳಾಗಿ ವಿಂಗಡಣೆಗೊಳಿಸಲಾಗಿತ್ತು. ಜನರ ಗುಣ–ಧರ್ಮಗಳಿಗೆ ಅನುಗುಣವಾಗಿ 'ಬ್ರಾಹ್ಮಣ' ಮೇಲುವರ್ಗವಾಗಿ 'ಶೂದ್ರ' ಅತ್ಯಂತ ಕೆಳವರ್ಗವಾಗಿ 'ಕ್ಷತ್ರಿಯ' ಮತ್ತು 'ವೈಶ್ಯ ಮಧ್ಯಮ ವರ್ಗವಾಗಿ ವಿಂಗಡಣೆಗೊಂಡಿತ್ತು. 'ಧರ್ಮ ಮತ್ತು ದೇವರು' ಬ್ರಾಹ್ಮಣ್ಯದ ಸ್ವತ್ತಾಗಿತ್ತು. ಇಂತಹ ಕಾಲದಲ್ಲಿ ಅತ್ಯಂತ ಕೆಳವರ್ಗದ 'ಶೂದ್ರ' ಕುಲದ, ಕುಡು ಒಕ್ಕಲಿಗ ಜಾತಿಯಲ್ಲಿ ಹುಟ್ಟಿ ಬಂದ ಸಿದ್ಧರಾಮ ಶೈವ ಧರ್ಮದ 'ಗುರು'ವಾದದ್ದಾದರೂ ಹೇಗೆ! 'ಗುರು'ವಾಗುವ ಅರ್ಹತೆ ಒದಗಿಬಂದಿದ್ದಾದರೂ ಹೇಗೆ! ಆ ಅರ್ಹತೆ ಗಳಿಸಲು ಸಾಮಾನ್ಯ ವಿದ್ಯಾಭ್ಯಾಸದ ಜೊತೆಗೆ ವಿಶೇಷವಾದ ಶೈವ ಧರ್ಮ ಶಿಕ್ಷಣ ದೊರೆತಿದ್ದಾದರೂ ಹೇಗೆ, ಸನ್ಯಾಸಿ ದೀಕ್ಷೆ ಮತ್ತು ಶೈವ ಧರ್ಮ ಗುರು ದೀಕ್ಷೆ ಕೊಟ್ಟು ಸೊನ್ನಲಾಪುರದ ಆಗಮೋಕ್ತ ಶೈವಧರ್ಮ ಸಂಸ್ಥಾನದ ಪೀಠಕ್ಕೆ ಗುರುವಾಗಿ ನಿಯಮಿ ಸಿದವರಾರು? ಈ ಎಲ್ಲಾ ಪ್ರಶ್ನೆಗಳಿಗೆ ಇಲ್ಲಿಯವರೆಗೆ ಯಾರೂ ಉತ್ತರ ಕಂಡುಕೊಂಡಂತೆ ಕಾಣುತ್ತಿಲ್ಲ ಅಲ್ಲವೇ?

ನಾನು, ನೀವು, ಮತ್ತು ಬೇರೆ ಎಲ್ಲರೂ ತಿಳಿದಿರುವಂತೆ ಮುಗ್ಧ, ಮೌನಿ, ಮೂಕಸಿದ್ಧರಾಮ, ಸೊನ್ನಲಾಪುರದ ಹೊರವಲಯದ ತನ್ನ ಹೊಲದ ಬದಿಯ ಮರದ ಕೆಳಗೆ ಕುಳಿತು ಕಣ್ಣು ಮುಚ್ಚಿ ಧ್ಯಾನಾಸಕ್ತನಾಗಿದ್ದಾಗ, ಶ್ರೀಶೈಲ ಕ್ಷೇತ್ರದ ಮಲ್ಲಯ್ಯನೆಂಬ ಜಂಗಮ ಬಂದು, ಹಸಿವಾಗಿದೆ ಮನೆಗೆ ಹೋಗಿ ಮೊಸರಂಬಲಿ ತಾ ಎಂದು ಕಳುಹಿಸಿ, ಸಿದ್ದರಾಮ ಬರುವುದರೊಳಗಾಗಿ ಅಲ್ಲಿರದಿರು ವುದು, ಮಲ್ಲಯ್ಯನನ್ನು ಹುಡುಕಿಕೊಂಡು ಸಿದ್ಧರಾಮ ಶೀಶೈಲಕ್ಕೆ ಬರುವುದು, ಮಲ್ಲಯ್ಯ ಗುಡಿಯೊಳಗಿದ್ದಾನೆ ಎಂದು ಹೇಳಿ ತಿಳಿದದ್ದು ತಾನು ಕಂಡ ಮಲ್ಲಯ್ಯ ಅಲ್ಲಿ ಇರದಿರುವುದು, ಮಲ್ಲಯ್ಯನನ್ನು ಹುಡುಕಿಕೊಂಡು ಕಾಡು–ಮೇಡು, ಹಳ್ಳ–ಕೊಳ್ಳ, ಗುಡ್ಡ–ಬೆಟ್ಟ, ಗವಿ–ಗವ್ವರ ಅಲೆದಿದ್ದು, ಪ್ರಾಣಾರ್ಪಣೆ ಮಾಡಲು ಶ್ರೀಶೈಲ ಶಿಖರದ ತುಟ್ಟ ತುದಿಯಿಂದ ರುದ್ರಗವ್ಹರಿಗೆ ಹಾರಿದ್ದು,



**ಚಂದ್ರಶೇಖರ ತಿ. ಚಿಂದಾಳ**
ಅಧ್ಯಕ್ಷರು, ಶ್ರೀಗುರು ಸಿದ್ಧರಾಮೇಶ್ವರ ಜ್ಞಾನಪ್ರಸಾರ ಕೇಂದ್ರ, "ಬಸವ ಚೇತನ", ತೋಟದ ಮನೆ, ಸಿದ್ಧರಾಮನಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
ಮೊ : 6366052331, 9449115995

ನೆಲಕ್ಕಪ್ಪಳಿಸಿ ಸಾಯುವ ಮುಂಚೆ 'ಶಿವ' ಪಾರ್ವತಿ ಸಮೇತ ಪ್ರತ್ಯಕ್ಷನಾಗಿ ಸಿದ್ಧರಾಮನನ್ನು ಆತು ಹಿಡಿದು ಅಪ್ಪಿಕೊಂಡದ್ದು, ಶಿವ 'ಆದಿಲಿಂಗ' ಸಿದ್ಧರಾಮನ ಕೈಲಿತ್ತು ಸೊನ್ನಲಿಗೆಯನ್ನು ಶ್ರೀಶೈಲದಂತೆ ಅಭಿವೃದ್ಧಿಪಡಿಸಲು ಆದೇಶವಿತ್ತು ಅಂತರ್ಧಾನ ನಾಗುವುದು. ಇಲ್ಲಿಗೆ ಸಿದ್ಧರಾಮನ ಬಾಲ್ಯ ಮುಗಿದಿದ್ದನ್ನು ತಿಳಿದಿದ್ದೇವೆ. ಮುಂದೆ ಅವನ 21ನೇ ವಯಸ್ಸಿನವರೆಗಿನ 14 ವರ್ಷಗಳನ್ನು ಎಲ್ಲಿ ಕಳೆದ ಯಾವ ರೀತಿಯಲ್ಲಿ ಕಳೆದ ಎಂಬುದಕ್ಕೆ ಪುರಾವೆ ದೊರಕದು. ಅದೂ ಅಲ್ಲದೆ, ಸಿದ್ಧರಾಮ ಶ್ರೀಶೈಲ ಶಿಖರದ ತುತ್ತ ತುದಿಯಿಂದ ರುದ್ರಗಮ್ಮರಿಗೆಯಲ್ಲಿ ಬಿದ್ದು ಪ್ರಾಣಾರ್ಪಣೆ ಮಾಡಿಕೊಳ್ಳುವ ಸಮಯಕ್ಕೆ ಸರಿಯಾಗಿ, ಶೀವ-ಪಾರ್ವತಿಯರು ಪ್ರತ್ಯಕ್ಷರಾಗಿ ಸಿದ್ಧರಾಮನನ್ನು ರಕ್ಷಿಸಿದರು ಎಂಬುದನ್ನು ಕಲಿಯುಗದಲ್ಲಿ ಒಪ್ಪತಕ್ಕ ಮಾತಲ್ಲ. ಕೃತ, ತ್ರೇತಾ, ದ್ವಾಪರ ಯುಗದಲ್ಲಿ ಆಗಿದ್ದರೆ ಒಪ್ಪಬಹುದಾಗಿತ್ತು ಎಂಬುದು ಈ ಕಾಲದ ಪ್ರಗತಿಪರ ಚಿಂತಕರ ಬುದ್ದಿಜೀವಿಗಳ, ಚಿಕಿತ್ಸಕ ಮನೋಭಾವದವರ ತರ್ಕಬದ್ಧ ಮಾತುಗಳೂ ಒಪ್ಪತಕ್ಕವುಗಳೇ ಅಲ್ಲವೇ! ಹಾಗಾದರೆ ಪ್ರಾಣಾರ್ಪಣೆ ಮಾಡಿಕೊಳ್ಳಲು ಹೊರಟ ಸಿದ್ಧರಾಮನನ್ನು ರಕ್ಷಿಸಿದವರು ಯಾರು? ಶಿವನಲ್ಲದಿದ್ದರೆ ಯಾರಾದರೂ ಒಬ್ಬರು ಬಂದು ರಕ್ಷಿಸಿರಬೇಕಲ್ಲವೇ!

ನನ್ನ ತೋಟದ ಮನೆಯ ಪುಸ್ತಕಗಳ ಸಂಗ್ರಹ ಕಪಾಟಿನಲ್ಲಿ ಪುಸ್ತಕ ಒಂದರ ಹುಡುಕಾಟದ ಸಮಯದಲ್ಲಿ; 'ಬಸವಪಥ' ಮಾಸಪತ್ರಿಕೆ ಕಣ್ಣಿಗೆಬಿದ್ದು ಅದನ್ನು ಎತ್ತಿಕೊಂಡೆ. ಬಸವ ಸಮಿತಿ ಬೆಂಗಳೂರು ಇವರಿಂದ ಪ್ರಕಟವಾದ ಜುಲೈ 2015ರ ಮಾಸಪತ್ರಿಕೆಯನ್ನು ಈ ಹಿಂದೆಯೇ ಓದಿ, ಸಿದ್ಧರಾಮನ ಬಾಲ್ಯದ ಒಂದು ಮಹತ್ವಪೂರ್ಣ ಮಾಹಿತಿ ಅದರಲ್ಲಿದ್ದುದರಿಂದ ಅಚಾನಕವಾಗಿ ಕೈಗೆ ಸಿಕ್ಕ ಈ ಮಾಸಪತ್ರಿಕೆಯಲ್ಲಿಯ ಸಿದ್ಧರಾಮನ ಬಾಲ್ಯದ ಮಹತ್ವಪೂರ್ಣ ವಿಷಯವಾಗಿ ಬೆಂಗಳೂರಿನ ಬೇಲಿಮಠಸಂಸ್ಥಾನದ ಅಧ್ಯಕ್ಷರಾದ ಪೂಜ್ಯ ಶ್ರೀ ಶಿವರುದ್ರಮಹಾಸ್ವಾಮಿಗಳ ಲೇಖನ ಒಂದರ ಪ್ಯಾರಾವನ್ನು ಯಥಾವತ್ತಾಗಿ ಕೊಡುತ್ತಿದ್ದೇನೆ. "ಸೊನ್ನಲಿಗೆಯ ಸಿದ್ಧರಾಮ ಮಲ್ಲಿನಾಥನ ಕೃಪೆಗಾಗಿ ಶ್ರೀಶೈಲಕ್ಕೆ ಬಂದು ಗುಡಿಯೊಳಗಣ ಲಿಂಗದ ದರ್ಶನದಿಂದ ತೃಪ್ತನಾಗದೆ ಆತ್ಮಾರ್ಪಣೆಗೆ ಸಿದ್ಧನಾದ. ಶ್ರೀ ಶಿವಯೋಗಿ ಮಲ್ಲರಸರು (ಅವರನ್ನು ಪ್ರತ್ಯಕ್ಷ ಮಲ್ಲಿಕಾರ್ಜುನ ಎಂದು ಭಕ್ತರು ಭಾವಿಸಿದ್ದರು.) ಸಮಾಧಾನಗೊಳಿಸಿ ಸಾಕಾರ ನಿಷ್ಠೆ, ಭೂತಂಗಳೊಳು ಅನುಕಂಪೆ, ತಾನೇ ಪರ ಬೊಮ್ಮ ನೆಂಬ ನಿಶ್ಚಯ ಜ್ಞಾನಿಯನ್ನಾಗಿಸಿ ಮತ್ತೆ ಸೊಲ್ಲಾಪುರ ಕಲ್ಯಾಣಕ್ಕೆ ಹಿಂದಿರುಗುವಂತೆ ಮಾಡಿದ ಸಂಗತಿ ಲೋಕೋತ್ತರ ಗೊಂಡಿದೆ" ಎಂದಿದ್ದಾರೆ. ಒಬ್ಬ ಸಾಮಾನ್ಯ, ಶೂದ್ರ ವರ್ಗದ, ಕುಡುವಕ್ಕಲಿಗ ಜಾತಿಯಲ್ಲಿ ಹುಟ್ಟಿದ ಮುಗ್ಧ, ಮೌನಿ, ಮೂಕ, ಏಳೆಂಟು ವರ್ಷ ವಯಸ್ಸಿನ ಬಾಲಕ ಸಿದ್ಧರಾಮನನ್ನು ರಕ್ಷಿಸಿ, ಸಹಕಾರ ನಿಷ್ಠೆ, ಭೂತಂಗಳೊಳು ಅನುಕಂಪೆ, ತಾನೇ ಪರಬೊಮ್ಮನೆಂಬ ನಿಶ್ಚಯ ಜ್ಞಾನಿಯನ್ನಾಗಿ ಪರಿವರ್ತಿಸುವುದೆಂದರೆ ಸಾಮಾನ್ಯ ವಿಷಯವೇನಲ್ಲ. ಇಂತಹ ಪರಿವರ್ತನೆಗೆ ತೆಗೆದುಕೊಂಡ ಕಾಲ ಸುಮಾರು 13 ವರ್ಷಗಳು ಎಂಬುದು ನೆನಪಿರಲಿ. ಸಿದ್ಧರಾಮನ ಈ ಪರಿವರ್ತನೆಗೆ ಕಾರಣರಾದವರು ಶ್ರೀ ಶಿವಯೋಗಿ ಮಲ್ಲರಸರು. ಹಾಗಾದರೆ ಈ ಮಲ್ಲರಸರು ಯಾರು?

ನಾಡಿನ ಹೆಸರಾಂತ ಸಂಶೋಧಕರು, ಘನ ವಿದ್ವಾಂಸರು, ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳು, ಪ್ರಾಚಾರ್ಯರು, ವಚನ ಸಂಪುಟಗಳ ಪ್ರಧಾನ ಸಂಪಾದಕರು, 'ಮಾರ್ಗ' ಸಾಹಿತ್ಯ ಸಂಪುಟಗಳ ಲೇಖಕರು, ಸಾಹಿತಿಗಳು ಆಗಿದ್ದ, ಲಿಂಗೈಕ್ಯ ಡಾ. ಎಂ.ಎಂ. ಕಲ್ಬುರ್ಗಿಯವರ ಮಾರ್ಗ ಸಂಪುಟ ನಾಲ್ಕು ಗ್ರಂಥದಲ್ಲಿ ಶ್ರೀ ಶಿವಯೋಗಿ ಮಲ್ಲರಸರವರನ್ನು ಕುರಿತು ಬಂದಿದ್ದ ವಿವರಣೆಗಳನ್ನು ದಾಖಲಿಸಿದ್ದಾರೆ. ಇತಿಹಾಸ ಗ್ರಂಥಗಳ ಅಧ್ಯಯನಶೀಲ ವ್ಯಕ್ತಿಗಳಿಗೆ 'ಕೆರೆಯ ಪದ್ಮರಸರ' ಹೆಸರು ಚಿರಪರಿಚಿತ. ಕ್ರಿ.ಶ. 13ನೇ ಶತಮಾನದಲ್ಲಿ ಹೊಯ್ಸಳ ಸಾಮ್ರಾಜ್ಯದ ಮಂತ್ರಿಯಾಗಿದ್ದ ಪದ್ಮರಸರು, ರಾಜಧಾನಿ ದೋರಸಮುದ್ರದ (ಈಗಿನ ಹಳೇಬೀಡು) ನಗರದ ಮುಂದಿನ ಕೆರೆಯನ್ನು ಕಟ್ಟಿಸಿದವರಾದುದರಿಂದ 'ಕೆರೆಯ ಪದ್ಮರಸ' ಎಂದು ಪ್ರಸಿದ್ಧನಾದ. ಲಿಂಗಾಯತ ಧರ್ಮಕ್ಕೆ ಸಂಸ್ಕಾರ ಮುಖಾಂತರ ಪ್ರವೇಶ ನೀಡುವ ಪಠ್ಯಗ್ರಂಥ 'ದೀಕ್ಷಾಬೋಧೆ' ಎಂಬ ಗ್ರಂಥ ರಚಿಸಿದವರು ಈ ಕೆರೆಯ ಪದ್ಮರಸ. ಕೆರೆಯ ಪದ್ಮರಸನ ತಂದೆ ಸಕಲೇಶ ಮಾದರಸರು. (ಸಿದ್ಧರಾಮನ ಬಾಲ್ಯದ ಗೆಳೆಯ) ಬಸವಣ್ಣನವರ ಸಮಾಜೋ-ಧಾರ್ಮಿಕ ಪರಿವರ್ತನಾ ಆಂದೋಳನದಲ್ಲಿ ಸಕ್ರಿಯವಾಗಿ ಭಾಗವಹಿಸಿದವ ಮತ್ತು ವಚನಕಾರ. ಈ ಸಕಲೇಶ ಮಾದರಸರ ತಂದೆಯೇ ಶ್ರೀ ಶಿವಯೋಗಿ ಮಲ್ಲರಸರು. (ತಿಳಿಯಿತಲ್ಲಾ ಶ್ರೀ ಶಿವಯೋಗಿ ಮಲ್ಲರಸರು ಯಾರು ಎಂದು.)

ಶ್ರೀಶೈಲ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಶ್ರೀಶೈಲ ಶಿಖರದ ಬುಡದ ವಿಶಾಲ ಸಮತಟ್ಟಾದ ಭೂಮಿಯಲ್ಲಿ, ಆಶ್ರಮ ಒಂದರ ನಿವಾಸಿಯಾಗಿದ್ದರು. ಶ್ರೀ ಶಿವಯೋಗಿ ಮಲ್ಲರಸರು, ಮಹಾಜ್ಞಾನಿಯು, ಮಹಾತಪಸ್ವಿಗಳೂ, ಸದಾ 'ಶಿವ' ಚಿಂತನಾ ನಿರತರೂ ಆಗಿದ್ದ ಶ್ರೀ ಶಿವಯೋಗಿ ಮಲ್ಲರಸರು, ಶ್ರೀಶೈಲ ಕ್ಷೇತ್ರದಲ್ಲಿದ್ದ ಮಲ್ಲಿನಾಥ ವಿಶ್ವವಿದ್ಯಾಲಯದ ಕುಲಪತಿಗಳು, ಶೈವ ಧರ್ಮ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯರೂ ಆಗಿದ್ದರು. ಪರಧರ್ಮಗಳ ಆಕ್ರಮಣಕ್ಕೆ ಗುರಿಯಾಗಿ, ಮತ್ತು

ದಕ್ಷ, ಪ್ರಾಮಾಣಿಕ, ಧರ್ಮ ನಿಷ್ಠ ಕಾರ್ಯಕರ್ತರ ಕೊರತೆಯನ್ನು ಅನುಭವಿಸುತ್ತಾ, ಶಕ್ತಿಗುಂದುತ್ತಿದ್ದ ಆಗಮೋಕ್ತ ಶೈವ ಧರ್ಮವನ್ನು ರಕ್ಷಿಸಲು, ನಾಡಿನಾದ್ಯಂತ ಸಂಚರಿಸುತ್ತಾ, ಬಾಲ ಪ್ರತಿಭೆಗಳನ್ನು ಹುಡುಕಿ ಕರೆತಂದು ಆಶ್ರಯ ನೀಡಿ ಪ್ರಾಥಮಿಕ ಹಂತದಿಂದ ಪದವಿಯೋತ್ತರ ಉನ್ನತ ಶಿಕ್ಷಣ ನೀಡಿ, ಅವರವರ ಯೋಗ್ಯತಾನುಸಾರ ಶೈವ ಧರ್ಮದ ವಿವಿಧ ಕಾರ್ಯಕ್ಷೇತ್ರಗಳಿಗೆ ನಿಯೋಜಿಸುವ ಬಹುದೊಡ್ಡ ಹೊರೆಯೂ ಅವರದಾಗಿತ್ತು. ಇಂತಹ ಮಹಾಮಹಿಮರಾದ ಶ್ರೀ ಶಿವಯೋಗಿ ಮಲ್ಲರಸರನ್ನು ಅಂದಿನ ಜನರು ಪ್ರತ್ಯಕ್ಷ ಮಲ್ಲಿಕಾರ್ಜುನ ಎಂದು ಭಾವಿಸಿ ಆರಾಧಿಸುತ್ತಿದ್ದರು. ಅದೊಂದು ದಿನ ಮುಂಜಾನೆ ನಸುಕಿನಲ್ಲಿ ತನ್ನ ಆಶ್ರಮದ ತಪೋವನದಲ್ಲಿ ಆಳವಾದ ಧ್ಯಾನದಲ್ಲಿ ಮುಳುಗಿದ್ದಾಗ ಒಂದು ದೃಶ್ಯ ಅವರ ಸ್ಮೃತಿಪಟಲದಲ್ಲಿ ಬಂದು ನಿಂತಂತಾಗಿ, ಥಟ್ಟನೆ ಎಚ್ಚರಗೊಂಡು ಎದ್ದು ಲಗುಬಗೆಯಿಂದ ಕಾವಿ ನಿಲುವಂಗಿ ತೊಟ್ಟು, ಕಾವಿರುಮಾಲು ತಲೆಗೆ ಸುತ್ತಿ, ಬಗಲಿಗೆ ಕಾವಿ ಜೋಳಿಗೆ ಸಿಗಿಸಿ, ಕಾಲಲ್ಲಿ ಹಾವುಗೆ ತೊಟ್ಟು, ಕೈಯಲ್ಲಿ ಬೆತ್ತದಕೋಲು ಹಿಡಿದು, ಆಶ್ರಮದಿಂದ ನಿರ್ಗಮಿಸಿ, ಬೆಟ್ಟದಿಂದ ಘಟ್ಟ ಇಳಿದು, ಸೊನ್ನಲಿಗೆಯ ದಾರಿ ಹಿಡಿದು ನಡೆಯತೊಡಗಿದರು. ಮಟ ಮಟ ಮಧ್ಯಾಹ್ನ ಸೊನ್ನಲಿಗೆ ಸಮೀಪಿಸುತ್ತಿದ್ದಂತೆ ದಾರಿಯ ಪಕ್ಕ ಮೈದಾನದಲ್ಲಿ ಎಂಟು ಹತ್ತು ಬಾಲಕರು ಗದ್ದಲ ಗೈಯುತ್ತಾ ಆಟವಾಡುತ್ತಿದ್ದುದನ್ನು ಗಮನಿಸಿದ ಶ್ರೀ ಶಿವಯೋಗಿ ಮಲ್ಲರಸರು, ತಾನು ಧ್ಯಾನಾವಸ್ಥೆಯಲ್ಲಿದ್ದಾಗ ಕಂಡ ದೃಶ್ಯ ಇದೇ ಇರಬಹುದೇ, ಈ ಹತ್ತು ಹುಡುಗರಲ್ಲಿ ತಾನು ಕಂಡ ಆ ಮುಖದ ಬಾಲಕ ಇರಬಹುದೇ, ಎಂದು ಯೋಚಿಸುತ್ತಾ ಆ ಕಡೆ ನಡೆದರು. ಯಾರೋ ಜಂಗಮಯ್ಯ ಬರುತ್ತಿರುವುದನ್ನು ನೋಡಿದ ಹುಡುಗರು ಆಟವಾಡುವುದನ್ನು ನಿಲ್ಲಿಸಿ, ಬಂದ ಜಂಗಮಯ್ಯನ ಸುತ್ತಾ ನಿಂತರು. ಶ್ರೀ ಶಿವಯೋಗಿ ಮಲ್ಲರಸರು ತಮ್ಮ ಜೋಳಿಗೆಯೊಳಗೆ ಕೈಹಾಕಿ ತಮ್ಮ ಸುತ್ತ ನಿಂತಿದ್ದ ಹುಡುಗರೆಲ್ಲರಿಗೂ ಹುರಿಕಡಲೆ ಬೆಲ್ಲ ಹಂಚುತ್ತ ಒಬ್ಬೊಬ್ಬರ ಮುಖವನ್ನೂ ಪರಿಶೀಲಿಸ ತೊಡಗಿದರು. ಆದರೆ, ಆ ಮುಖದ ಬಾಲಕನಿಲ್ಲದಿರುವುದು ಅವರಿಗೆ ನಿರಾಶೆಯಾಯ್ತು. ದೃತಿಗೆಡದೆ ಮಕ್ಕಳೆ ನನಗೆ ಕೀಚುಗಾಳು ನವಣೆ ತಿನ್ನಬೇಕೆನಿಸಿದೆ, ಹೊತ್ತು ನವಣೆ ತೆನೆ ಹರಿದು ತರುವಿರ ಎನಲು, ಹೊಲ ನಮ್ಮದಲ್ಲ, ಓ.. ಅಲ್ಲಿ ಮರದಡಿ ನೆರಳಿನಲ್ಲಿ ಕಣ್ಣು ಮುಚ್ಚಿ ಕುಳಿತಿದ್ದಾನಲ್ಲ ಅವನದು. ಕೇಳಿದರೆ ನವಣೆ ತೆನೆ ಏನು, ನವಣೆ ಹೊಲವನ್ನೆ ಕೊಟ್ಟುಬಿಡುತ್ತಾನೆ, ಹೋಗಿ ಕೇಳಿ ಎಂದರು. ಮಲ್ಲರಸರ ಆಸೆ ಚಿಗುರೊಡೆಯಿತು. ಆ ಮುಖದ ಹುಡುಗ ಅವನಾಗಿರಬಹುದೇ ಎಂದು ಯೋಚಿಸುತ್ತಾ ಅವನೆಡೆಗೆ ನಡೆದರು. ಹೋಗಿ ನೋಡುತ್ತಾರೆ! ಏನಾಶ್ಚರ್ಯ 'ಅವನೇ ಇವನು' ಎಂದು ಮನಸ್ಸಿನಲ್ಲಿಯೇ ಉದ್ಗರಿಸಿದರು. ಬಾಲಕನ ಮುಂದೆ ನಿಂತು ನೋಡಿದರು. ನೋಡಿಯೇ ನೋಡುತ್ತಾ ನಿಂತೇಬಿಟ್ಟರು. ಶಿವಯೋಗಿಗಳು, ಎಷ್ಟೊತ್ತಾದರೂ ಎಚ್ಚರಗೊಳ್ಳಲೇ ಇಲ್ಲದ ಬಾಲಕನನ್ನು ತಾನೇ ಎಚ್ಚರಗೊಳಿಸಲು ಮುಂದಾಗಿ 'ಮಗೂ' ಎಂದು ಕರೆದರು. ಎಚ್ಚರಗೊಳ್ಳದಾದಾಗ ಅವನ ಮೈಮುಟ್ಟಿ ಅಲುಗಾಡಿಸಿ ಎಚ್ಚರಗೊಳ್ಳುವಂತೆ ಮಾಡಿದರು ಎಚ್ಚರಗೊಂಡು ಕಣ್ತೆರೆದ, ಬಾಲಕ, ಮುಂದೆ ನಿಂತಿದ್ದ ಜಂಗಮಯ್ಯನನ್ನು ನೋಡಿ ಅವಕ್ಕಾಗಿ ಎದ್ದು ನಿಂತು ಕಾಲಿಗೆರಗಿ 'ತಾವು ಯಾರು', ಹುಟ್ಟಿದಾರಭ್ಯ ಮಾತನಾಡದ ಸಿದ್ಧರಾಮನ ಮೊದಲ ಮಾತು ಇದು, ನಿನಗೆ ಮಾತು ಬರಲ್ಲ ಮೂಕ ಎಂದರಲ್ಲಾ ಆ ಹುಡುಗರು, ಎಂದರು ಮಲ್ಲರಸರು. ಅವರು ನನ್ನನ್ನು 'ಧೂಳೀ ಮಾಕಾಳ' ಎಂದು ಕರೆಯುತ್ತಾರೆ. ಅದಕ್ಕೆ ಮಾತನಾಡಲ್ಲ ಎಂದ ಸಿದ್ಧರಾಮ. ಹಾಗಾದರೆ ನಿನ್ನ ಹೆಸರೇನು ಕೇಳಿದರು ಮಲ್ಲರಸರು. ನನ್ನ ಹೆಸರು ಸಿದ್ಧರಾಮ, ನಿಮ್ಮ ಹೆಸರು, ಊರು ಯಾವುದು, ನನ್ನನ್ನು ಮಲ್ಲಯ್ಯ ಎಂದು ಜನ ಪ್ರೀತಿಯಿಂದ ಕರೆಯುತ್ತಾರೆ. ನಾವಿರುವುದು ಶ್ರೀಶೈಲದಲ್ಲಿ ಎಂದರು ಮಲ್ಲರಸರು. ಮಗು ನೀನು ಕಣ್ಣು ಮುಚ್ಚಿ ಕುಳಿತು ಏನು ಮಾಡುತ್ತಿದ್ದೆ ಕೇಳಿದರು ಮಲ್ಲರಸರು. ದೇವರ ಧ್ಯಾನ ಮಾಡುತ್ತಿದ್ದೆ ಎಂದ ಸಿದ್ಧರಾಮ. ಮುಂದುವರಿದು ಮಲ್ಲಯ್ಯನವರೆ ನೀವು ದೇವರನ್ನು ನೋಡಿದ್ದೀರಾ. ಓ. ನೋಡಿದ್ದೀನಲ್ಲ ಎಂದರು ಮಲ್ಲರಸರು. ನನಗೂ ದೇವರನ್ನು ನೋಡಬೇಕೆಂಬಾಸೆ ತೋರಿಸುತ್ತೀರ, ಹೇಳಿದ ಸಿದ್ಧರಾಮ. ನಮ್ಮೂರಿಗೆ ಬಂದರೆ ತೋರಿಸುತ್ತೇನೆ ಬರುವೆಯಾ ಎಂದರು. ಮಲ್ಲರಸರು ಏನನ್ನೂ ಹೇಳದೆ ಸಿದ್ಧರಾಮ ಮೌನಿಯಾದ. ಒತ್ತಡ ಹೇರಿದರೆ ಕೆಲಸ ಕೆಡುತ್ತದೆ, ಅವನಾಗಿಯೇ ಬರಬೇಕು ಎಂದಾದರೆ ಅವನಿಗೆ ಅರಿಯದೆ ನಾನಿಲ್ಲಿಂದ ಹೋಗಬೇಕು ಎಂದುಕೊಂಡ ಮಲ್ಲರಸರು, ಮಗೂ ನನಗೆ ಹಸಿವಾಗಿದೆ ಮನೆಗೆ ಹೋಗಿ ಮೊಸರಂಬಲಿ ತರುವೆಯಾ ಎಂದು ಕೇಳಿದರು. ಸಿದ್ಧರಾಮ ಅತ್ತ ಹೋಗಲು ಇತ್ತ ಶಿವಯೋಗಿ ಮಲ್ಲರಸರು ಶ್ರೀಶೈಲದ ತಮ್ಮ ಆಶ್ರಮದತ್ತ ನಡೆದರು. ಸಿದ್ಧರಾಮ ಆತ್ಮಾರ್ಪಣೆ ಮಾಡಲು ಶ್ರೀಶೈಲ ಶಿಖರದ ತುತ್ತ ತುದಿಯಲ್ಲಿ ನಿಲ್ಲುವವರೆಗಿನ ಕಥೆ ನೀವು ತಿಳಿದಿರುವಂತದ್ದೆ, ವ್ಯತ್ಯಾಸವೇನಿಲ್ಲ.

ಎಲ್ಲೆಲ್ಲಿ ಹುಡುಕಿದರೂ ಮಲ್ಲಯ್ಯ ಸಿಗದೆ ಇದ್ದಾಗ ಬೇಸತ್ತ ಸಿದ್ಧರಾಮ ತನ್ನ ಪ್ರಾಣ ತ್ಯಾಗ ಮಾಡಲು ಸಿದ್ಧನಾದ. ದುಃಖ ಉಮ್ಮಳಿಸಿ ಬಂತು, ತಡೆಯಲಾಗದೆ ಕೂಗಿ ಹೇಳಿದ "ಏ... ಮಲ್ಲಯ್ಯ ನೀನು ಎಲ್ಲಿದ್ದರೂ ಸಂಜೆ ಸೂರ್ಯ ಮುಳುಗುವದೊರಳಗಾಗಿ ಬಾರದಿದ್ದರೆ, ಶ್ರೀಶೈಲ

ಶಿಖರವೇರಿ ರುದ್ರಗಮ್ಮರಿಯೊಳಗೆ ಬಿದ್ದು ಸಾಯುವೆ" ಎಂದು ಶಪಥ ಗೈದ. ಸಿದ್ಧರಾಮ ಕೂಗಿ ಹೇಳಿದ ಈ ಮಾತುಗಳನ್ನು ಕೇಳಿಸಿಕೊಂಡವರಾರೋ ಸಮೀಪದ ಆಶ್ರಮದಲ್ಲಿದ್ದ ಶ್ರೀ ಶಿವಯೋಗಿ ಮಲ್ಲಯ್ಯನವರಿಗೆ ಸುದ್ದಿ ಮುಟ್ಟಿಸಿದರು. ಅವನು ಸಿದ್ಧರಾಮನೆಂದರಿತ ಶಿವಯೋಗಿ ಮಲ್ಲರಸರು ಅವಸರವಸರದಿಂದ ಓಡೋಡುತ್ತ ಶಿಖರದತ್ತ ಬಂದರು. ಸಿದ್ಧರಾಮ ಶಿಖರವೇರತೊಡಗಿದ್ದನ್ನು ನೋಡಿದ ಮಲ್ಲರಸರು, ಅವನನ್ನು ಹಿಂಬಾಲಿಸತೊಡಗಿದರು. ಸಿದ್ಧರಾಮ ಮುಂದೆ ಮಲ್ಲರಸರು ಹಿಂದೆ ಸಿದ್ಧರಾಮ ಶಿಖರದ ತುಟ್ಟ ತುದಿಯಲ್ಲಿ ನಿಂತು ಸೂರ್ಯ ಮುಳುಗುವುದನ್ನು ಕಾಯುಯತ್ತಿದ್ದ. ಅಷ್ಟರಲ್ಲಿ ಮಲ್ಲರಸರು ಅವನ ಹಿಂದೆ ಬಂದು ನಿಂತರು. ನೆಗೆಯುವ ಭಂಗಿಯಲ್ಲಿದ್ದ ಸಿದ್ಧರಾಮನ ತೋಳು ಹಿಡಿದು ತನ್ನತ್ತ ಎಳೆದುಕೊಂಡ ಶಿವಯೋಗಿ ಮಲ್ಲರಸರು 'ಸಿದ್ಧರಾಮ ಇದೋ ನಾನು ಬಂದಿದ್ದೇನೆ' ಎಂದುಹೇಳುತ್ತಾ ಎದೆಗಪ್ಪಿಕೊಂಡರು. ಕೋಪ, ದುಃಖದಲ್ಲಿದ್ದ ಸಿದ್ಧರಾಮನನ್ನು ಸಮಾಧಾನಪಡಿಸಿ,ತನ್ನ ಆಶ್ರಮಕ್ಕೆ ಕರೆದೊಯ್ದರು. ಎರಡು ದಿನಗಳಿಂದ ಊಟ, ನಿದ್ರೆ ಇಲ್ಲದೆ ಮಲ್ಲಯ್ಯನನ್ನು ಹುಡುಕುತ್ತಾ ಅಲೆದಾಡಿ ನಿತ್ರಾಣನಾಗಿದ್ದ ಸಿದ್ಧರಾಮನನ್ನು ನಿರಂತರ ಎಂಟಹತ್ತು ದಿನಗಳವರೆಗೆ ಹಾರೈಕೆ ಮಾಡಿ, ಮೊದಲಿನಂತಾದಾಗ ತನ್ನ ಮಗ 'ಸಕಲೇಶ ಮಾದರಸ' ಸಂಗಡ ಪ್ರಾಥಮಿಕ ಶಿಕ್ಷಣ ಶಾಲೆಗೆ ಕಲಿಯಲು ಕಳುಹಿಸಿದರು. ಶ್ರೀ ಶಿವಯೋಗಿ ಮಲ್ಲರಸರ ಮಗ ಸಕಲೇಶ ಮಾದರಸ ಮತ್ತು ಸಿದ್ಧರಾಮ ಇಬ್ಬರೂ ಸಮವಯಸ್ಕರು. ಅನ್ಯೋನ್ಯದಿಂದ ಇಬ್ಬರೂ ಜೊತೆಗೂಡಿ ಆಟಪಾಠದಲ್ಲಿ ಭಾಗವಹಿಸುತ್ತಾ, ಶ್ರೀ ಶಿವಯೋಗಿ ಮಲ್ಲರಸ ಕಣ್ಗಾವಲಿನಲ್ಲಿ ಮಲ್ಲಿನಾಥ ಮಹಾವಿದ್ಯಾಲಯದಲ್ಲಿ ಸಾಮಾನ್ಯ ಜ್ಞಾನ ವಿಷಯದಲ್ಲಿ ಪದವೀಧರರಾದರು. ಇವರಿಬ್ಬರೂ ಈಗ 18 ವರ್ಷ ವಯಸ್ಸಿನ ತರುಣರು. ಇದೇ ಸಮಯದಲ್ಲಿ ಚಾಲುಕ್ಯ ಸಾಮ್ರಾಜ್ಯದ ಅರ್ಥಮಂತ್ರಿಯಾಗಿದ್ದ ಬಸವಣ್ಣನವರ ನೇತೃತ್ವದಲ್ಲಿ ಸಮಾಜೋ–ಧಾರ್ಮಿಕ ಸುಧಾರಣೆ ಮತ್ತು 'ಪರಿವರ್ತನಾ ಚಳವಳಿ ಬಹಳ ಬಿರುಸಿನಿಂದ ನಡೆಯುತ್ತಿತ್ತು. ಸಾಮಾನ್ಯಜ್ಞಾನದ ವಿಷಯದಲ್ಲಿ ಪದವೀಧರನಾದ, ಶಿವಯೋಗಿ ಮಲ್ಲರಸರ ಮಗ, ಸಕಲೇಶ ಮಾದರಸ, ತನ್ನ ಮುಂದಿನ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ಬಸವಣ್ಣನವರ ನೇತೃತ್ವದ ಆಂದೋಲನದಲ್ಲಿ ಭಾಗವಹಿಸಲು ಕಲ್ಯಾಣನಗರದತ್ತ ಹೊರಟುಹೋದ. ಆಧ್ಯಾತ್ಮದ ಹಂಬಲದಿಂದ ಸಿದ್ಧರಾಮ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಿ, ಮಲ್ಲಿನಾಥ ವಿಶ್ವವಿದ್ಯಾಲಯದ, ಪದವಿಯೋತ್ತರ ಶೈವಧರ್ಮ ಮಹಾವಿದ್ಯಾಲಯದ, ಶೈವಧರ್ಮತತ್ವ ಸಿದ್ಧಾಂತದಲ್ಲಿ ಸ್ನಾತಕೋತ್ತರ, ಪದವೀಧರನಾದ. ಸಿದ್ಧರಾಮನಲ್ಲಿ ಹುದುಗಿದ್ದ ಅಪಾರ ಆಧ್ಯಾತ್ಮಿಕ ಶಕ್ತಿಯನ್ನು ಗುರುತಿಸಿದ ಶಿವಯೋಗಿ ಮಲ್ಲರಸರು, ಸಿದ್ಧರಾಮನಿಗೆ 'ಸನ್ಯಾಸ' ದೀಕ್ಷೆ ಜೊತೆಗೆ ಶೈವಧರ್ಮ ಗುರುದೀಕ್ಷೆ ಕರುಣಿಸಿ, ಸೊನ್ನಲಾಪುರದ ಶೈವ ಧರ್ಮ ಸಂಸ್ಥಾನದ ಪೀಠಾಧಿಪತಿಯನ್ನಾಗಿ ಮಾಡಿ ಆಶೀರ್ವದಿಸಿ ಕಳುಹಿಸಿಕೊಟ್ಟರು. ಇದಿಷ್ಟು ಸಿದ್ಧರಾಮನ ಬಾಲ್ಯದಿಂದ ತಾರುಣ್ಯದವರೆಗೆ ನಡೆದ ಸತ್ಯಸಂಗತಿ.

ಸಿದ್ಧರಾಮ ಶ್ರೀ ಶಿವಯೋಗಿ ಮಲ್ಲರಸರಿಂದ ರಕ್ಷಿಸಲ್ಪಟ್ಟು, ಅವರ ಆಶ್ರಯದಲ್ಲಿ ತನ್ನ ಶಿಕ್ಷಣ ಮುಗಿಸಿ, ಅವರಿಂದಲೇ ಶೈವ ಗುರುದೀಕ್ಷೆ ಪಡೆದು ಸೊನ್ನಲಾಪುರದ ಆಗಮೋಕ್ತ ಶೈವಧರ್ಮ ಸಂಸ್ಥಾನದ ಗುರುವಾಗಿ ನಿಯುಕ್ತಿಗೊಂಡು ಧರ್ಮಾಧಿಕಾರಿಯಾಗಿ, ಧರ್ಮಕಾರ್ಯದಲ್ಲಿ ನಿರತನಾಗಿ, ಧರ್ಮಸಂಸ್ಥಾನದ ವ್ಯಾಪ್ತಿಯಲ್ಲಿ ಸಂಚಾರ ಕೈಗೊಂಡು ನಿರೀಕ್ಷಣೆಯಲ್ಲಿ ಅಲ್ಲಿಯ ಧಾರ್ಮಿಕ ಸ್ಥಿತಿಗತಿಯನ್ನು ಗಮನಿಸಿ ನೋಡಿದಾಗ, ಸ್ಥಳೀಯ ಕುಟಿಲ ಸಿದ್ಧರ, ಕಾಮುಕ ಕಾಪಾಲಿಕರ, ದುಷ್ಟಶಕ್ತಿ ದೇವತೆಗಳನ್ನು ಕೈವಶಮಾಡಿಕೊಂಡಿದ್ದ ಮಾಂತ್ರಿಕರ ಆಟಾಟೋಪ ಎಲ್ಲೆಮೀರಿ, ಜನರು ನಲುಗಿ ಹೋಗಿದ್ದರು. ಪ್ರಕೃತಿ ವಿಕೋಪದಿಂದಾಗಿ ಕಾಲ ಕಾಲಕ್ಕೆ ಮಳೆ ಬೀಳದೆ ಬಿತ್ತಿದ ಬೆಳೆ ಕೈ ಸೇರದೆ ಜನ ತತ್ತರಿಸಿ ಹೋಗಿದ್ದರು. ಜನರ ಜೀವನ ಪರಿಸ್ಥಿತಿ ನೋಡಿ ಮರುಗಿದ ಶ್ರೀ ಗುರು ಸಿದ್ಧರಾಮೇಶ್ವರರು ತಾನು ಗಳಿಸಿದ್ದ ಜಲಾನ್ವೇಶಣ ಶಕ್ತಿಯಿಂದ ನಾಡಿನ ಜಲ ಮೂಲಗಳನ್ನು ಕಂಡುಹಿಡಿದು ಕೆರೆ, ಕಟ್ಟೆ, ಬಾವಿಗಳನ್ನು ಜನರ ಸಹಕಾರದಿಂದ ನಿರ್ಮಾಣ ಮಾಡಿ ನೀರಿನ ಕೊರತೆಯನ್ನು ನೀಗಿಸಿದರು. ಪ್ರಸನ್ನಗೊಂಡ ಪ್ರಕೃತಿಯೂ ಕಾಲ ಕಾಲಕ್ಕೆ ಮಳೆ ಸುರಿಯತೊಡಗಿ ನಾಡು ಸಮೃದ್ಧವಾಗತೊಡಗಿತು. ಧರ್ಮಾಧಿಕಾರ ಸ್ವೀಕರಿಸಿದ ಅಲ್ಪ ಸಮಯದಲ್ಲಿಯೇ ಸಿದ್ಧರಾಮೇಶ್ವರರು ನಾಡಿನಾದ್ಯಂತ ಚಿರಪರಿಚಿತರಾಗಿ ನಾಡಾಳುವ ರಾಜರುಗಳಿಂದ ಮಾನ್ಯರಾದರು. ಸಿದ್ಧರಾಮೇಶ್ವರರ ಪ್ರಭಾವ ಬೆಳೆದಂತೆ ಕುಟಿಲ ಸಿದ್ಧರು, ಕಾಮುಕ ಕಾಪಾಲಕರು, ಕ್ಷುದ್ರ ಶಕ್ತಿದೇವತೆಗಳ ಉಪಾಸಕರೆಲ್ಲರೂ ಸಿದ್ಧರಾಮೇಶ್ವರರಿಗೆ ಶರಣಾದರು. ಸಿದ್ಧರಾಮೇಶ್ವರರು ನಾಡಿನಾದ್ಯಂತ ಶಿವಲಿಂಗಗಳನ್ನು ಸ್ಥಾಪಿಸಿ, ಶೈವ ಧರ್ಮ ಪ್ರಭಾವಯುತವಾಗಿ ಬೆಳೆದು, ಜನರೆಲ್ಲರೂ ಶೈವ ಧರ್ಮದ ಅನುಯಾಯಿಗಳಾಗಿಹೋದರು. ಸೊನ್ನಲಿಗೆಯ ಸಿದ್ಧರಾಮ ಬಹುದೊಡ್ಡ ಶೈವ ಗುರುವಾಗಿ ಮೆರೆಯತೊಡಗಿದ್ದ ಸಮಯದಲ್ಲಿ, ಸೊನ್ನಲಿಗೆಯ ಪೂರ್ವ ದಿಕ್ಕಿನ ಕೆಲವೇ ಕೆಲವು ಗಾವುದ ದೂರದಲ್ಲಿದ್ದ ಕಲ್ಯಾಣ ನಗರದ ಬಸವಣ್ಣನವರಿಂದ ಸ್ಥಾಪಿತವಾದ 'ಲಿಂಗಾಯತ'

ವೆಂಬ ಹೊಸಧರ್ಮ ಬೆಳೆದು ನಾಡಿನಾದ್ಯಂತ ಪಸರಿಸಿತ್ತು. ಶೈವಧರ್ಮದ ಅನುಯಾಯಿಗಳೆಲ್ಲರೂ ಲಿಂಗಾಯತ ಧರ್ಮ ಸ್ವೀಕರಿಸಿ, ತಮ್ಮಂಗದ ಮೇಲೆ ಲಿಂಗ ಧರಿಸಿ, ಲಿಂಗಾಯತ ಧರ್ಮದ ಪ್ರಗತಿಪರ ನೀತಿಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಭಕ್ತರಾಗಿ ಹೋದರು. ಶೈವ ಧರ್ಮದ ನೂರಾರು ಗುರು ಪೀಠಗಳ ಶಿವಾಚಾರ್ಯರು, ಪುರೋಹಿತರು, ಅರ್ಚಕರು, ಲಿಂಗಾಯತ ಧರ್ಮ ಸ್ವೀಕರಿಸಿ, ಜನಿವಾರ ತ್ಯಜಿಸಿ ಲಿಂಗದೀಕ್ಷೆ ಪಡೆದು ಲಿಂಗಾಯತ ಧರ್ಮದೊಳಗೆ ಲೀನವಾಗಿ ಹೋದರು. ಆದರೆ ಸೊನ್ನಲಿಗೆಯ ಶೈವ ಗುರು ಸಿದ್ಧರಾಮ ಮಾತ್ರ ತನಗೇನೂ ಗೊತ್ತೆ ಇಲ್ಲವೇನೊ ಎಂಬಂಥೆ, ತನ್ನ ಪಾಡಿಗೆ ತಾನು ಶೈವ ಧರ್ಮ ಪರಿಪಾಲಕರಾಗಿ ಶೈವ ಭಕ್ತಿಯನ್ನು ಸೊನ್ನಲಾಪುರ ಮಂಡಲ ವ್ಯಾಪ್ತಿಯಾದ್ಯಂತ ಜನರಲ್ಲಿ ಮೂಡಿಸಲು ನಿರತರಾಗಿದ್ದರು. ಆಗಮೋಕ್ತ ಶೈವಧರ್ಮದ ಎಲ್ಲಾ ಮಠ, ಪೀಠಗಳ ಶಿವಾಚಾರ್ಯರು ಮತ್ತು ಅವರ ಅನುಯಾಯಿಗಳು ಬಸವಣ್ಣನವರ ಲಿಂಗಾಯತ ಧರ್ಮ ಸ್ವೀಕರಿಸಿ ಲಿಂಗಾಂಗಿಗಳಾದರೂ, ಶ್ರೀಗುರು ಸಿದ್ಧರಾಮೇಶ್ವರರು ಮಾತ್ರ ತನ್ನ ಸಾವಿರಾರು ಅನುಯಾಯಿಗಳೊಂದಿಗೆ ಹೊರಗೇ ಉಳಿದಿರುವುದನ್ನು ಅರಿತ ಬಸವಣ್ಣನವರು, ಲಿಂಗಾಯತ ಧರ್ಮದ ಪ್ರಮುಖ ಶರಣರಿಂದ ಕೂಡಿದ ನಿಯೋಗವನ್ನೂ ಸಿದ್ಧರಾಮೇಶ್ವರರಲ್ಲಿ ಕಳುಹಿಸಿ ಪ್ರಯತ್ನಸಿದರೂ ಸಿದ್ಧರಾಮರನ್ನು ಸೆಳೆಯಲು ಸಾಧ್ಯವಾಗದಿದ್ದುದು ಬಸವೇಶ್ವರರಿಗೆ ಯೋಚನೆಗಿಟ್ಟುಕೊಂಡಿತು. ಸಿದ್ಧರಾಮರು ಲಿಂಗಾಯತ ಧರ್ಮದೊಳಗೆ ಬಾರದಿದ್ದರೆ, ಧರ್ಮ ಪರಿಪೂರ್ಣವಾಗದೆಂದರಿತ ಬಸವಣ್ಣನವರು, ಅದೊಂದು ದಿವಸ ಯಾರಿಗೂ ತಿಳಿಯದೆ ಹಾಗೆ ಸಾಮಾನ್ಯ ವೇಶದಾರಿಯಾಗಿ ಕುದುರೆ ಏರಿ ಸೊನ್ನಲಿಗೆಯತ್ತ ದೌಡಾಯಿಸಿದರು. ಮರುದಿನ ಮುಂಜಾನೆ ಸಿದ್ಧರಾಮೇಶ್ವರರ ಮಠದ ಮುಂದೆ ಬಂದು ನಿಂತ ಬಸವಣ್ಣನವರು, ಒಬ್ಬ ಸಾಮಾನ್ಯ ಭಕ್ತನಂತೆ ಸಿದ್ಧರಾಮೇಶ್ವರರ ದರ್ಶನ ಪಡೆಯಲು ಭಕ್ತರ ಸರತಿಯ ಸಾಲಿನಲ್ಲಿ ಕೊನೆಯವರಾಗಿ ನಿಂತರು. ತನ್ನ ಸರದಿ ಬಂದ ನಂತರ ಮಠದೊಳಗೆ ಹೋಗಿ ಸಿದ್ಧರಾಮೇಶ್ವರರಿಗೆ ದೀರ್ಘದಂಡವಾಗಿ ಕಾಲಿಗೆರಗಿ ನಮಸ್ಕರಿಸಿ, ನನ್ನದೊಂದು ಬಿನ್ನಹವಿದೆ. ಅರಿಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಬಿನ್ನವಿಸಿದರು. ತನ್ನ ಮುಂದೆ ನಿಂತು ಬಿನ್ನವಿಸಿದವರು ಸಾಮಾನ್ಯರಲ್ಲವೆಂದು ಅರಿತ ಸಿದ್ಧರಾಮೇಶ್ವರರು ಕುಳಿತುಕೊಳ್ಳುವಂತೆ ಹೇಳಿ ಆಸನ ತೋರಿಸಿದರು. ಹೇಳಿ, ನೀವಾರು ಬಂದ ಕಾರಣವೇನು? ಕೇಳಿದರು. ನಾನು ಬಸವಣ್ಣ, ಕಲ್ಯಾಣ ಚಾಳುಕ್ಯ ಸಾಮ್ರಾಜ್ಯದ ಪ್ರಧಾನ ಮಂತ್ರಿ, ಆದರೆ ನಾನು ಪ್ರಧಾನಮಂತ್ರಿಯಾಗಿ ಇಲ್ಲಿಗೆ ಬಂದಿಲ್ಲ. ಲಿಂಗಾಯತ ಧರ್ಮದ ಕಾರ್ಯಕರ್ತನಾಗಿ ಬಂದಿದ್ದೇನೆ ಎಂದರು ಬಸವಣ್ಣ. ಏನು! ಸಾಮ್ರಾಜ್ಯದ ಪ್ರಧಾನಮಂತ್ರಿ ಬಸವಣ್ಣನವರೇ. ಲಿಂಗಾಯತ ಧರ್ಮಸ್ಥಾಪಕ ಬಸವಣ್ಣನವರೇ! ಎಂದು ಉದ್ಗರಿಸಿ ಸಿದ್ಧರಾಮೇಶ್ವರರು, ಹೀಗೆ ಸಾಮಾನ್ಯರಂತೆ ಭಕ್ತರ ಸರತಿ ಸಾಲಿನಲ್ಲಿ ನಿಂತು ನಮ್ಮನ್ನು ನೋಡ ಬಯಸಿದ್ದಾದರೂ ಏಕೆ. ನೀವು ಬರುವುದು ಮೊದಲೆ ತಿಳಿದಿದ್ದರೆ, ಸಾಮ್ರಾಜ್ಯದ ಪ್ರಧಾನ ಮಂತ್ರಿಗಳಿಗೆ ಸಲ್ಲಬೇಕಾದ ವಿಶಿಷ್ಟ ಗೌರವಾದರಗಳಿಂದ ಬರಮಾಡಿಕೊಳ್ಳುವ ಅವಕಾಶ ನಮಗೆ ತಪ್ಪಿದಂತಾಯ್ತು. ಹೀಗೆ ಸಾಮಾನ್ಯರಂತೆ ಬಂದು ನಮ್ಮನ್ನು ಕಾಣಲು ಭಲವಾದ ಕಾರಣವೇನಾದರೂ ಇರಬೇಕಲ್ಲವೆ. ಕೇಳಿದರು ಸಿದ್ಧರಾಮೇಶ್ವರರು. ಪೂಜ್ಯರು ಹೇಳುವುದು ಸರಿ ಇದೆ. ಒಂದು ಘನವಾದ ಉದ್ದೇಶವನ್ನು ತಮ್ಮ ಮುಂದಿಟ್ಟು ಒಪ್ಪಿಗೆ ಪಡೆಯಲು ಯಾಚಕನಾಗಿ ನಾನು ಬಂದಿದ್ದೇನೆ, ನನ್ನನ್ನು ಬರಿಗೈಯಲ್ಲಿ ಕಳುಹಿಸುವುದಿಲ್ಲ ಎಂಬ ಭರವಸೆ ನನಗಿದೆ ಎಂದರು ಬಸವಣ್ಣನವರು. ನೀವು ಬಂದ ಉದ್ದೇಶವನ್ನು ಈಡೇರಿಸುವ ಶಕ್ತಿ ನನ್ನಲ್ಲಿದ್ದರೆ ಖಂಡಿತ ನೆರವೇರಿಸುತ್ತೇನೆ, ಹೇಳಿ ಅದೇನು, ಎಂದರು ಸಿದ್ಧರಾಮೇಶ್ವರರು. ತಮಗೆ ತಿಳಿದಿರುವಂತೆ ಲಿಂಗಾಯತ ಧರ್ಮ ಸ್ಥಾಪನೆಯಾಗಿ ಐದಾರು ವರ್ಷಗಳೇ ಕಳೆದವು. ಸನಾತನ ಧರ್ಮದ ವ್ಯಾಪ್ತಿಯಲ್ಲಿ ಬರುವ ಆಗಮೋಕ್ತ ಶೈವಧರ್ಮದ ಶಾಕೋಪಶಾಖೆಗಳ ಮಠ–ಪೀಠಗಳ ಶಿವಾಚಾರ್ಯರೆಲ್ಲರೂ ತಮ್ಮ ತಮ್ಮ ಅನುಯಾಯಿಗಳೊಂದಿಗೆ ಲಿಂಗಾಯತ ಧರ್ಮ ಸ್ವೀಕರಿಸಿ ಲಿಂಗಾಂಗಿಗಳಾಗಿ ಹೋದರು. ಕನ್ನಡ ನಾಡಿನಲ್ಲಿ ಆಗಮೋಕ್ತ ಶೈವ ಧರ್ಮವೇ ಅಳಿಸಿಹೋಯ್ತು ಎಂದು ಹೇಳಬೇಕೆಂದರೆ ಉಳಿದಿರುವುದು ನಿಮ್ಮ ನೇತೃತ್ವದ ಶೈವಧರ್ಮ ಸಂಸ್ಥಾನ ಮಾತ್ರ. ಲಿಂಗಾಯತ ಧರ್ಮ ಪರಿಪೂರ್ಣವಾಗಬೇಕಿದ್ದಲ್ಲಿ, ನೀವು ಲಿಂಗಾಯತ ಧರ್ಮ ಸ್ವೀಕರಿಸಿದಾಗ ಮಾತ್ರ ಸಾಧ್ಯ. ನೀವು ಲಿಂಗಾಯತ ಧರ್ಮ ಸ್ವೀಕರಿಸಿ ಅದರ ಯಜಮಾನಿಕೆ ವಹಿಸಿಕೊಂಡು ಧರ್ಮದ ಜಗದ್ಗುರುವಾಗಿ, ಅತ್ಯುಚ್ಛ ಧರ್ಮಪೀಠವಾದ ಶೂನ್ಯಪೀಠದ ಅಧ್ಯಕ್ಷರಾಗಿ ಧರ್ಮವನ್ನು ಮುನ್ನಡೆಸಲು ಭಕ್ತಯಿಂದ ಬೇಡಿಕೊಳ್ಳುತ್ತೇನೆ ಎಂದು ತಲೆಬಾಗಿ ನಿಂತರು ಬಸವಣ್ಣನವರು. ಬಸವಣ್ಣನವರ ಬೇಡಿಕೆಯನ್ನು ಈಡೇರಿಸುವುದು ಅಷ್ಟು ಸುಲಭವಲ್ಲ ಎಂಬ ಗ್ರಹಿಕೆ ಸಿದ್ಧರಾಮಣ್ಣನವರದಾಯ್ತು. ಬಸವಣ್ಣನವರೇ ಹೀಗೆ ದಿಢೀರನೆ ಯಾವ ಮುನ್ಸೂಚನೆಯನ್ನು ಕೊಡದೆ ಇಂತಹ ಬಹುದೊಡ್ಡ ಹೊರೆಯನ್ನು ನನ್ನ ಮೇಲೆ ಹೊರಿಸಲು ಬಂದ ನಿಮಗೆ ನಾನು ತುಂಬಾ ಆಭಾರಿಯಾಗಿದ್ದೇನೆ. ಆದರೆ ನನ್ನ ಮೇಲೆ

ನೀವು ಇಟ್ಟಿರುವ ಈ ಭರವಸೆಯನ್ನು ಈಡೇರಿಸಲು ನನ್ನಿಂದ ಅಸಾಧ್ಯ ಎಂದು ಹೇಳಲು ಹಿಂಜರಿಯಲಾರೆ. ನನಗೆ ನನ್ನವೇ ಆದ ಜವಾಬ್ದಾರಿಗಳಿವೆ. ಅವುಗಳನ್ನೆಲ್ಲಾ ನಿಭಾಯಿಸುವುದು ನನ್ನ ಕರ್ತವ್ಯವಲ್ಲವೆ, ಇದರ ಅರ್ಥ ನಾನು ಲಿಂಗಾಯತ ಧರ್ಮ ಸ್ವೀಕರಿಸಲಾರೆ ಎಂದಲ್ಲ. ಕಾಲ ಕೂಡಿಬಂದಾಗ ನೀವು ಕರೆಯದೇ ಇದ್ದರೂ ನಾನು ಖಂಡಿತ ಲಿಂಗಾಯತ ಧರ್ಮ ಸ್ವೀಕರಿಸುತ್ತೇನೆ. ಈಗ ನಿಮ್ಮ ಇಚ್ಛೆಯನ್ನು ಈಡೇರಿಸಲು ಸಾಧ್ಯವಾಗದುದಕ್ಕೆ ಕ್ಷಮೆ ಇರಲಿ ಎಂದು ಹೇಳಿ ಬಸವಣ್ಣನವರನ್ನು ಸನ್ಮಾನಿಸಿ ಗೌರವಯುತವಾಗಿ ಬೀಳ್ಕೊಟ್ಟರು.

ಬಸವಣ್ಣ ಮತ್ತು ಸಿದ್ಧರಾಮಣ್ಣನವರ ಮದ್ಯೆ ನಡೆದ ಈ ಸಂದಾನ ಫಲಪ್ರದವಾಗದೆ, ಹನ್ನೆರಡು ವರ್ಷಗಳು ಉರುಳಿದರೂ, ಲಿಂಗಾಯತ ಧರ್ಮದ ಅತ್ಯುಚ್ಛ ಧರ್ಮಪೀಠವಾದ ಶುನ್ಯಸಿಂಹಾಸನ ಜಗದ್ಗುರು ಪೀಠ ಮಹಾಜ್ಞಾನಿಯೊಬ್ಬರ ಬರುವಿಗಾಗಿ ಕಾಯುತ್ತಿತ್ತು ಮತ್ತು ಶೈವ ಗುರುಸಿದ್ಧರಾಮೇಶ್ವರರು ಲಿಂಗಾಯತ ಧರ್ಮ ಸ್ವೀಕರಿಸುವ ಕಾಲ ಕೂಡಿಬಂದಿತ್ತು. ಬನವಸೆ ನಾಡಿನಲ್ಲಿ ಗೊತ್ತುಗುರಿ ಇಲ್ಲದೆ ಅಂಡಲೆಯುತ್ತಿದ್ದ ಮಹಾತಪಸ್ವಿ, ಮಹಾಜ್ಞಾನಿ ಮತ್ತು ಆಧ್ಯಾತ್ಮದ ಮೇರುವಾದ ಅಲ್ಲಮ ಪ್ರಭುದೇವರು, ಅನಿರೀಕ್ಷಿತವಾಗಿ ಕಾಡಿನಮದ್ಯೆ ಕಾಣದ ಹಾಗಿದ್ದ ಗುಹಾಂತರ ದೇವಾಲಯದೊಳ ಹೊಕ್ಕು, ಅಲ್ಲಿ ಕೈಯಲ್ಲಿ ಲಿಂಗವಿಡಿದು ಅನುಸಂದಾನದಲ್ಲಿದ್ದ ಅನಿಮಿಷ ದೇವರಿಂದ ಲಿಂಗದೀಕ್ಷೆ ಹೊಂದಿ, ಕಲ್ಯಾಣದ ಬಸವಣ್ಣನನ್ನು ಕಾಣಲು ನಿರ್ದೇಶಿತನಾಗಿ ಹೊರಬಿದ್ದರು. ಕಲ್ಯಾಣದ ಹಾದಿ ಹಿಡಿದು ಹೊರಟ ಅಲ್ಲಮಪ್ರಭುದೇವರು ಸೊನ್ನಲಿಗೆ ಸಮೀಪಿಸುತಿದ್ದಂತೆ, ಸಿದ್ಧರಾಮೇಶ್ವರರ ಕರ್ಮಯೋಗದ ಸುದ್ದಿ ಕಿವಿಗೆ ಬಡಿಯಿತು. ವಿಶೇಷ ರೀತಿಯಲ್ಲಿ ಸಿದ್ಧರಾಮೇಶ್ವರರನ್ನು ಸಂದರ್ಶಿಸಿ, ಕರ್ಮಯೋಗದ ಹುಚ್ಚನ್ನು ಬಿಡಿಸಿ, ಶಿವಯೋಗದ ಮರ್ಮವನ್ನು ಅರುಹಿ ಕರ್ಮಯೋಗ ಮತ್ತು ಶಿವಯೋಗಗಳೆರಡರ ಸಮನ್ವಯ ವನ್ನು ಸಾಧಿಸಿದ ಕಲ್ಯಾಣದ ಬಸವಣ್ಣನಲ್ಲಿಗೆ ಸಿದ್ಧರಾಮೇಶ್ವರ ರನ್ನು ಕರೆದೊಯ್ಯುವಲ್ಲಿ ಪ್ರಭುದೇವರು ಯಶಸ್ವಿಯಾದರು. ಕಲ್ಯಾಣದ ಶಿವ ಶರಣರ ಒಡನಾಟದಿಂದ ಲಿಂಗಾಯತ ಧರ್ಮದ ಒಳ ಹೊರಗನ್ನು ಅರಿತ ಸಿದ್ಧರಾಮೇಶ್ವರರು, ಲಿಂಗಾಯತ ಧರ್ಮವನ್ನು ಸ್ವೀಕರಿಸಿ ಚಿನ್ಮಯ ಜ್ಞಾನಿ ಚನ್ನಬಸವಣ್ಣನವರಿಂದ ಲಿಂಗ ದೀಕ್ಷೆ ಪಡೆದರು. ಅಲ್ಲಮ ಪ್ರಭುದೇವರು ಲಿಂಗಾಯತ ಧರ್ಮದ ಮೊದಲ ಜಗದ್ಗುರುವಾಗಿ ಶೂನ್ಯಪೀಠದ ಅಧ್ಯಕ್ಷರಾದರು. ಅಲ್ಲಮಪ್ರಭುದೇವರು ಮತ್ತು ಸಿದ್ಧರಾಮೇಶ್ವರರು ಇಬ್ಬರೂ ಜೊತೆಗೂಡಿ, ಲಿಂಗಾಯತ ಧರ್ಮದ ನೀತಿ, ತತ್ವ, ಸಿದ್ಧಾಂತಗಳನ್ನು ಕಾರ್ಯರೂಪಕ್ಕೆ ತರಲು ಶ್ರಮಿಸತೊಡಗಿದರು. ಜಾತಿ ನಿರ್ಮೂಲನೆಯ ನೀತಿಯ ಅಂಗವಾಗಿ, ಬ್ರಾಹ್ಮಣ ಮತ್ತು ದಲಿತ ವರ್ಗಗಳ ಮದ್ಯೆ ರಕ್ತಸಂಬಂಧ ಬೆಳೆಸಲು ಕಾರಣರಾದರು ಎಂಬ ಕಾರಣಕ್ಕೆ, ಧರ್ಮದೊಳಗಣ ಮೇಲ್ಜಾತಿಯವರ ನಿಂದನೆಗೆ ಗುರಿಯಾದ ಅಲ್ಲಮಪ್ರಭುದೇವರು ನೊಂದು ಜಗದ್ಗುರು ಪೀಠತ್ಯಾಗ ಮಾಡಿ ಹೊರಟುಹೋದರು. ಶ್ರೀ ಗುರು ಚನ್ನಬಸವಣ್ಣನವರನ್ನು ಲಿಂಗಾಯತ ಧರ್ಮದ ಎರಡನೆಯ ಜಗದ್ಗುರುವಾಗಿ ಪಟ್ಟಾಭಿಷಕ್ತರಾಗಿ ಶೂನ್ಯಪೀಠವನ್ನೇರಿದರು ಲಿಂಗಾಯತ ಧರ್ಮದ ಪ್ರಗತಿ ಪರ ನೀತಿ ತತ್ವ ಸಿದ್ಧಾಂತಗಳ ವಿರುದ್ಧ ಸಿಡಿದೆದ್ದ ಮೂಲಭುತವಾದಿಗಳು, ಪುರೋಹಿತ ಶಾಹಿಗಳು ಮತ್ತು ಬಸವಣ್ಣನವರ ರಾಜಕೀಯ ವಿರೋಧಿಗಳು ಎಲ್ಲರು ಒಟ್ಟುಗೂಡಿ ಲಿಂಗಾಯತ ಧರ್ಮದ ಸಂವಿಧಾನ ವೆಂದೆ ಕರೆಯಲಾಗುತ್ತಿದ್ದ ವಚನಗಳ ಕಟ್ಟುಗಳನ್ನು ಸುಡಲಾರಂಭಿಸಿ ಶರಣರನ್ನು ಕಂಡ ಕಂಡಲ್ಲಿ ಹತ್ಯೆ ಮಾಡಲಾರಂಭಿಸಿದರು. ಅಳಿದುಳಿದ ವಚನ ಸಾಹಿತ್ಯವನ್ನು ರಕ್ಷಿಸಲು ಮತ್ತು ಶರಣರ ಪ್ರಾಣ ಉಳಿಸಲು, ವಚನ ಸಾಹಿತ್ಯ ಹೊತ್ತು, ಶರಣರೊಡಗೂಡಿ ಉಳುವಿಯ ಕಾಡು ಸೇರಿದ ಜಗದ್ಗುರು ಶ್ರೀ ಚನ್ನಬಸವಣ್ಣನವರು ಶ್ರೀ ಗುರುಸಿದ್ಧರಾಮೇಶ್ವರರನ್ನು ಲಿಂಗಾಯತ ಧರ್ಮದ ಮೂರನೇ ಜಗದ್ಗುರುವಾಗಿ, ಶೂನ್ಯ ಸಿಂಹಾಸನದ ಅಧಿಪತಿಯನ್ನಾಗಿ ಪಟ್ಟಾಭಿಷೇಕ ಮಾಡಿದರು.

ಹೀಗೆ ಆಗಮೋಕ್ತ ಶೈವ ಧರ್ಮ ಸಂಸ್ಥಾನದ ಗುರುವಾಗಿದ್ದ ಶ್ರೀ ಗುರುಸಿದ್ಧರಾಮೇಶ್ವರರು, ಲಿಂಗಾಯತ ಧರ್ಮ ಸ್ವೀಕರಿಸಿ, ಆ ಧರ್ಮದ ಜಗದ್ಗುರುವೂ ಆದರು. ಒಂದು ಸಮಯ ಶ್ರೀ ಗುರು ಸಿದ್ಧರಾಮೇಶ್ವರರು, ಲಿಂಗಾಯತ ಧರ್ಮದ ಜಗದ್ಗುರುವಾಗದಿದ್ದಲ್ಲಿ, ಅವರು ನೊಳಂಬರ 'ಮಹಾನಾಡು' ರಾಜ್ಯಕ್ಕೆ ಬರುತ್ತಿರಲೂ ಇಲ್ಲ, ನೊಳಂಬ ಸಮುದಾಯ ಲಿಂಗಾಯತರೂ ಆಗದೆ, ನೊಣಬರಾಗಿ, ಒಂದು ಜಾತಿಗೆ ಸೀಮಿತರಾಗಿ, ಸನಾತನ ಧರ್ಮಿಯರಾಗಿ ಮುಂದುವರಿಯುತ್ತಿದ್ದರೋ ಏನೋ.

ಎನ್ನ ವಾಮ–ಕ್ಷೇಮ ನಿಮ್ಮದಯ್ಯಾ.
ಎನ್ನ ಹಾನಿ–ವೃದ್ಧಿ ನಿಮ್ಮದಯ್ಯಾ.
ಎನ್ನ ಮಾನಾಪಮಾನವೂ ನಿಮ್ಮದಯ್ಯಾ.
ಬಳ್ಳಿಗೆ ಕಾಯಿ ದಿಮ್ಮಿತ್ತೆ ಕೂಡಲಸಂಗಮದೇವಾ

– ಬಸವಣ್ಣನವರು

# ಬಸವ ಸಿದ್ಧಾಂತವು ಮೌಢ್ಯಾಚರಣೆ ವಿರೋಧಿ ಪ್ರಣಾಳಿಕೆ

ಇಂದು ನಮ್ಮ ನಾಡು ಅನೇಕ ಬಗೆಯ ಕಂದಾಚಾರಗಳಲ್ಲಿ ಮತ್ತು ಮೌಢ್ಯಾಚರನೆಗಳಲ್ಲಿ ಮುಳುಗಿದೆ. ಈ ಮೌಢ್ಯಾಚರಣೆಗಳು ವೈಜ್ಞಾನಿಕತೆಯನ್ನು ನಾಡಿನಲ್ಲಿ ಮೂಲೆಗುಂಪು ಮಾಡಿಬಿಟ್ಟಿದೆ. ವಿಜ್ಞಾನಕ್ಕೆ ವಿರುದ್ಧವಾಗಿ ನಾಡು ನಡೆಯುತ್ತಿದೆ–ನಾಡವರು ನಡೆದುಕೊಳ್ಳುತ್ತಿದ್ದಾರೆ. ದಾನ–ದಕ್ಷಿಣೆಯ ಕೂಪದಲ್ಲಿ ಜನರು ಸಿಲುಕಿಬಿಟ್ಟಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿನ ಅನೇಕ ಬಡ ಲಿಂಗಾಯತ ಕುಟುಂಬಗಳು ಇಂತಹ ಮೌಢ್ಯಾಚರಣೆಯಲ್ಲಿ ಅಲ್ಪಸ್ವಲ್ಪ ದುಡಿದುದನ್ನೆಲ್ಲ ಯಾತ್ರೆಯ ಹೆಸರಿನಲ್ಲಿ, ತೀರ್ಥಸ್ನಾನದ ಹೆಸರಿನಲ್ಲಿ, ನವಗ್ರಹ ಪೂಜೆಯ ಹೆಸರಿನಲ್ಲಿ ಕಳೆದುಕೊಳ್ಳುತ್ತಿದ್ದಾರೆ. ಇಂಥಹ ದಾನ–ದಕ್ಷಿಣೆಯನ್ನು ಸ್ವೀಕರಿಸುವ ಬ್ರಾಹ್ಮಣ್ಯಕ್ಕೆ ಇದೊಂದು ವರಮಾನದ ಮೂಲವಾಗಿದೆ. ಇಂತಹ ಕಂದಾಚಾರಗಳಿಗೆ ಮೂಢ ನಂಬಿಕೆಗಳಿಗೆ, ಅರ್ಥರಹಿತ ಆಚರಣೆಗಳಿಗೆ ಬಸವ ಸಿದ್ಧಾಂತದಲ್ಲಿ ಸ್ಥಾನವಿಲ್ಲ. ವೈಚಾರಿಕತೆಯು ಬಸವ ಪ್ರಣಾಳಿಕೆಯ ಮೂಲವಾಗಿದೆ. ಬಸವಾದಿ ಶರಣರು ಮತ್ತೆ ಮತ್ತೆ ಯಾವುದನ್ನು ಬಸವಣ್ಣನವರು "ವಿಪ್ರಕಮ್" ಎಂದು ಕರೆದರೋ ಅಂತಹ ವಿಪ್ರಕರ್ಮದ ಬಗ್ಗೆ ಎಚ್ಚರಿಕೆ ನೀಡುತ್ತಾರೆ. ಬಸವಣ್ಣನವರು ಇಂತಹ ವಿಪ್ರಕರ್ಮದ ಬಲೆಯಿಂದ ತಾವು ಮುಕ್ತರಾದರಲ್ಲದೆ ಸಮಾಜವನ್ನು ಬಿಡುಗಡೆಗೊಳಿಸಿದರು.

**ಗುಡಿಗೆ ಮಹಿಳೆಯರಿಗೆ ಪ್ರವೇಶದ ನಿರ್ಭಂದ**

ವೇದಾಗಮಗಳು ಮತ್ತು ಮನುಸ್ಮೃತಿ ಮಹಿಳೆಯರನ್ನು ಸೂತಕ, ಮೈಲಿಗೆ ಎಂದು ಕಳಂಕ ಹಚ್ಚಿ ಎರಡನೆಯ ದರ್ಜೆಯ ನಾಗರಿಕರನ್ನಾಗಿ ಮಾಡಿಬಿಟ್ಟಿವೆ. ವೇದಾಗಮಗಳು ಮಹಿಳೆಯರಗೆ ಮೊದಲ ಮೂರು ವರ್ಣಗಳಲ್ಲಿ ಸ್ಥಾನ ನೀಡದೆ ಅವರನ್ನು "ಶೂದ್ರ" ವರ್ಣಕ್ಕೆ ಸೇರಿಸಿಬಿಟ್ಟಿದೆ. ಶೂದ್ರರು ಎಂದರೆ ಅವರಿಗೆ ಅಕ್ಷರದ ಹಕ್ಕಿಲ್ಲ. ದಾರ್ಮಿಕ ಆಚರಣೆಯ ಹಕ್ಕಿಲ್ಲ, ಉದ್ಯೋಗದ ಹಕ್ಕಿಲ್ಲ, ಮೋಕ್ಷವೂ ಇಲ್ಲ. ಆಕೆಯ ಕಾರ್ಯಕ್ಷೇತ್ರವೇನಿದ್ದರು "ಕುಟುಂಬ, ಗಂಡ, ಮಕ್ಕಳು". ಅವಳನ್ನು ಸ್ವತಂತ್ರ ವ್ಯಕ್ತಿಯನ್ನಾಗಿ ಅದು ಪರಿಗಣಿಸಲೇ ಇಲ್ಲ.

ಸಿದ್ಧರಾಮಣ್ಣನವರು ಹೆಣ್ಣನ್ನು ಹೀಗೆ ಗುರುತಿಸುತ್ತಾರೆ.



**ಪ್ರೊ. ಟಿ.ಆರ್.ಚಂದ್ರಶೇಖರ**
ವಿಶ್ರಾಂತ ಪ್ರಾಧ್ಯಾಪಕ, 2ನೆಯ ಮೇನ್, 4ನೆಯ ಕ್ರಾಸ್, ಬೇಗೂರು ಮುಖ್ಯ ರಸ್ತೆ. ಹೊಂಗಸಂದ್ರ–560 068, ಬೆಂಗಳೂರು.

**"ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ. ಹೆಣ್ಣು ಸಾಕ್ಷಾತ್ ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ"** ಎನ್ನುತ್ತಾರೆ. ಅಕ್ಕಮಹಾದೇವಿ ಅವರು **"ಎನ್ನ ದೇವ ಚೆನ್ನಮಲ್ಲಿಕಾರ್ಜುನನೆಂಬ ಗರುವಂಗೆ ಜಗವೆಲ್ಲ ಹೆಣ್ಣು ನೋಡಾ"** ಎನ್ನುತ್ತಾರೆ. ಅನೇಕ ಇತಿಮಿತಿಗಳ ನಡುವೆ ವಚನಕಾರರು ಮಹಿಳಾ ಸ್ವಾತಂತ್ರದ ಬಗ್ಗೆ, ಮಹಿಳಾ ಬಿಡುಗಡೆಯ ಬಗ್ಗೆ ಮಾತನಾಡುತ್ತಾರೆ. ಒಂದು ರೀತಿಯಲ್ಲಿ ವಚನಕಾರರು ಮಹಿಳೆಯರಿಗೆ ಸಂಬಂಧಿಸಿದಂತೆ ಮನುಸ್ಮೃತಿಯ ಎಲ್ಲ ವಿಕೃತ ಸೂತ್ರಗಳನ್ನು ತಿರಸ್ಕರಿಸುತ್ತಾರೆ. ಬಸವ ಪ್ರಣೀತ ಲಿಂಗಾಯತದಲ್ಲಿ ತೀರ್ಥಯಾತ್ರೆ ಮತ್ತು ಲಿಂಗ ದರ್ಶನಗಳೆಂಬ ಆಚರಣೆಗಳನ್ನು ಪ್ರಶ್ನೆ ಮಾಡುತ್ತಾರೆ. ಹಡಪದ ಅಪ್ಪಣ್ಣನವರು "ತೀರ್ಥಯಾತ್ರೆ ಲಿಂಗ ದರ್ಶನಕ್ಕೆ ಹೋಗಿ ಕರ್ಮವ ಹಿಂಗಿಸಕೊಂಬೆನೆಂಬ ಭಂಗಿತರ ಮಾತ ಕೇಳಲಾಗದು" ಎನ್ನುತ್ತಾರೆ.

ಇಂದು ತೀರ್ಥಸ್ನಾನ, ಪವಿತ್ರ ಸ್ನಾನ ಎಂಬವು ಕಾಡ್ಗಿಚ್ಚಿನಂತೆ ನಾಡಿನ ತುಂಬಾ ಹರಡುತ್ತಿದೆ. ಅಲ್ಲಮ ಪ್ರಭುದೇವರು ಇದರ ಬಗ್ಗೆ ಹೀಗೆ ಹೇಳುತ್ತಾರೆ.

**"ಸುತ್ತಿ ಸುತ್ತಿ ಬಂದಡಿಲ್ಲ, ಲಕ್ಷ ಗಂಗೆಯ ಮಿಂದಡಿಲ್ಲ**
**ತುಟ್ಟತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ**
**ನಿತ್ಯನೇಮದಿಂದ ತನುವ ಮುಟ್ಟಿಕೊಂಡಡಿಲ್ಲ**
**ನಿಚ್ಚಕ್ಕೆ ನಿಚ್ಚ ನೆನೆವ ಮನವ ಅಂದಂದಿಂಗೆ**
**ಅತ್ತಲಿತ್ತ ಹರಿವ ಮನವ ಚಿತ್ತದಲಿ ನಿಲಿಸಬಲ್ಲಡೆ ಬಚ್ಚಬರಿಯ**
**ಬೆಳಗು ಗುಹೇಶ್ವರನೆಂಬ ಲಿಂಗವು"**

ಗುಹೇಶ್ವರನೆಂಬ ಲಿಂಗವು ಗಂಗೆಯಲ್ಲಿ ಮೀಯುವುದರಿಂದ ದೊರೆಯುವುದಿಲ್ಲ. ಅದಕ್ಕೆ ಚಂಚಲಶೀಲವಾದ ಮನಸ್ಸನ್ನು ಹತೋಟಿಯಲ್ಲಿಡಬೇಕು. ಇಂತಹ ಮೌಢ್ಯಾಚರಣೆಯ ವಿರುದ್ಧ ಬಸವಣ್ಣನವರು ಹೀಗೆ ಹೇಳುತ್ತಾರೆ

**"ನೀರಕಂಡಲ್ಲಿ ಮುಳುಗುವರಯ್ಯಾ,**
**ಮರನ ಕಂಡಲ್ಲಿ ಸುತ್ತುವರಯ್ಯಾ**
**ಬತ್ತುವ ಜಲವ, ಒಣಗುವ**
**ಮರನಮಚ್ಚಿದವರು ನಿಮ್ಮನೆತ್ತ ಬಲ್ಲರು**
**ಕೂಡಲಸಂಗಮದೇವಾ'**

ಬಸವ ಸಂವಿಧಾನದಲ್ಲಿ ಪಾಪ–ಪುಣ್ಯಗಳಿಗೆ ಸ್ಥಾನವಿಲ್ಲ. ಅಲ್ಲಮಪ್ರಭುಗಳು ಇದನ್ನು ಹೀಗೆ ಮಂಡಿಸಿದ್ದಾರೆ

**ಮನದೊಳಗೆ ಘನ ವೇದ್ಯವಾಗಿ**
**ಘನದೊಳಗೆ ಮನ ವೇದ್ಯವಾದ ಬಳಿಕ**
**ಪುಣ್ಯವಿಲ್ಲ, ಪಾಪವಿಲ್ಲ, ಸುಖವಿಲ್ಲ ದುಃಖವಿಲ್ಲ**
**ಕಾಲವಿಲ್ಲ ಕರ್ಮವಿಲ್ಲ. ಜನನವಿಲ್ಲ ಮರಣವಿಲ್ಲ**
**ಗುಹೇಶ್ವರಾ ನಿಮ್ಮ ಶರಣನು ಘನಮಹಿಮ ನೋಡಯ್ಯಾ**

ಭಕ್ತನ ಮನದಲ್ಲಿ ಘನ–ಅಂದರೆ ಪರವಸ್ತು–ಪತಮಾತ್ಮ ನೆಲೆಗೊಂಡ ಬಳಿಕ ಮತ್ತು ಘನದೊಳಗೆ ಮನ ನೆಲೆಗೊಂಡ ಬಳಿಕ ಅಲ್ಲಿ ಪಾಪವೂ ಇಲ್ಲ, ಪುಣ್ಯವೂ ಇಲ್ಲ, ನರಕವೂ ಇಲ್ಲ ಸ್ವರ್ಗವೂ ಇಲ್ಲ. ಬಸವ ಸಂವಿಧಾನದ ಸತ್ಯವನ್ನು ಅರ್ಥ ಮಾಡಿಕೊಳ್ಳದ ಅನೇಕ ಲಿಂಗಾಯತರು ಗಂಗೆಯಲ್ಲಿ ಮೀಯುವುದು "ಪವಿತ್ರ" ಎಂದು, ಅದರಿಂದ ಪಾಪ ಕಳೆಯುತ್ತದೆ ಎಂದು, ಪುಣ್ಯ ಬರುತ್ತದೆ ಎಂದು ನಂಬುತ್ತಾರೆ. ಈ ನಂಬಿಕೆಯು ಒಂದು ಮೌಢ್ಯ, ಇದೊಂದು ಅವೈಜ್ಞಾನಿಕ ಆಚರಣೆ. ಇದೊಂದು ಕಾಯಕ ವಿರೋಧಿ ಶಾಸ್ತ್ರವಾಗಿದೆ. ಕಾಯಕದಿಂದ ಸುಖ ಬರುತ್ತದಯೇ ವಿನಾ ಹೋಮ–ಹವನ, ಗಂಗೆಯಲ್ಲಿ ಸ್ನಾನ ಮುಂತಾದವು ಕಾಯಕದ ಬಗ್ಗೆ ಅಗೌರವದ ಸಂಗತಿಯಾಗಿದೆ. ಇದನ್ನು ಸಿದ್ಧರಾಮಣ್ಣನವರು ಸ್ಪಷ್ಟವಾಗಿ ಹೇಳಿದ್ದಾರೆ.

**ಸುಖಕ್ಕೆ ದೈವವೆಂದು, ಸುಖಕ್ಕೆ ವಿಧಿಲಿಪಿಯೆಂದು**
**ಸುಖಕ್ಕೆ ಪುಣ್ಯವೆಂದು, ಸುಖಕ್ಕೆ ಪ್ರಾರಬ್ಧವೆಂದು**
**ನುಡಿವರಯ್ಯಾ ಸಿದ್ಧಾಂತಿಗಳು**
**ಸುಖವು ದೈವವೆನಲಾಗಿ ಮಾಡುವ ಕ್ರಿಯೆಯಲ್ಲಿರಯಬಂದಿತ್ತು**
**ಸುಖವು ದೈವವಲ್ಲ. ದೈವವದು**
**ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಕೂಡುವ ಕೂಟವು**

ಲಿಂಗಾಯತರಿಗೆ ಕಾಯಕವೇ ಆಧ್ಯಾತ್ಮ. ಕಾಯಕವೇ ಅಭಿವೃದ್ಧಿ. ಕಾಯಕವೇ ಸಮೃದ್ಧತೆಯ ಸೂಚಿ. ಲಿಂಗಾಯತರು ಇಂತಹ ಅವೈಜ್ಞಾನಿಕ ಆಚರಣೆಗಳಿಂದ ದೂರವಿರಬೇಕು. ಬಸವಣ್ಣನವರು ವೈಜ್ಞಾನಿಕವಾದ ಮತ್ತು ಜಾಗತಿಕವಾದ ಲಿಂಗಾಯತ ಧರ್ಮವನ್ನು ನಮಗೆ ಕೊಟ್ಟಿದ್ದಾರೆ. ಅದನ್ನು ಪಾಲಿಸೋಣ. ಕಂದಾಚಾರ – ಮೌಢ್ಯಾಚರಣೆಗಳಿಂದ ದೂರವಿರೋಣ.


॥ ಶ್ರೀ ಗುರುಸಿದ್ಧರಾಮೇಶ್ವರಾಯ ನಮಃ ॥
ನೊಳಂಬ ಲಿಂಗಾಯತ ಸಂಘ (ರಿ.),
ದಾನಶೂರ ಕಂಬಿ ಎಂ. ಸಿದ್ಧರಾಮಣ್ಣ ವಿದ್ಯಾರ್ಥಿ ನಿಲಯ
ನಂ. 1–ಎ, 1ನೇ "ಎ" ಅಡ್ಡರಸ್ತೆ, 3ನೇ ಹಂತ, 4ನೇ ವಿಭಾಗ, ಬಸವೇಶ್ವರನಗರ, ಬೆಂಗಳೂರು–79.

ನೂತನವಾಗಿ ನಿರ್ಮಿಸಿರುವ
"ಶ್ರೀಮತಿ ಸರ್ವಮಂಗಳಮ್ಮ ಸೂರೇನಹಳ್ಳಿ
ಶ್ರೀ ಸಿ. ಸಿದ್ದಯ್ಯ ವಾಣಿಜ್ಯ ಸಂಕೀರ್ಣ" ದ ಉದ್ಘಾಟನೆ
ಹಾಗೂ "ದಾನಿಗಳ ಸಂಸ್ಮರಣಾ ದಿನಾಚರಣೆ"

ದಿನಾಂಕ 06–04–2025, ಭಾನುವಾರ

ಸಮಯ : ಬೆಳಿಗ್ಗೆ 10:15 ಗಂಟೆಗೆ
ಸ್ಥಳ : ನಂ. 35, 19ನೇ ಮುಖ್ಯರಸ್ತೆ, 1ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು – 560 010.

ಸಮಯ : ಬೆಳಿಗ್ಗೆ 11:00 ಗಂಟೆಗೆ
ಸ್ಥಳ : ಸಾಗರನಹಳ್ಳಿ ಮಹಾದೇವಯ್ಯನವರ ಸಭಾಂಗಣ,
ಬಸವೇಶ್ವರನಗರ, ಬೆಂಗಳೂರು – 560 079.

ಕಾರ್ಯಕ್ರಮ

ಅಧ್ಯಕ್ಷತೆ
ಶ್ರೀ ಬಿ.ಕೆ. ಚಂದ್ರಶೇಖರ್
ಅಧ್ಯಕ್ಷರು, ನೊ.ಲಿಂ.ಸಂ. (ರಿ), ಬೆಂಗಳೂರು.

ವಾಣಿಜ್ಯ ಸಂಕೀರ್ಣದ ಉದ್ಘಾಟನೆ
ಶ್ರೀ ಜೆ.ಸಿ. ಮಾಧುಸ್ವಾಮಿ ರವರು,
ಮಾನ್ಯ ಮಾಜಿ ಸಚಿವರು, ಚಿಕ್ಕನಾಯಕನಹಳ್ಳಿ ತಾ॥

ಕಾರ್ಯಕ್ರಮದ ಉದ್ಘಾಟನೆ
ಶ್ರೀ ಜಿ.ಎಸ್. ಬಸವರಾಜು ರವರು,
ಮಾಜಿ ಸಂಸದರು, ತುಮಕೂರು.

ಉಪನ್ಯಾಸ
ಶ್ರೀ ಎಂ.ಜಿ. ಸಿದ್ಧರಾಮಯ್ಯ ರವರು,
ಅಧ್ಯಕ್ಷರು, ಜಿಲ್ಲಾ ಶರಣ ಸಾಹಿತ್ಯ ಪರಿಷತ್, ತುಮಕೂರು.

ಮುಖ್ಯ ಅತಿಥಿಗಳು
ಶ್ರೀ ಕೆ. ಷಡಾಕ್ಷರಿ, ಮಾನ್ಯ ಶಾಸಕರು, ತಿಪಟೂರು ಕ್ಷೇತ್ರ
ಶ್ರೀ ಜ್ಯೋತಿ ಗಣೇಶ್, ಮಾನ್ಯ ಶಾಸಕರು, ತುಮಕೂರು ಕ್ಷೇತ್ರ
ಶ್ರೀ ಕೆ. ಗೋಪಾಲಯ್ಯ, ಮಾಜಿ ಸಚಿವರು ಹಾಗೂ
ಹಾಲಿ ಶಾಸಕರು, ಮಹಾಲಕ್ಷ್ಮೀ ಲೇಔಟ್.
ಶ್ರೀ ಎಸ್. ಸುರೇಶ್ ಕುಮಾರ್, ಶಾಸಕರು, ರಾಜಾಜಿನಗರ.
ಶ್ರೀ ಎಸ್.ಎಂ. ನಾಗರಾಜು, ಮಾಜಿ ಶಾಸಕರು ಹಾಗೂ
ಮಾಜಿ ಅಧ್ಯಕ್ಷರು, ನೊ.ಲಿಂ.ಸಂ.(ರಿ), ಬೆಂಗಳೂರು.
ಶ್ರೀ ಕೆ.ಎಸ್. ಲಿಂಗೇಶ್, ಮಾನ್ಯ ಮಾಜಿ ಶಾಸಕರು, ಬೇಲೂರು ಕ್ಷೇತ್ರ
ಡಾ॥ ಡಿ.ಬಿ. ಗಂಗಪ್ಪ, ಮಾಜಿ ಶಾಸಕರು ಹಾಗೂ ನಿರ್ದೇಶಕರು, ನೊ.ಲಿಂ.ಸಂ.(ರಿ), ಬೆಂ.
ಶ್ರೀ ಶ್ರೀ ಎಸ್.ಎನ್. ಸಿದ್ಧರಾಮಪ್ಪ, ಐ.ಪಿ.ಎಸ್., ಐ.ಜಿ.ಪಿ. (ನಿವೃತ್ತ)
ಶ್ರೀ ಕೆ.ಸಿ. ವಿರುಪಾಕ್ಷ, ಜಂಟಿ ಆಯುಕ್ತರು, ವಾಣಿಜ್ಯ ತೆರಿಗೆ.
ಶ್ರೀಮತಿ ನಿರುಪಮ ನಿರಂಜನ್, ದಾನಿಗಳು, ಬೆಂಗಳೂರು.

ತಮ್ಮ ಆಗಮನಾಭಿಲಾಷಿಗಳು
ಶ್ರೀ ಕೆ.ಬಿ. ಶಶಿಧರ್, ಗೌರವ ಕಾರ್ಯದರ್ಶಿ, ಪದಾಧಿಕಾರಿಗಳು, ಕಾರ್ಯಕಾರಿ
ಹಾಗೂ ಕಾಮಗಾರಿ ಸಮಿತಿಯ ಸದಸ್ಯರುಗಳು, ನೊ.ಲಿಂ.ಸಂ.(ರಿ), ಬೆಂ.

# ನಾಡಿನ ಸ್ತ್ರೀ ಚೇತನ ಅಕ್ಕಮಹಾದೇವಿ

ಆಧ್ಯಾತ್ಮ ಸಾಧನೆಗೆ ಉತ್ತಮ ಮಾರ್ಗವೆಂದರೆ ವೈರಾಗ್ಯವೆಂದು ನಮ್ಮ ಧರ್ಮಗಳು ಹೇಳುತ್ತವೆ. ಈ ಹಿನ್ನೆಲೆಯಲ್ಲಿ ಜೈನ ಸನ್ಯಾಸಿಗಳನ್ನು ಶ್ರವಣರು ಎನ್ನುತ್ತಾರೆ. ಬೌದ್ಧ ಧರ್ಮದಲ್ಲಿ ಭಿಕ್ಷುಗಳು ಅಥವಾ ಬೌದ್ಧ ಯತಿಗಳೆಂದು ಕರೆಯುತ್ತಾರೆ. ಬೌದ್ಧರ ನಿರ್ವಾಣ ಪದಕ್ಕೆ ಲಿಂಗಾಯತರ ಬಯಲು ಸಮಾನ ಪದ. ಶೈವ ಧರ್ಮದಲ್ಲಿ ವಿರಕ್ತರು, ಯೋಗಿಗಳು, ಜಂಗಮರು ಎಂದು ಗುರುತಿಸಿದ್ದಾರೆ. ಇದು ಪುರುಷರಿಗೆ ಸಂಬಂಧಪಟ್ಟದ್ದಾಯಿತು. ಆದರೆ ಸಂಸಾರವೇ ಸರ್ವಸ್ವವಾಗಿದ್ದ ಮಹಿಳೆಯರಿಗೆ ವೈರಾಗ್ಯವೆಂಬುದು ಗಗನ ಕುಸುಮವಾಗಿತ್ತು. ಹೀಗಿರುವಲ್ಲಿ ಮಹಿಳಾ ಬದುಕು ನವೀಕರಣಗೊಂಡದ್ದು ವಚನಯುಗದಲ್ಲಿ. ಸುಮಾರು ಒಂಭೈನೂರು ವರ್ಷಗಳ ಹಿಂದೆಯೆ ಮಹಿಳೆಗೆ ವ್ಯಕ್ತಿ ಸ್ವಾತಂತ್ರ್ಯ, ವಿಚಾರ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಿ ಅವಳ ಸರ್ವತೋಮುಖ ಬೆಳವಣಿಗೆಗೆ ಮನ್ನಣೆ ಇತ್ತದ್ದು ವಚನಯುಗ. ಈ ಸಮಯದಲ್ಲಿಯ ಆಂದೋಲನವು ಶರಣಕ್ರಾಂತಿಯೆ ಆಯಿತು. ನವ ಸಮಾಜ ನಿರ್ಮಾಣಕ್ಕಾಗಿ ಶರಣರು ಹಾತೊರೆದರು. ವಚನಕಾರರ ನವ ಚಿಂತನೆಯ ಅನೇಕ ಅಂಶಗಳಲ್ಲಿ ಮಹಿಳಾ ಸಮಾನತೆಯು ಒಂದಾಗಿದೆ. ಶರಣರ ದೃಷ್ಟಿಯಲ್ಲಿ ಸ್ತ್ರೀ ವೈರಾಗ್ಯದ ಬಗ್ಗೆ ಕೆಲವು ಅಂಶಗಳನ್ನು ತಿಳಿಸುತ್ತಾರೆ.

ವಚನಯುಗ ಉಭಯ ಪ್ರಧಾನ ಕುಟುಂಬದ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯಿತು. ಋಜು ಮಾರ್ಗದಲ್ಲಿ ನಡೆದು ತಮ್ಮ ವೈರಾಗ್ಯ ಸಾಧನೆಯ ಮೂಲಕ ಆತ್ಮವಿಕಾಸದ ಪರಮಾವಧಿಯನ್ನು ಮುಟ್ಟಿ ದೈವತ್ವದ ಪರಮ ಸಿದ್ಧಿಯನ್ನು ಪಡೆದ ಅಕ್ಕ ಲಿಂಗಾಯತ ಧರ್ಮದ ಹಿನ್ನೆಲೆಯ ವೀರ ವಿರಾಗಿಣಿಯೆ ಸರಿ. ನಮ್ಮ ಕನ್ನಡ ನಾಡು ಕಂಡ ಆಧ್ಯಾತ್ಮ ಮಂದಾರ ಪುಷ್ಪ. ವಚನ ಸಾಹಿತ್ಯ ಉತ್ಕೃಷ್ಟ ರತ್ನಗಳಲ್ಲಿ ಮಹಾರತ್ನ ಇವಳೇ ಆಗಿದ್ದಾಳೆ. ಅಕ್ಕಮಹಾದೇವಿ ಎಂಬುದೇ ಒಂದು ವಿಸ್ಮಯ. ಲೋಕಕಂಡ ಬೆರಗು. ವಿಶಿಷ್ಟ ಅಸ್ಮಿತೆ. ಬಸವ ಅಲ್ಲಮ, ಚೆನ್ನಬಸವಣ್ಣ, ಸಿದ್ಧರಾಮ ಅಕ್ಕಮಹಾದೇವಿ ಈ ಐದು ಜನ ಅಗ್ರಗಣ್ಯರಲ್ಲಿ ಅಕ್ಕಮಹಾದೇವಿಯು ಮುಖ್ಯ ಸ್ಥಾನದಲ್ಲೆ ನಿಲ್ಲುತ್ತಾಳೆ.



**ಸುಶೀಲ ಸೋಮಶೇಖರ್**
ಚೈತ್ರೋದಯ, ಪ್ರೆಸಿಡೆನ್ಸಿ ಕಾಲೇಜು
ಹಿಂಭಾಗ, ಸಾಲಗಾಮೆ ರಸ್ತೆ,
ಹಾಸನ–573201
ಮೊ : 9448997084

ಇವಳ ಬದುಕಿನಲ್ಲಿ ನಾಲ್ಕು ಮಜಲುಗಳನ್ನು ಕಾಣುತ್ತೇವೆ. ಅವಳ ಜನನ ಮತ್ತು ಬಾಲ್ಯ, ಕೌಶಿಕನೊಂದಿಗಿನ ವಿವಾಹದ ಸಂದರ್ಭ, ನಂತರ ವೈರಾಗ್ಯ ತಾಳಿ ಕಲ್ಯಾಣದತ್ತ ಬಂದ ಅನುಭವ ಮಂಟಪದಲ್ಲಿದ್ದ ಅಕ್ಕನ ಅನುಭಾವಿಕ ಬದುಕು, ಕೊನೆಯದಾಗಿ ಕದಳಿ ಬನದತ್ತ ಪಯಣಿಸಿ ಶ್ರೀ ಚೆನ್ನಮಲ್ಲಿಕಾರ್ಜುನನಲ್ಲಿ ಲೀನವಾದುದು. ಅಕ್ಕನ ಜನ್ಮ ಸ್ಥಳ ಶಿವಮೊಗ್ಗ ಜಿಲ್ಲೆಯ ಉಡುತಡಿ. ನಿರ್ಮಲಶೆಟ್ಟಿ ಸುಮತಿ ಎಂಬ ಶೈವ ಭಕ್ತರು ಇವಳ ತಂದೆ ತಾಯಿ. ಅಕ್ಕ ಜನಿಸಿದ ಉಡುತಡಿಗೆ ಪೂರ್ವದಲ್ಲಿ ಉಡುಗಣಿ ಎಂಬ ಮೂಲ ಹೆಸರಿತ್ತು.

ಪ್ರೌಢಳಾಗಿದ್ದ ಅಕ್ಕ ಉಡುತಡಿಯ ಅರಸ ಕೌಶಿಕನ ಕಣ್ಣಿಗೆ ಬಿದ್ದಳಷ್ಟೆ. ಮೋಹಗೊಂಡ. ಮದುವೆಯಾಗಲೆತ್ನಿಸಿದ. ಕಡೆಗೆ ಅವಳು ಹಾಕಿದ ಮೂರು ಷರತ್ತುಗಳನ್ನು ಒಪ್ಪಿದ. ಮಹಾದೇವಿ ಕೌಶಿಕನ ಅರಮನೆ ಸೇರಿದಳಷ್ಟೆ. ಆದರೆ ಅವಳು ಅವನ ಮನ ಸೇರಲೊಪ್ಪಲಿಲ್ಲ. ಜೈನ ಧರ್ಮೀಯನಾಗಿದ್ದ ಕೌಶಿಕ ಒಪ್ಪಿದಷ್ಟೆ ಸಲೀಸಾಗಿ ಅವುಗಳನ್ನು ಮೀರಿ ನಡೆದ. ಕೌಶಿಕನೆಂಬ ಅರಸನ ಅರಮನೆಯ ಕೊಳದಲ್ಲಿ ಕಾಲಿಟ್ಟಿದ್ದ ಅಕ್ಕ ತನ್ನ ಕಾಲಿಗೆ ಮೆತ್ತಿದ್ದ ಕೆಸರನ್ನು ತೊಳೆದು ಹೊರಟಳು. ಸ್ವತಂತ್ರಳಾದಳು. ಕನ್ನಡ ನಾಡಿನ ಸ್ತ್ರೀ ಚೇತನಗಳಲ್ಲಿ ಆರಾಧ್ಯಳೆನಿಸಿ ಅಕ್ಕನೆಂಬ ಅಕ್ಕರೆ ಪಡೆದ ಅಕ್ಕಮಹಾದೇವಿ ಪ್ರಪ್ರಥಮ ಸ್ತ್ರೀ ಸ್ವಾತಂತ್ರ್ಯ ಪ್ರತಿಪಾದಕಿ. ದೇಹಾಭಿಮಾನ, ತೊರೆದವಳು. ಸುಸಂಸ್ಕೃತ ಮನೆತನದಿಂದ ಬಂದ ವಿದ್ಯಾವಂತಳಾದ ಇವಳು ಸೂಕ್ಷ್ಮ ಸಂವೇದನಾಶೀಲಳು. 'ಅಜಗಣ್ಣನ ಐದು ವಚನಕ್ಕೆ ಮಹದೇವಿಯಕ್ಕಗಳ ಒಂದು ವಚನ ನಿರ್ವಚನಾ ಕಾಣಾ' ಎಂದು ಚೆನ್ನಬಸವಣ್ಣನವರಿಂದ ಹೊಗಳಿಸಿಕೊಳ್ಳುವಂತೆ ಕಾವ್ಯ ಮೌಲ್ಯ ಹೆಚ್ಚಿಸಿ ಸಾಹಿತ್ಯ ಪ್ರತಿಭೆಯುಳ್ಳವಳು. ಕಾವ್ಯಶಾಸ್ತ್ರ ಪರಿಣಿತೆ. ಪ್ರೌಢ ವಿಚಾರವಂತಿಕೆಯುಳ್ಳವಳು. 'ಜಾಲಗಾರನೊಬ್ಬ ಜಲವ ಶೋಧಿಸಿ ಹಲವು ಜೀವಿಗಳ ಕೊಂದು ತಿನ್ನುವಾ' ಎಂಬ ವಚನದ ಮೂಲಕ ಅಹಿಂಸೆಯ ಸಂದೇಶವ ನೀಡಿ ಸಾಮಾಜಿಕ ಕಾಳಜಿ ತೋರುವ ನೈತಿಕ ಪ್ರಜ್ಞೆ ಅವಳದು.

ಕಾಮನ ತಲೆಯ ಕೊರೆದು
ಕಾಲನ ಕಣ್ಣ ಕಳೆದು ಅಲೌಕಿಕ ಪತಿ

ಚೆನ್ನಮಲ್ಲಿಕಾರ್ಜುನನ ಕೈ ಹಿಡಿಯುವಲ್ಲಿ ಅವಿಕಲ್ಲ ಹಸೆ ಏರಿದವಳು. ಪವಳದ ಸೇಸೆಯನು ಹಾಕಿಸಿಕೊಂಡವಳು. ಅಕ್ಕ ಕೇಳವ್ವ ನಾನೊಂದು ಕನಸ ಕಂಡೆ, ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನ ಕಂಡೆನೆಂದು ಶಿವ ಸಂಸ್ಕೃತಿಯನ್ನು ಮೈಗೂಡಿಸಿಕೊಂಡವಳು.

ಇವಳು ಮತ ಪ್ರಚಾರಕಳಲ್ಲ. ಮತ ಪ್ರವರ್ತಕಳೂ ಅಲ್ಲ. ಅನುಭಾವಿಕ ಸಾಧನೆಯ ಚಿಂತನೆಗಳು ಆಕೆಯ ವಚನಗಳಲ್ಲಿ ಬಿಂಬಿಸಲ್ಪಟ್ಟಿವೆ. ಏಕಾಂಗಿಯಾಗಿ ನಿಂತು ಸಂಪ್ರದಾಯಗಳ ಕುರಿತು ಇಡೀ ಸಮಾಜವನ್ನೆ ಪ್ರಶ್ನಿಸಿದ ಎದೆಗಾರ್ತಿ. 12ನೇ ಶತಮಾನದ ಈ ಸಂದರ್ಭದಲ್ಲಿ ಲೋಕ ವಿರೋಧಕ್ಕೆ ಬೆಚ್ಚದೆ ಬೆದರದೆ ಅಕ್ಕಮಹಾದೇವಿ ಸಮಾಜದಲ್ಲಿದ್ದೆ ತನ್ನ ಸತಿತ್ವವನ್ನು ತನ್ನ ಮನದನ್ನ ಶ್ರೀ ಚೆನ್ನಮಲ್ಲಿಕಾರ್ಜುನನಿಗೆ ಅರ್ಪಿಸಿದ್ದಾಳೆ.

ಅಂದಿನ ಸಾಮಾಜಿಕ ಕಟ್ಟುಪಾಡುಗಳಲ್ಲಿ ಸ್ವತಂತ್ರವೆಂಬುದು ಸಾಮಾನ್ಯದ ಮಾತಲ್ಲ. ಹಸಿವಾದೊಡೆ ಕೆರೆಹಳ್ಳ ಬಾವಿಗಳುಂಟೆಂದು ನಂಬಿ ನಡೆದವಳು. ಕಲ್ಯಾಣದೆಡೆ ಬಂದ ಮಾರ್ಗದ ನಡುವೆ ತನ್ನನ್ನು ಪರೀಕ್ಷಿಸಲು ಬಂದ ಕಿನ್ನರಿ ಬೊಮ್ಮಯ್ಯನಿಗೆ;

**ಬಿಟ್ಟಿಹ ಮೊಲೆಯ ಭರದಜವ್ವನದ ಚೆಲುವ ಕಂಡು ಬಂದಿರಣ್ಣಾ**
**ಅಣ್ಣಾ ನಾನು ಹೆಂಗೂಸಲ್ಲ, ಅಣ್ಣ ನಾನು ಸೂಳೆಯಲ್ಲ**
**ಅಣ್ಣ ಮತ್ತೆ ನನ್ನಕಂಡುಕಂಡುಆರೆಂದು ಬಂದಿರಣ್ಣಾ**
**ಚೆನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿದ ಪರಪುರುಷರು**
**ನಮಗಾಗದ ಮೋರೆ ನೋಡಿರಣ್ಣಾ**

ಎಂದು ಹೇಳುವ ಈ ವಚನ ಅಂದಿನ ಸಮಾಜ ಹೆಣ್ಣನ್ನು ಕಾಣುತ್ತಿದ್ದ ರೀತಿಯನ್ನು ತೋರುತ್ತದೆ. ಇಲ್ಲಿ ಕಿನ್ನರಿ ಬೊಮ್ಮಯ್ಯ ಸಂಕೇತವಷ್ಟೆ. 'ಎನ್ನ ಕಾಯ ಕರ್ರನೆ ಕಂದಿದರೇನಯ್ಯಾ ಮಿರ್ರನೆ ಮಿಂಚಿದರೇನಯ್ಯಾ ಶ್ರೀ ಚೆನ್ನಮಲ್ಲಿಕಾರ್ಜುನಂಗರ್ಪಿತವಾದ ದೇಹ ಹೇಗಿದ್ದೊಡೆ ನಿಮಗೆಂತಹುದಯ್ಯಾ? ಎಂದು ಅಲ್ಲಮನಿಗೆ ಉತ್ತರಿಸಿ ಮನದ ಸ್ಪಷ್ಟ ನಿಲುವನ್ನು ಸಭೆಗೆ ಅರುಹಿ ಮಹಾಘನತೆ ಮೆರೆದಿದ್ದಾಳೆ ಅಕ್ಕ. ನಿರ್ಲಿಪ್ತ ಭಾವದಿಂದ ಅನುಭವ ಮಂಟಪದಲ್ಲಿದ್ದ ಶರಣರಿಗೆ ಪ್ರಶ್ನಿಸಿದವಳು. ಅಲ್ಲಮನ ಕಠಿಣ ಪರೀಕ್ಷೆಯನ್ನು ಎದುರಿಸಿದ ಅಕ್ಕಮಹಾದೇವಿ 12ನೇ ಶತಮಾನದ ಅನರ್ಘ್ಯರತ್ನ. ಕುಲ ಸೀಮೆಯಿಲ್ಲದ ನಿಸ್ಸೀಮ ಚೆಲುವಂಗೊಲಿದಿಹೆನೆಂದ ಸ್ವಾಭಿಮಾನಿ, ಆತ್ಮಾಭಿಮಾನಿ. "ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತ ಕಾಲ ತಪಿಸಿದ್ದೆ ನೋಡಾ" "ಅವನೇ ತನ್ನ ಪತಿ ಮಿಕ್ಕ ಲೋಕದ ಗಂಡರ ಅರಿವೆನಗಿಲ್ಲ" ಹೀಗೆ ಅದಕ್ಕೆ ತಕ್ಕ ಜವಾಬು ಕೊಟ್ಟು ತನ್ನ ಶುದ್ಧ ಚಾರಿತ್ರ್ಯವನ್ನು ಪರಿಚಯಿಸಿಕೊಂಡ ಅಕ್ಕನ ಮನೋಧರ್ಮ ಮೆಚ್ಚುವಂಥದ್ದು. ಪ್ರಭುತ್ವ ಪತಿತ್ವವನ್ನು ಏಕಕಾಲದಲ್ಲಿ ಧಿಕ್ಕರಿಸಿ ಹೊರಟ ಅಕ್ಕ ಮೊಟ್ಟ ಮೊದಲ ಬಂಡಾಯಗಾರ್ತಿ.

ಗಿರಿಯಲಲ್ಲದೆ ಹುಲ್ಲು ಮೊರಡಿಯಲ್ಲಾಡುವುದೇ ನವಿಲು? ಕೊಳಕ್ಕಲ್ಲದೆ ಕಿರುವಳ್ಳಕ್ಕೆಳೆಸುವುದೇ ಹಂಸೆ? ಮಾಮರವೇ ಕೋಗಿಲೆಯೆ, ಕೊಳನ ತಡಿಯೊಳಾಡುವ ಹಂಸೆಗಳಿರಾ ನೀವು ಕೇಳಿರೇ ಎನ್ನುವ ಅಕ್ಕ ಪ್ರಾಣಿ ಪ್ರಿಯಳಾದಂತೆ ಪ್ರಕೃತಿ ಪ್ರಿಯಳೂ ಹೌದು.

**ವನವೆಲ್ಲಾ ಕಲ್ಪತರು, ಗಿಡವೆಲ್ಲಾ ಮರುಜವಣಿ**
**ಶಿಲೆಗಳೆಲ್ಲಾ ಪರುಷ, ನೆಲವೆಲ್ಲಾ ಅವಿಮುಕ್ತ ಕ್ಷೇತ್ರ**
**ಜಲವೆಲ್ಲಾ ನಿರ್ಜರಾಮೃತ ಮೃಗವೆಲ್ಲಾ ಪುರುಷಾಮೃಗ**
**ಎಡಹುವ ಹರಳೆಲ್ಲಾ ಚಿಂತಾಮಣಿ**
**ಚೆನ್ನಮಲ್ಲಿಕಾರ್ಜುನಯ್ಯನ ನಚ್ಚಿನ ಗಿರಿಯ ಸುತ್ತಿ ನೋಡುತ್ತಾ**
**ಬಂದು ಕದಳಿ ಬನವ ಕಂಡೆ ನಾನು**

ದಟ್ಟ ಕಾಡಿನಿಂದಾವೃತವಾದ ಕದಳಿಯನ್ನು ಸುತ್ತಿ ಕಂಡೆನೆಂದ ಅಕ್ಕ ದಿಟ್ಟೆದೆಯ ಹೆಣ್ಣು. ಈ ಮೂಲಕ ಅವಳ ಪರಿಸರ ಪ್ರೀತಿಯನ್ನು ಕಾಣುತ್ತೇವೆ. ಈಳೆ ನಿಂಬೆ ಮಾವು ಮಾದಲಕೆ ಹುಳಿನೀರನೆರೆದವರಾರಯ್ಯ .. .. .. .." ಎಂಬ ವಚನದ ಮೂಲಕ ನೀರಿನ ಮಣ್ಣಿನ ವೈವಿಧ್ಯ ಗುಣವನ್ನು ತಿಳಿಸುತ್ತಲೇ ಈ ಲೋಕದಲ್ಲಿ ನಿನ್ನನ್ನೆ ನಂಬಿಹ ತನ್ನ ಪರಿಯೇ ಬೇರೆಂದು ಮಲ್ಲಿಕಾರ್ಜುನನಲ್ಲಿ ಭಿನ್ನವಿಸುತ್ತಾಳೆ.

ಕಾಡು ಮೇಡಿನಲ್ಲಿ ಒಂಟಿ ಹೆಣ್ಣಿಗೆ ಈ ಪರಿಯ ಪಯಣ ಪ್ರವೇಶ ಅಷ್ಟು ಸುಲಭದ್ದಲ್ಲ. ಹಂಬಲದ ಅನುರಾಗ ಅವಳ ಪ್ರಕೃತಿ ಪ್ರೀತಿ. ಗಿಡ ಮರ ಪಕ್ಷಿ ಪ್ರಾಣಿ ಸಂಕುಲದೊಂದಿಗೆ ನಡೆದ ಅವಳ ಸಂವಹನ ಕ್ರಿಯೆ ಬಹು ದೊಡ್ಡದು. ಅವಳು ಬೇಡಿದ್ದನ್ನು ಕೊಟ್ಟು ಪ್ರಕೃತಿಯ ಚರಾಚರವು ಭಕ್ತಿ ಮೆರೆದವು. ಅಕ್ಕ ಬೇಡಿ ಭವಿಯಾದವಳು ಎಂಬ ಮಾತು ಅವಳ ಅಂತರಂಗದ್ದೆ. ಇದು ಅವಳು ಸೃಷ್ಠಿಯಲ್ಲಿ ಅನುಭವಿಸಿದ ಶಿವದರ್ಶನ ಭಾಗ್ಯ.

**ಎನ್ನಂತೆ ಪುಣ್ಯಗೈದವರುಂಟೆ, ಎನ್ನಂತೆ ಭಾಗ್ಯಗೈದವರುಂಟೆ ಕಿನ್ನರನೆಂತಪ್ಪ ಸೋದರನೆನಗೆ, ಏಳೇಳು ಜನ್ಮದಲ್ಲಿ ಶಿವಭಕ್ತರೆ ಬಂಧುಗಳೆನಗೆ ಚೆನ್ನಮಲ್ಲಿಕಾರ್ಜುನನಂತ ಗಂಡ ನೋಡಾ ಎನಗೆ**

ಎಂದು ಹೆಮ್ಮೆಪಡುವ ಅವಳ ಶಿವನೊಲುಮೆಯ ಹಂಬಲ ವೈರಾಗ್ಯಗಳು ನಮ್ಮ ಮನ ತುಂಬಿ ನಿಲ್ಲುತ್ತವೆ. ಸ್ತ್ರೀ ಬದುಕಿನ ಹೊಸ ದನಿ ಕೇಳಿಸುತ್ತದೆ. ಋಜು ಮಾರ್ಗದಲ್ಲಿ ನಡೆದು ತಮ್ಮ ವೈರಾಗ್ಯ ಸಾಧನೆಯ ಮೂಲಕ ಆತ್ಮ ವಿಕಾಸದ ಪರಮಾವಧಿಯನ್ನು ಮುಟ್ಟಿ ದೈವತ್ವದ ಪರಮ ಸಿದ್ಧಿಯನ್ನು ಪಡೆದ ಅಕ್ಕ ಲಿಂಗಾಯತ ಧರ್ಮದ ಹಿನ್ನೆಲೆಯ ವೀರ ವಿರಾಗಿಣಿಯೆ ಸರಿ. ನಮ್ಮ ಕನ್ನಡ ನಾಡು ಕಂಡ ಆಧ್ಯಾತ್ಮ ಮಂದಾರ ಪುಷ್ಪ. ವಚನ ಸಾಹಿತ್ಯದ ಉತ್ಕೃಷ್ಟ ರತ್ನಗಳಲ್ಲಿ ಮಹಾರತ್ನ ಇವಳೇ ಆಗಿದ್ದಾಳೆ. ಅಕ್ಕನ ವಚನಗಳು ಲೋಕೋಕ್ತಿಯನ್ನು ಲೋಕ ಸಂದೇಶವನ್ನು ಸಾರುತ್ತವೆ.

"ಬೆಟ್ಟದಾ ಮೇಲೊಂದು ಮನೆಯ ಮಾಡಿ ಮೃಗ ಗಳಿಗಂಜಿದೊಡೆಂತಯ್ಯಾ, ಸಮುದ್ರದಾ ತಡಿಯಲೊಂದು ಮನೆಯ ಮಾಡಿ ನೊರೆತೊರೆಗಳಿಗಂಜಿದೊಡೆಂತಯ್ಯಾ 'ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕೆ ನಾಚಿದೊಡೆಂತಯ್ಯಾ" ಎನ್ನುವ ಅಕ್ಕ ತನ್ನ ವಚನದ ಕಡೆಯಲ್ಲಿ ಅರ್ಥಪೂರ್ಣವಾದ ಲೋಕಸಂದೇಶವನ್ನು ಹರಿಯಬಿಟ್ಟಿದ್ದಾಳೆ. ವಾಚ್ಯಾರ್ಥದಿಂದ ನಮಗೆ ಇದರ ಅರ್ಥ ಬೇಗ ದಕ್ಕಿ ಬಿಡುತ್ತದೆ. ಅಕ್ಕ ಹೇಳುವಂತೆ ಈ ದೇಹ ಕೂಡ ಬೆಟ್ಟ, ಸಂತೆ, ಸಮುದ್ರ ಇದ್ದಂತೆ. ಇವೆಲ್ಲಾ ನಮಗೆ ದೃಗ್ಗೋಚರವಾಗುವಂಥವು. ಮೃಗಗಳ ಕಂಡಾಗ ಆಗುವ ಅಂಜಿಕೆ, ಕಿವಿಗೆ ಅಪ್ಪಳಿಸುವ ನೊರೆತೊರೆಗಳು, ಶಬ್ದ ಇವೆಲ್ಲ ಲೌಕಿಕಾನುಭವ ನೀಡುವಂಥವು. ಇವು ಕೇವಲ ಪ್ರತಿಮೆಗಳಷ್ಟೆ. ಆದರೆ ಸೂಚ್ಯಾರ್ಥವೇ ಬೇರೆ. ಒಳಗೆ ಏನೆಲ್ಲಾ ನಡೆಯುತ್ತಿರುತ್ತವೆ ಎಂಬುದು ಎಲ್ಲರಿಗೂ ಅನುಭವೇದ್ಯವಾದುವು. ಎಂದರೆ ಅಕ್ಕ ಹೇಳುವ ಶಬ್ದಗಳೆಂದರೆ ನಮಗರಿವಿಲ್ಲದಂತೆ ನಮ್ಮೊಳಗೆ ಇದ್ದು ನಮ್ಮನ್ನು ದಿಕ್ಕುಗೆಡಿಸುವ ಅರಿಷಡ್ವರ್ಗಗಳು. ಕಾಮ, ಕ್ರೋಧ, ಲೋಭ, ಮೋಹ ಮದ ಮತ್ಸರಗಳು ನಮ್ಮ ಮನಸ್ಸನ್ನು ಸಡಿಲ ಬಿಟ್ಟಲ್ಲಿ ನಮ್ಮನ್ನೆ ಆಳುವ ಅರಸರಾಗುವಂಥವು. ಈ ದೇಹವೆಂಬ ಬೆಟ್ಟದೊಳಗೆ ಇವು ನೆಲೆಯೂರಿ ತಮ್ಮಿಚ್ಛೆಗೆ ತಕ್ಕಂತೆ ವರ್ತಿಸುವಂಥವು. ಪದೇಪದೇ ಅಪ್ಪಳಿಸುವ ಅಲೆಯಂತೆ ನಮ್ಮನ್ನು ಅದೇ ವರ್ತುಲದೊಳಗೆ ಸಿಕ್ಕಿಸುವಂಥವು. ಇಂತಹ ಭಾವನೆಗಳಿಗೆ ಒಳಗಾಗಿ ಸೋತ ಮನಸ್ಸುಳ್ಳ ವ್ಯಕ್ತಿಗಳು ನಮ್ಮನ್ನು ಅಂದು ಆಡಿ ಕುಗ್ಗಿಸಬಹುದು. ಈ ಮನೋಭಾವಗಳಿಗೆ ನಾವು ತುತ್ತಾಗದೆ ನಮ್ಮ ದೃಢ ನಿಲುವನ್ನು ಮುಟ್ಟಬೇಕು. ಯಾರು ಏನೆಂದರೂ ಅಂದರೆ ಸ್ತುತಿಸಿದರೂ ನಿಂದಿಸಿದರೂ ಅಂಜದೆ ಅಳುಕದೆ ಇರಬೇಕೆಂಬ ದಿಟ್ಟ ನಿಲುವು ಯಾವ ಕಾಲದ ಯಾರಿಗೆ ತಾನೇ ಬೇಕಾಗುವುದಿಲ್ಲ ಹೇಳಿ.

ಅಕ್ಕನ ಈ ರೀತಿಯ ವ್ಯಕ್ತಿತ್ವವನ್ನು ಪ್ರಸ್ತುತ ಸಮಾಜ ಹೇಗೆ ಸ್ವೀಕರಿಸಬಲ್ಲದು. ಈ ತಾಂತ್ರಿಕ ಯುಗದಲ್ಲಿ ಪ್ರತಿಯೊಂದನ್ನು ಪ್ರಶ್ನಿಸುತ್ತಲೆ ಇರುವ ಮನಸ್ಸುಗಳಿಗೆ ಇದು ಪಥ್ಯವಾಗಬಲ್ಲದೆ? ಹೆಣ್ಣು ಗಂಡೆಂಬ ತಾರತಮ್ಯದ ಇಂದಿನ ತಗ್ಗುವಿಕೆಯಲ್ಲಿ ಇಂತಹ ಘಟನೆಗಳೊಮ್ಮೆ ನಡೆದರೆ ಹೇಗಿರುತ್ತದೆ. ಅಕ್ಕನ ನಿಲುವುಗಳನ್ನು ಇಂದಿನವರು ಹೇಗೆ ಸ್ವೀಕರಿಸಿಯಾರು.

ತನ್ನ ಮನದಿನಿಯನನ್ನು ಕೂಡಲು ಕದಳಿ ಬನದತ್ತ ಸಾಗಿ ಅವನೊಂದಿಗೆ ಲೀನವಾದವಳು. ಕದಳಿ ಬನವನ್ನು ಪ್ರವೇಶಿಸಿ ಅಲ್ಲೆ ಲೀನವಾದ ಏಕೈಕ ವ್ಯಕ್ತಿಯೆಂದರೆ ಅಕ್ಕ ಒಬ್ಬಳೆ. ಅಕ್ಕ ಶರಣರೆಲ್ಲರ ಮನೆ ಮಗಳು ಅಕ್ಕನದು ವಿನಯವಂತಿಕೆ. ಶರಣ ಸಮೂಹಕ್ಕೆ ಹೂವ ತಂದವಳು. ಅಕ್ಕ ಕಲ್ಯಾಣವನ್ನು ಮಹಾಮನೆಯನ್ನು ಪ್ರವೇಶಿಸುವಾಗ ಎದುರಾದ ಸಮಸ್ಯೆಗಳು ಗಂಡಿಗೂ ಹೇರಲ್ಪಡುತ್ತಿದ್ದವೆ? ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತದೆ. ಒಂದೊಮ್ಮೆ ಪುರುಷರಿಗೂ ಇದೇ ಪ್ರಸಂಗಗಳು ಬಂದಿದ್ದರೆ ಅವರ ಪ್ರತಿಕ್ರಿಯೆಗಳು ಹೇಗಿರುತ್ತಿದ್ದವು? ಅದೇ ವಿವಿಧ ರಾಜ್ಯಗಳಿಂದ ದೇಶಗಳಿಂದ ಪ್ರಾಂತ್ಯಗಳಿಂದ ಬಂದ ಶರಣ ಶರಣೆಯರಿಗೆ ಇಲ್ಲದ ಪರೀಕ್ಷೆ ಈ ಅಕ್ಕನಿಗೆ ಅಗ್ನಿ ಪರೀಕ್ಷೆಯಾಗಿ ಕಾಡಿತು.

ಅಕ್ಕ ತನ್ನ ಬದುಕನ್ನು ಸಮೀಕರಿಸಿಕೊಂಡ ಆ ಮಲ್ಲಿಕಾರ್ಜುನ ಯಾರು? ಅವನನ್ನು ಯಾವ ರೂಪದಲ್ಲಿ ಕಂಡಳು ಎಂಬ ಪ್ರಶ್ನೆ ನಮ್ಮನ್ನು ಚಿಂತನೆಗೆ ಹಚ್ಚುತ್ತದೆ.. ಅವಳ ಹಲವು ವಚನಗಳಲ್ಲಿ ಲೌಕಿಕತೆಯ ಆಸೆ ಆಕಾಂಕ್ಷೆಗಳು ಇಲ್ಲದಿಲ್ಲ. ಅಂದ ಮೇಲೆ ಅವಳು ತನ್ನ ಅಲೌಕಿಕ ಪತಿಯಲ್ಲಿ ಹೇಗೆ ಅನುಭವಿಸಿದಳು. ಆದರೂ ಅವಳದು ಮಲ್ಲಿಕಾರ್ಜುನನೊಂದಿಗಿನ ಅಚಲ ಸಂಬಂಧ. ರಾಗ ಭಾವಗಳನ್ನು ಸಹಜ ಪ್ರೇಯಸಿಯಾಗಿ ತನ್ನ ಪ್ರಣಯ ಭಾವಗಳನ್ನು ಲಿಂಗ ಧ್ಯಾನದಲ್ಲಿ ಅನುಸಂಧಾನ ಮಾಡಿಕೊಂಡಿರುವ ಉದಾತ್ತಳು. ನಮ್ಮ ಶರಣರು ಉದಾತ್ತೀಕರಣ ಎಂಬುದು ಕೇವಲ ಗಂಡಿನಲ್ಲಿ ಮಾತ್ರವಲ್ಲ ಹೆಣ್ಣಿನಿಂದಲೂ ಸಾಧ್ಯವೆಂಬುದನ್ನು ಇವಳ ವ್ಯಕ್ತಿತ್ವ ಪರೀಕ್ಷಿಸುವುದರ ಮೂಲಕ ತೋರಿದ್ದಾರೆ.

ಅವಳ ವಚನಗಳಲ್ಲಿ ಶಿವಸ್ವರೂಪಿ ಮಲ್ಲಿಕಾರ್ಜುನನ ಚಿತ್ರಣಗಳಿವೆ. ಅವನು ದೇವನೆ? ಅವನು ನಿರಾಕಾರನೆ? ಅವನು ಜಂಗಮರೂಪಿಯೆ? ಅವನು ಶಿವನೆ? ಅವನು ಸಾಮಾನ್ಯ ಮನುಷ್ಯನೆ? ಅವನು ಅಲೌಕಿಕನೆ ? ಅಲೌಕಿಕನಾಗಿದ್ದರೆ ಅವನ ರೂಪು ಅಕ್ಕ ತನ್ನ ವಚನಗಳಲ್ಲಿ

ಹೇಳಿಕೊಂಡಿರುವುದಕ್ಕಿಂತಲೂ ಹೊರತಾಗೆ ಇದ್ದೀತೆ? ಇದ್ದರೆ ಅದು ಹೇಗಿತ್ತು? ಅವನು ಲೋಕದ ಗಂಡಂದಿರ ಸ್ವರೂಪಿಯೆ. ಹೀಗೆಯೇ ಎಂದು ನಿರ್ಧರಿಸಲು ಆಗದು. ಅದೇನೆ ಆಗಲಿ ಅಕ್ಕಮಹಾದೇವಿ ಎಲ್ಲ ಸಾಮಾನ್ಯ ಹೆಣ್ಣು ಮಕ್ಕಳಂತೆ ಗಂಡನೊಂದಿಗಿನ ಬದುಕನ್ನು ಅನುಭವಿಸಲಿಲ್ಲ. ಅವಳ ದೇಹ ಮನಸ್ಸು ಕೌಶಿಕನ ದೇಹ ವ್ಯಾಪ್ತಿಗೆ ಸಿಲುಕಿದ್ದರೆ ಅವನ ನೋಟಕ್ಕೆ ತನ್ನ ನೋಟ ನೆಟ್ಟಿದ್ದರೆ ಅಕ್ಕ ಅಕ್ಕನಾಗಿ ಉಳಿಯುತ್ತಿರಲಿಲ್ಲ. ಏಳೆಂದರೆ ಏಳುವ ಕೂರೆಂದರೆ ಕೂರುವ ಕೌಶಿಕನರಮನೆಯ ಮಂಚದ ಗೊಂಬೆಯಾಗಿರುತ್ತಿದ್ದಳು. ತಾನು ತನ್ನದೆಂಬುದೆಲ್ಲವನ್ನು ಅರಸನಿಗೆ ಧಾರೆಯೆರೆದು ಇತರ ರಾಣಿಯರಂತೆ ಬರಡು ಬದುಕನ್ನು ನಡೆಸುತ್ತಿದ್ದಳೆನೋ? ಆದರೆ ಅಕ್ಕ ತನ್ನ ಶರೀರವನ್ನು ಸತಿಯ ಸ್ಥಾನದಲ್ಲಿರಿಸಿದಳು. ತನ್ನ ಇಂದ್ರಿಯಗಳ ಚಾಪಲ್ಯವನ್ನು ಕಳೆದು ಭಕ್ತೆ ಸತಿಯಾಗಿ ಲಿಂಗ ಪತಿಗೆ ಒಲಿಯುವುದು ಸಾಮಾನ್ಯರಿಂದಾಗದ ಕೆಲಸ. ಒಂದೊಮ್ಮೆಗೆ ಎಲ್ಲ ಲೌಕಿಕ ವ್ಯಾಮೋಹಗಳಿಂದ ಬಿಡುಗಡೆ ಹೊಂದಿ ಮೈಯ ಕೊಡವಿದಳು. ಜ್ಞಾನ, ಚಿಂತನೆ, ಮಂಥನಗಳ ಧೀರ ನಿಲುವಿನಿಂದ ಲೌಕಿಕದಾಚೆಗೆ ನಿಂತಳು. ಮಹಾದೇವಿ ತನ್ನ ಯುಕ್ತಿ, ಭಕ್ತಿ, ಲೋಕದೊಳಗಿದ್ದು ಅವಳು ಕಾಪಾಡಿಕೊಂಡ ಏಕಾಗ್ರತೆ, ಸ್ಥಿರತೆ, ತ್ಯಾಗ, ಸಾಧನೆ ಕೆಚ್ಚು ನೆಚ್ಚು ಸಾಮರ್ಥ್ಯ ಸಂವೇದನೆಗಳಿಂದ ಅಕ್ಕ ಆದಳು.

ಅಕ್ಕನಂತಹ ಅನುಭಾವಿಕ ಆಧ್ಯಾತ್ಮ ಜೀವಿಯ ನಿಲುವುಗಳನ್ನು ಅರಿತಾಗ ಇತರೆಲ್ಲ ಶರಣ ಶರಣೆಯರಿಗಿಂತ ಅವಳ ಬದುಕೊಂದು ವಿಶಿಷ್ಟವಾದುದು. ಅವಳ ಆತ್ಮಾನುಸಂಧಾನ, ಉನ್ಮಾದದ ಶೃಂಗಾರ ಭಾವ, ನಮ್ಮ ಮನದಾಳಕ್ಕೆ ಅಷ್ಟು ಸುಲಭವಾಗಿ ದಕ್ಕುವುದಿಲ್ಲ. ಆ ದಕ್ಕಿಸಿಕೊಳ್ಳುವಿಕೆ ಅಕ್ಕನಿಂದ ಮಾತ್ರ ಸಾಧ್ಯವಾಯಿತು.

ಅವಳ ಆಧ್ಯಾತ್ಮಿಕ ನಿಲುವಿನ ಅಭಿವ್ಯಕ್ತಿಯ ವೈಶಿಷ್ಟ್ಯತೆಗಳೇ ಅಕ್ಕನಲ್ಲಿ ಕಡೆಗೆ ಆಧ್ಯಾತ್ಮಿಕ ಅಂತಿಮ ಸತ್ಯವಾಗಿ ತಾನು ಮೆಚ್ಚಿದ ಮನದನ್ನನ ಕೂಡೆ ಶಾಶ್ವತವಾಗಿ ಉಳಿಸಿದವು. ಶರಣ ಸತಿ-ಲಿಂಗ ಪತಿ ಭಾವ ಮೆರೆದ ವಚನಕಾರ್ತಿಯೊಬ್ಬಳ ಸತ್ವಯುತ ಹೋರಾಟ. ಮಾನವ ಇತಿಹಾಸದಲ್ಲಿ ಅಕ್ಕನದು ತುಂಬು ಬಾಳು. ಇಂಥವರು ಅಪರೂಪಕ್ಕೊಮ್ಮೆ ಹುಟ್ಟುತ್ತಾರೆ. ಈ ಅಪರೂಪದ ಅಕ್ಕ ನಮ್ಮ ನಾಡಿನಲ್ಲಿ ಹುಟ್ಟಿರುವುದೇ ನಮ್ಮೆಲ್ಲರ ಪುಣ್ಯ. ಆಕೆಯ ಬದುಕು ಯುಗ ಯುಗಗಳ ಮುಂದಿನ ಪೀಳಿಗೆಗೆ ಆದರ್ಶವಾದುದು. ಹೀಗಾಗಿ ಅಕ್ಕ ಎಂದೆಂದಿಗೂ ಉಳಿಯ ಬಲ್ಲವಳಾಗಿದ್ದಾಳೆ.

ಹದಿನಾರು ಹದಿನೆಂಟರ ಹರೆಯದ ಸ್ಫುರದ್ರೂಪಿ, ಸುಶಿಕ್ಷಿತ, ಸುಸಂಸ್ಕೃತ ವಾತಾವರಣದಿಂದ ಬಂದ ಹೆಣ್ಣು ಮಗಳೊಬ್ಬಳು ಲೌಕಿಕವ ತೊರೆದು ಬೌದ್ಧಿಕತೆ ಮೆರೆದು ವೀರ ವಿರಕ್ತೆಯಾಗಿ ಶಿವನ ಸಂಗ ಬಯಸಿ ಕಾಡು ಮೇಡೆನ್ನದೆ, ಗಿರಿ ಗಹ್ವರಗಳೆನ್ನದೆ ಸುತ್ತಿ ಸುಳಿದು ಹೊಕ್ಕು ವೈರಾಗ್ಯ ನಿಧಿಯಾದುದು ಪ್ರಪಂಚದ ಇತಿಹಾಸದಲ್ಲಿಯೆ ವಿರಳವಾದುದು. ಲೋಕವೇ ಸೋಜಿಗ ಪಡುವಂತೆ ಬಾಳಿದ ಅಕ್ಕನ ವ್ಯಕ್ತಿತ್ವವನ್ನು ಅವಳ ಜೀವನ ವೃತ್ತಾಂತವನ್ನು ಕುರಿತು ನಮ್ಮ ಜನಪದರು ಈ ರೀತಿಕಟ್ಟಿ ಹಾಡಿದ್ದಾರೆ.

**ಅಕ್ಕ ನಿನ್ನ ಹಾಡುಎತ್ತಿ ನಾ ಹಾಡಿದರೆ**
**ಗಕ್ಕಂತ ಪಾಪ ಕಳೆದಾವು । ಕೈಲಾಸ**
**ಪಕ್ಕಕ ಬಂದು ನೆಲೆಸ್ಯಾವ**

**ಉಡುತಡಿಯೆಂಬುದು ಮಡಿಯಾಯ್ತು ನಿನ್ನಿಂದ**
**ಸಡಗಾರ ನೋಡೋಕೆ ಶಿವ ಬಂದ । ಮಾದೇವಿ**
**ಅಡಿಯಾದ ನಿನ್ನ ಭಕುತಿಗೆ**

**ವಯದಾಗ ಸಣ್ಣಾಕಿಗುಣದಾಗದೊಡ್ಡಾಕಿ**
**ಮಾಯಾ ಮೋಹವ ಬಿಟ್ಟಾಕಿ । ಮಾದೇವಿ**
**ಎಲ್ಲರ ಬಾಯಾಗ ಅಕ್ಕಾಗಿ**

**ಗಟ್ಟಿಯ ನಿಲುವದು ದಿಟ್ಟತಾ ಹೆಜ್ಜೆಯ**
**ಉಟ್ಟಿದ್ದಾ ವಸ್ತ್ರಕೊತ್ತೊಗೆದು ಮಾದೇವಿ**
**ಸುಟ್ಟಾಳ ಕಾಮ ಕ್ರೋಧವಾ**

**ಮಾದೇವಿ ಕೂದಲುಕರಿಮೋಡ ಇಳಿದಾಂಗ**
**ಕರಿ ಸರ್ಪ ಹಾಯ್ದು ನಡೆದಂಗ । ಬೆನ್ನ ಹಿಂದೆ**
**ಕರಿ ಬೆಟ್ಟದ ಹಾಂಗ ಕಂಡಾವ**

**ಕಲ್ಯಾಣಕೆ ಬಂದಾಳ ಕಲ್ಯಾಣದ ಮಗಳಾಗಿ**
**ಎಲ್ಲರಿಗಿ ಅಕ್ಕ ತಾನಾಗಿ । ಬಸವಣ್ಣಗ**
**ಹೊಟ್ಟೆಯ ಸುತೆಗಿಂತ ಹೆಚ್ಚಾಗಿ**

**ಶಿವಯೋಗಿ ಮಾದೇವಿ ಶಿವಯೋಗ ಕಲಿಸ್ಯಾಳ**
**ಅವಯವಒಂದು ಮಾಡ್ಯಾಳ। ಲಿಂಗದಾಗ**
**ಶಿವನೆ ತಾನು ಆಗ್ಯಾಳ**

**ಕದಳಿಗೆ ಬಂದಾಳ ಕದಳೀಯ ಸೊಸೆಯಾಗಿ**
**ಕದಳಿಗಿ ಒಡೆಯನ ಮಡದ್ಯಾಗಿ । ಮಾದೇವಿ**
**ಕದಳಿಯ ಬನದ ಒಡತ್ಯಾಗಿ**

# ಶರಣರ ಸಾರ್ವತ್ರಿಕ ಮೌಲ್ಯಗಳು

ಮಾನವ ಬದುಕನ್ನು ಪಕ್ವವಾಗಿ ಹದಗೊಳಿಸುವ ಅಗೋಚರ ಸಕಾರಾತ್ಮಕ ಮೌಲ್ಯಗಳಾಗಿವೆ. ಮಾನವ ಸಂಘ ಮತ್ತು ಸಮೂಹ ಜೀವಿ. ತಮ್ಮ ಜೀವನ ಚಕ್ರದಲ್ಲಿ ಪರಸ್ಪರ ಸೌಹಾರ್ದತೆಯಿಂದ ಬಾಳ್ವೆ ಮಾಡಲು ಮತ್ತು ಸಮಾಜದಲ್ಲಿ ಸುಖ-ಶಾಂತಿಯುತರಾಗಿ ಜೀವನ ಬಂಡಿಯಲ್ಲಿ ಸಾಗಲು ಕೆಲವು ಮೌಲ್ಯಗಳು ಮನುಕುಲದ ಉನ್ನತಿಗೆ ಅಗತ್ಯವಾಗಿವೆ. ಕೆಲವು ನೀತಿ ನಿಯಮಗಳು ಬಹಳ ಹಿಂದಿನ ವರ್ಷಗಳಲ್ಲಿಯೇ ಶರಣ-ಶರಣೆಯರು ತಮ್ಮ ಅನುಭವಗಳ ಸಾರಸಂಗ್ರಹಗಳು ವಚನಗಳ ರೂಪದಲ್ಲಿ ಪ್ರಕಟಗೊಂಡಿವೆ.

ಬದಲಾವಣೆ ಜಗದ ನಿಯಮ, ಜನರ ಜೀವನದ ಸಹಜಸ್ಥಿತಿಯಲ್ಲಿ ಅನಿವಾರ್ಯವಾಗಿದೆ. ಬದಲಾವಣೆ ಔನ್ನತ್ಯ ರೇಖೆಯಂತೆ ಇರಬೇಕು. ಬದಲಾವಣೆಗಳೊಂದಿಗೆ ಮಾನವೀಯ ಹಾಗೂ ನೈತಿಕ ಮೌಲ್ಯಗಳು ಪತನದತ್ತ ಸಾಗುತ್ತಿರುವುದು ವಿಷಾದದ ಸಂಗತಿಯಾಗಿದೆ. ಪ್ರಾಚೀನಕಾಲದಿಂದ ರೂಡಿಸಿಕೊಂಡ ಮೂಲ ಸಂಪ್ರದಾಯ ಆಚರಣೆ ಪದ್ಧತಿಗಳು, ನೀತಿ ನಿಯಮಗಳು, ಧರ್ಮ, ತತ್ವಜ್ಞಾನ, ನಾಗರೀಕತೆ ಹಾಗೂ ಸುಖ-ಶಾಂತಿಯ ಜೀವನಕ್ಕೆ ಮೂಲಾಧಾರಸ್ತಂಭಗಳಾಗಿವೆ. ಧರ್ಮ ಎಂಬ ಶಬ್ದಕ್ಕೆ ಜಾತೀಯತೆಯ ಜಟಿಲತೆಯಿಂದ ಸಂಕುಚಿತರಾಗಿ ಮತ್ತು ಸ್ವಾರ್ಥಕ್ಕಾಗಿ ಬಳಸುವ ನೀತಿಗಳನ್ನ ಪ್ರಶ್ನಿಸುವ ಪ್ರಯತ್ನ ನಡೆಡಿದೆ.

ಭಾರತೀಯ ಸಮಾಜದಲ್ಲಿನ ವಿದ್ವಂಸಕ ಕೃತ್ಯಗಳು ಕೊಲೆ, ಸುಲಿಗೆ, ದರೋಡೆ, ಅಪಹರಣ, ದುರ್ಬಲರ ಮೇಲೆ. ನಡೆಸಬಹುದಾದ ಶೋಷಣೆ, ಮಹಿಳೆಯರು ಮತ್ತು ಮಕ್ಕಳ ಅಪಹರಣ, ಆರ್ಥಿಕ ಅಸಮಾನತೆ, ವರ್ಗಭೇದ, ಲಿಂಗಬೇದ, ವರ್ಣಸಂಘರ್ಷ ವಿರುದ್ಧ ಜನರು ಕಂಗಾಲಾದ ಇಂತಹ ಅನಿಶ್ಚಿತ ಪರಿಸ್ಥಿಯಲ್ಲಿ 12ನೇ ಶತಮಾನದ 770 ಶರಣ ಶರಣೆಯರು, ಆಧ್ಯಾತ್ಮಿಕ ಚಿಂತಕರು, ಸಮಾಜ ಮತ್ತು ಧರ್ಮ ಸುಧಾರಕರು, ದಾಸ ಶ್ರೇಷ್ಠರು ಅನಿಷ್ಟ ವ್ಯವಸ್ಥೆಯನ್ನು ಪುನರ್ ನವೀಕರಿಸುವ ಕ್ರಾಂತಿಕಾರಿ ಚಳುವಳಿಗಳು ಅನಿವಾರ್ಯ ಎಂದು ಪ್ರತಿಪಾದಿಸಿದರು. ಧರ್ಮದ ಮೂಲ ತತ್ವಗಳು ನೈತಿಕ ನೆಲೆಗಟ್ಟಿನ ಮೇಲೆ ರೂಪಿತವಾಗಿವೆ. ಧರ್ಮವು ವ್ಯಕ್ತಿಯ ಸಂದರ್ಭ ಹಾಗೂ ಪರಿಣಾಮಗಳಿಗೆ ತಕ್ಕಂತೆ. ಇತ್ತೀಚಿಗೆ ಧರ್ಮದ ವ್ಯಾಖ್ಯಾನವು ಬದಲಾಗುತ್ತಿದೆ.

ಪ್ರಾಚೀನ ಕಾಲದಿಂದಲೂ ಧರ್ಮಗ್ರಂಥಗಳಲ್ಲಿ ಮೌಲ್ಯಗಳನ್ನು ವಿವೇಚಿಸಲಾಗಿದೆ. ಚಾರಿತ್ರಿಕ ಧರ್ಮ ಸಿದ್ಧಾಂತಗಳ ಪ್ರತಿಪಾದಕರಾದ ಶಂಕರಾಚಾರ್ಯರು ಅದ್ವೈತ ಸಿದ್ಧಾಂತವನ್ನು ರಾಮಾನುಜಾಚಾರ್ಯರು - ವಿಶಿಷ್ಟಾದ್ವೈತ ಸಿದ್ದಾಂತವನ್ನು, ಮದ್ವಾಚಾರ್ಯರು-ದ್ವೈತ ಸಿದ್ದಾಂತವನ್ನು, ಲಿಂಗಾಯತ ಧರ್ಮದ ಪ್ರತಿಪಾದಕರು-ಶರಣರು, ಆತ್ಮ-ಪರಮಾತ್ಮ ಜೀವ-ಜಡ ಪ್ರಪಂಚ, ದಾಸೋಹ, ಕಾಯಕ ಹಾಗೂ ಜಾತ್ಯಾತೀತ ತತ್ವಗಳನ್ನು ಜನಮಾನಸದಲ್ಲಿ ವೈಚಾರಿಕತೆಯ ದೀವಿಗೆಯನ್ನಚ್ಚಿದರು. ವಿಶ್ವಮಾನವ ಬಸವೇಶ್ವರ ಮತ್ತು ಅವರಿಂದ ಸಂಸ್ಥಾಪಿಸಲ್ಪಟ್ಟ ಅನುಭವ ಮಂಟಪದ ಸದಸ್ಯ ಶರಣ-ಶರಣೆಯರು ವಿಚಾರ ಗೋಷ್ಠಿ ನಡೆಸಿ ತಮ್ಮ ಅನುಭಾವ ಮತ್ತು ಅನುಭವ ಆಧಾರಿತ ವಿಚಾರಗಳನ್ನ ಸ್ಥಳ, ಕಾಲ, ದೇಶ, ಜನಾಂಗ, ಲಿಂಗ, ವರ್ಗ, ತಾರತಮ್ಯ ಎನಿಸದೆ. ಸರ್ವರಿಗೂ ಸರ್ವಕಾಲಕ್ಕೂ ಪ್ರಸ್ತುತವಾಗುವಂತಹ ಅತ್ಯಮೂಲ್ಯ ಜೀವನ ಮೌಲ್ಯಗಳನ್ನು ವಚನ ಜ್ಯೋತಿಯ ಮೂಲಕ ಕೊಡುಗೆ ನೀಡಿದ್ದಾರೆ.

ಶರಣರಿಂದ ಪ್ರಾಣಿ ಹತ್ಯೆ, ಮದ್ಯಪಾನ, ಆತ್ಮಹತ್ಯೆ, ಮೋಸ, ಅಪಹರಣ, ಪೋಷಕರ ನಿಂದನೆ, ಗುರು ಹಿರಿಯರಿಗೆ ಅಗೌರವ, ನಿರ್ಲಕ್ಷ್ಯ, ಧೋರಣೆ ಇತ್ಯಾದಿ ಕೆಟ್ಟ ಗುಣಗಳ ವಿರುದ್ದ ಮತ್ತು ಸತ್ಯ, ಶುದ್ಧ, ಕಾಯಕ, ಅಹಿಂಸೆ, ಪರೋಪಕಾರ, ಸುಜ್ಞಾನ, ಸುವಿಚಾರ, ಸಜ್ಜನಿಕೆಯ ನಡವಳಿಕೆ ಸಂಯಮ ಪ್ರಿಯ ಭಾಷೆ, ನಾಡು-ನುಡಿ ಇತ್ಯಾದಿ ಉತ್ತಮ ಗುಣ ಸ್ವಭಾವಗಳನ್ನ ರೂಪಿಸಲಾಗಿದೆ. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂದು ಸ್ವತಃ ಬದುಕಿ ತಿಳಿಸಿದ ವಚನಕಾರರು ಸಾಮಾಜಿಕ ಸ್ವಾಸ್ಥ್ಯವನ್ನು ಸುಧಾರಿಸಿದರು. ಶರಣರು ತಮ್ಮ ಸಂದೇಶಗಳಲ್ಲಿ ಸಮಾನತೆ, ಸ್ವಾತಂತ್ರ ಭಕ್ತಿ ಮತ್ತು ಸಹೋದರ ತತ್ವಗಳು, ಸಮಾಜಮುಖಿ ಚಿಂತನೆ, ಕಾಯಕ, ದಾಸೋಹ, ಜೀವನ ಶಿಸ್ತು, ಅಥಿತಿ ಸತ್ಕಾರ, ಆತ್ಮ ಮನರಾವಲೋಕನ, ಸಾಮಾಜಿಕ ನ್ಯಾಯ, ಮೊದಲಾದ ಮೌಲ್ಯಗಳನ್ನು ಪ್ರತಿಪಾದಿಸಿದ್ದಾರೆ.



**ಮಲ್ಲೇಶಪ್ಪ ಟಿ.ಎಸ್.**
ತಮ್ಮಡಿಹಳ್ಳಿ ಚಿಕ್ಕನಾಯಕನಹಳ್ಳಿ
ತಾಲ್ಲೂಕು, ತುಮಕೂರು ಜಿಲ್ಲೆ.
ಮೊ : 8050074810, 9380939580

ಸಾಮಾಜಿಕ ಮೌಲ್ಯವನ್ನು ಅತ್ಯಂತ ಸರಳವಾಗಿ ತಿಳಿ ಭಾಷೆ ಕನ್ನಡದಲ್ಲಿ ಬಸವಣ್ಣನವರು ಹೀಗೆ ಹೇಳಿದ್ದಾರೆ. ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ, ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ ತನ್ನ ಬಣ್ಣಿಸಬೇಡ ಇದಿರ ಹಳಿಯಲುಬೇಡ, ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ. ಇದೇ ನಮ್ಮ ಕೂಡಲ ಸಂಗಮ ದೇವರನೊಲಿಸುವ ಪರಿ ಈ ಸಪ್ತ ಸೂತ್ರಗಳು ಮನುಷ್ಯನ ಶುದ್ದ ಜೀವನ ಮೌಲ್ಯಗಳೆಂದು ಗುರುತಿಸಲಾಗಿದೆ.

ವೈದ್ಧಿಕ ಧರ್ಮ ಶ್ರೇಷ್ಠತೆಯ ಅಂದ ಆಚರಣೆಗಳ ವಿರುದ್ದ ಅವೈದಿಕ ಧರ್ಮಗಳ ಪ್ರತಿಪಾದಕರಾದ ಮಹಾವೀರ, ಗೌತಮಬುದ್ಧ ಮಹಾಶಯ ಮಾತ್ರರಲ್ಲದೆ ಅನೇಕ ಸಾಧು ಸಂತರು, ಸುಧಾರಕರು, ಶಕ್ತಿ ವಿಶಿಷಾದ್ವೈತ ಸಿದ್ಧಾಂತ ಪ್ರತಿಪಾದನೆ. ಮಾಡಿದ ಬಸವಣ್ಣ ಮತ್ತು ಅವರ ಅನುಯಾಯಿಗಳು, ಶಿವಶರಣ ಶರಣೆಯರು ಸಮಾಜ ಮತ್ತು ಧರ್ಮವನ್ನು ಸರಿದಾರಿಗೆ ತರಲು ಕ್ರಾಂತಿಯತ್ತ ಧಾವಿಸಿದರು. ದಯವಿಲ್ಲದ ಧರ್ಮ ಯಾವುದಯ್ಯ ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲೂ ಮತ್ತು ಆಚಾರವೇ ಸ್ವರ್ಗ ಅನಾಚಾರವೇ ನರಕ. ಸತ್ಯನುಡಿಯುವುದೆ ದೇವಲೋಕ ಮಿತ್ಯ ನುಡಿಯುವುದೆ ಮೃತ್ಯುಲೋಕ, ಅಯ್ಯ ಎಂದರೆ ಸ್ವರ್ಗ, ಎಲವೋ ಎಂದರೆ ನರಕ ಎಂದು ಸಾರಿದ ಬಸವೇಶ್ವರರು ಮನುಜ ಕುಲಕ್ಕೆ ಸರ್ವಕಾಲಿಕ ಸತ್ಯವನ್ನು ಜೀವನ ಮೌಲ್ಯಗಳನ್ನು ಉಪದೇಶಿಸಿದ್ದಾರೆ.

ಜನ್ಮತಃ ಅಸ್ಪಶ್ಯನಾಗಿದ್ದ ಉರಿಲಿಂಗ ಪೆದ್ದಣ್ಣ ಸಂಸ್ಕೃತ ಪದಗಳನ್ನು ಬಳಸಿ ಜೀವನ ಮೌಲ್ಯಗಳನ್ನು ತನ್ನ ವಚನಗಲ್ಲಿ ಹೀಗೆ ಪರಿಚಯಿಸಿದ್ದಾರೆ. ಶಿವನೆ ದೈವಾ ಕೊಲ್ಲದಿರ್ಪುದೆ ಧರ್ಮ, ಅಧರ್ಮದಿಂದ ಬಂದುದನು ಒಲ್ಲದಿಪ್ಪುದೇ ನೇಮ ಆಶೆ ಇಲ್ಲದಿಪ್ಪುದೇ ತಪ. ರೋಷವಿಲ್ಲದಿಪ್ಪುದೇ ಜಪ, ವಂಚನೆ ಇಲ್ಲದಿಪ್ಪುದೇ ಭಕ್ತಿ, ಹೆಚ್ಚು ಕುಂದಿಲ್ಲದಿಪ್ಪುದೆ ಸಮಯಾಚಾರ ಮೇಲ್ಕಂಡ ಪ್ರತಿಯೊಬ್ಬರ ನಡೆ–ನುಡಿ ಆಚಾರ–ವಿಚಾರಗಳೂ ಯಾವ ರೀತಿ ಪರಿಣಾಮ ಬೀರುತ್ತವೆ. ಕೆಡಕು ಅಂದರೆ ದುಃಖ, ಒಳ್ಳೆಯದು ಅಂದರೆ ಸುಖ ಎಂಬುವುದನ್ನು ಆದರಿಸಿದಂತೆ ನಾವು ಮೌಲ್ಯವನ್ನು ಕಂಡುಕೊಳ್ಳಬಹುದು. ಮಾನವರು ಸತ್ಕಾರ್ಯ, ಕರ್ಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಮತ್ತು ಮೌಲ್ಯಭರಿತ ಧರ್ಮದ ದಾರಿಯಲ್ಲಿ ಮುನ್ನಡೆಯಲು ಗುರುವಿನ ಮಾರ್ಗದರ್ಶನದ ಮಹತ್ವವನ್ನು ಮಹಾಜಂಗಮ ಅಲ್ಲಮಪ್ರಭುಗಳು ಹೀಗೆ ಹೇಳುತ್ತಾರೆ "ಕಂಡುದ ಹಿಡಿಯಲೊಲ್ಲದೆ, ಕಾಣದುದನರಸಿ ಹಿಡಿದಿಹೆನೆಂದೆಡೆ ಸಿಕ್ಕದೆಂಬ ಬಳಲಿಕೆಯ ನೋಡಾ, ಕಂಡುದನೆ ಕಂಡು ಗುರುಪಾದವಿಡಿದಲ್ಲಿ ಕಾಣಬಾರದುದ ಕಾಣಬಹುದು ಗುಹೇಶ್ವರ ಎಂದು ಗುರುಕರಣೆಯ ಮಹತ್ವವನ್ನು ತಿಳಿಸಿದ್ದಾರೆ.

ಸುಸಂಸ್ಕೃತ ಮಾನವನಾಗುವ ವ್ಯಕ್ತಿ ಉಪದೇಶಿಸುವ ಮೊದಲು ತನ್ನ ನಡೆ, ನುಡಿ ವ್ಯಕ್ತಿತ್ವವನ್ನು ವೃದ್ಧಿಸಿಕೊಳ್ಳಬೇಕು. ತನ್ನ ನಡವಳಿಕೆ ತಿದ್ದಿಕೊಳ್ಳದೆ, ನಾವು ಸನ್ಮಾರ್ಗಿಗಳಾಗದೆ, ಸಮಾಜವನ್ನು ಸರಿದಿಕ್ಕಿನತ್ತ ಕೊಂಡೊಯ್ಯವುದು ಎಷ್ಟುಸರಿ ಎಂದು ಪ್ರಶ್ನಿಸುವ ಮೂಲಕ ಜೀವನ ಮೌಲ್ಯವನ್ನ ಬಸವೇಶ್ವರರು ತನ್ನ ವಚನದಲ್ಲಿ ಪ್ರಸ್ತುತಪಡಿಸಿರುವುದನ್ನು ಗಮನಿಸಬಹುದು ಏನು ಬಂದಿರಿ? ಹದುಳವಿದ್ದೀರಿ? ಎಂದಡೆ ನಿಮ್ಮೈಸಿರಿ ಹಾರಿಹೊಹುದೆ? ಕುಳ್ಳಿರೆಂದಡೆ ನೆಲ ಕುಳಿಹೋಹುದೆ? ಒಡನೆ ನುಡಿದಡೆ ಸಿರ ಹೊಟ್ಟೆಯೊಡೆವುದೆ? ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ ಮೂಗಕೊಯ್ಯುವದ ಮಾಬನೆ ನಮ್ಮ ಕೂಡಲಸಂಗಮ ದೇವಯ್ಯ. ನಮ್ಮ ನಡೆ, ನುಡಿ, ಮೌಲ್ಯಗಳ ಬಗೆಗೆ ತಿಳಿಸಿದ್ದಾರೆ.

ಸಿದ್ದರಾಮೇಶ್ವರರು ಜಾತಿ, ಮತ, ಲಿಂಗ, ವರ್ಗ, ತಾರತಮ್ಯವನ್ನು ಬಲವಾಗಿ ವಿರೋದಿಸಿದ್ದಾರೆ. ಜಾತಿ, ಜನಾಂಗ, ಕುಲದ ಬಗೆಗಿನ ಮೌಢ್ಯ ಆಚರಣೆಗಳನ್ನು ಬಲವಾಗಿ ಖಂಡಿಸಿದ್ದಾರೆ. ಕುಲವೆಂದು ಹೋರಾಡುವ ಅಣ್ಣಗಳಿರಾ, ಕೇಳಿರೋ; ಕುಲವೇ ಡೋಹರನ? ಕುಲವೇ ಮಾದಾರನ? ಕುಲವೇ ದೂರ್ವಾಸನ? ಕುಲವೇ ವ್ಯಾಸನ? ಕುಲವೇ ವಾಲ್ಮೀಕನ? ಕುಲವೇ ಕಾಂಡಿಲ್ಯನ? ಕುಲವ ನೋಳ್ಪಡೆ ಹುರುಳಿಲ್ಲ; ಅವರ ನಡೆಯ ನೋಳ್ಪಡೆ ನಡೆಯುವರುತ್ರಿಲೋಕದಲಿಲ್ಲ, ನೋಡಾ ಕಪಿಲಸಿದ್ದ ಮಲ್ಲಿಕಾರ್ಜುನಾ ಎಂಬುದಾಗಿ ಮಾನವೀಯ ಮೌಲ್ಯ ಮೆರೆದಿದ್ದಾರೆ.

ವೇದಗಳಲ್ಲಿ ಉಲ್ಲೇಖಿಸಿರುವ ವರ್ಣಾಶ್ರಮ ವ್ಯವಸ್ಥೆ ಮತ್ತು ಜಾತಿ ವ್ಯವಸ್ಥೆಯನ್ನು ಪ್ರಶ್ನಿಸಿದ ಸಿದ್ದರಾಮೇಶ್ವರ. ಸ್ಪೃಶ್ಯ–ಅಸ್ಪೃಶ್ಯ ಭೇದವನ್ನು ದಿಕ್ಕರಿಸಿದ್ದು ಅವನ ಕಾಯಕ ನಿಷ್ಠೆ ಪ್ರಾಮಾಣಿಕ ಸೇವೆ, ಗುರು ಹಿರಿಯರಲ್ಲಿ ಭಕ್ತಿ ಮಾನವೀಯ ಮತ್ತು ನೈತಿಕ ತತ್ವಗಳನ್ನು ಹಾಗೂ ಜಾತಿ–ಕುಲದ ಎಲ್ಲೆ ಮೀರಿ ಅವನಲ್ಲಿರುವ ವಿಶಿಷ್ಟ ಸೇವೆಯ ಪರವಾದ ಜ್ಞಾನ ಹಾಗೂ ಮಾನವೀಯ ಮೌಲ್ಯಗಳನ್ನ ತಿಳಿ ಹೇಳಿದ್ದಾರೆ. ಜಾತೀಯ. ಹೆಸರಲ್ಲಿ ಅಧಿಕಾರ, ಗೌರವ, ಸಂಪತ್ತಿನ ವ್ಯಾಮೋಹ ಸಾಧಿಸಿ ಅಸ್ಪೃಶ್ಯರನ್ನು ಶೋಷಿಸುವ

ಜನ ವರ್ಗವನ್ನ ನಿರ್ಲಕ್ಷಿಸಿದ್ದಾರೆ. ಶರಣರು ಮಾದರ ಚನ್ನಯ್ಯ, ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ಮತ್ಸ್ಯಗಂದಿ ಕಬ್ಬಲಗಿತ್ತಿಯ ಮಗನಾದ ವ್ಯಾಸರು, ಕೌಂಡಿಲ್ಯ ಋಷಿ ಗೋತ್ರದ ರಾಮಾಯಣದ ಕರ್ತೃ ವಾಲ್ಮೀಕಿ ಬೇಡ ಕುಲದವರು ಹೀಗೆ ಮುಂತಾದ ಸಾದಕರ ಜ್ಞಾನಿಗಳ ಶಕ್ತಿಗೆ ಕುಲವೆಲ್ಲಿಯದು, ಭೇದವೆಲ್ಲಿಯದು ಎಂದು ಜಾತ್ಯಾತೀತ ಮೌಲ್ಯವನ್ನು ಪ್ರಶ್ನಿಸಿದ್ದಾರೆ. ಬಹು ಹಿಂದಿನಿಂದಲೂ ಗುರು-ಹಿರಿಯರಿಗೆ ಶರಣು ಬಾಗಿ ವಿಧೇಯತೆಯಿಂದ ಅವರ ಮಾರ್ಗದರ್ಶನದಂತೆ ನಡೆದುಕೊಳ್ಳುತ್ತಿರುವ ಸಂಪ್ರದಾಯವಿತ್ತು. ಗೌರವ ತನ್ಮಯತೆ ರೂಡಿಸಿಕೊಂಡಿದ್ದ ಜನರು ಇಂದು ಅವರು ಹೇಳಿದ ಮಾತು ಎಷ್ಟುಸರಿ, ಏಕೆ ಅವರಂತೆ ನಡೆಯಬೇಕು? ಪಾಂಡಿತ್ಯವುಳ್ಳವರು ಜ್ಞಾನಿ ಆಧ್ಯಾತ್ಮಿಕ ಸಾಧಕರಾದ, ಚನ್ನಬಸವಣ್ಣ ಅನುಭವ ಮಂಟಪದಲ್ಲಿ ಅಲ್ಲಮಾದಿ ಶರಣರ ಮೆಚ್ಚುಗೆ ಪಡೆದ ಮಹಾದೇವಿ ಅಕ್ಕನ ಬಗ್ಗೆ ಹೀಗೆ ಪ್ರಸ್ತಾಪಿಸಿದ್ದಾರೆ. ಅಜಕಲ್ಪಕೋಟಿ ವರುಷದವರೆಲ್ಲ ಹಿರಿಯರೇ? ಹುತ್ತೇರಿ ಚಿತ್ತ ಬೆಳೆದ ತಪಸ್ವಿಗಳೆಲ್ಲ ಹಿರಿಯರೇ? ನಡುಮುರಿದು ಗೂಡುಗೂರಿ ತಲೆನಡುಗಿ, ನೆರೆತೆರೆ ಹಚ್ಚಿ, ಮತಿಗೆಟ್ಟು ಒಂದನಾಡಹೋಗಿ ಒಂಬತ್ತಾನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೇ? ಅನುವಂದು ಘನವ ಬೆರೆಸಿ ಹಿರಿದು-ಕಿರಿದೆಂಬ ಭೇದವ ಮರೆದು ಕೂಡಲ ಸಂಗಮನಲ್ಲಿ ಬೆರೆಸಿ ಬೇರಿಲ್ಲದೊಪ್ಪ ಹಿರಿಯತನ ನಮ್ಮ ಮಹಾದೇವಿ ಯಕ್ಕಂಗಾಯಿತ್ತು. ಅವರ ಅಭಿಮತವಾಗಿದೆ. ಜೀವನ ಬಂಡಿಯಲ್ಲಿ ವಯಸ್ಸಾದವರು ಅನಗತ್ಯ ಅಸಂಬದ್ಧ ಮಾತನಾಡುವವರು ಗಡ್ಡಬಿಟ್ಟ ತಪಸ್ವಿಗಳು ಹಿರಿಯರಲ್ಲ, ಮೌಲ್ಯ ಜೀವನ ನಡೆಸುವವರೆ ನಿಜವಾದ ಹಿರಿಯರು ಎಂದು ಚನ್ನಬಸವಣ್ಣ ಹೇಳಿದ್ದಾರೆ. ಹಿರಿಯ ಕಿರಿಯ ಎಂಬುದು ವಯಸ್ಸಿಗೆ ಸೀಮಿತವಾಗಿಲ್ಲ, ಹಿರಿಯತನ ಉತ್ಕೃಷ್ಟ ನಡೆಗಳಿಂದ ಪರೋಪಕಾರದಿಂದ ಲಭ್ಯವಾಗುತ್ತದೆ ಎಂಬುದನ್ನು ಅಲ್ಲಮ ಪ್ರಭುಗಳು ವ್ಯಾಖ್ಯಾನಿಸಿದ್ದಾರೆ.

ಲೋಕ ಒಂದನೆಂದಡೆ ತಾನೊಂದನೆನಬೇಡ ಮತ್ತಾರೇನೆಂದಡೆಯು ತನ್ನನೆಂದರೆನ ಬೇಡ ಭೃತ್ಯಕ್ಕೆ ಬೆಂಗುಡನಿಕ್ಕಿದಂತಿರಬೇಕು ಹಿರಿಯರು ಗುಹೇಶ್ವರ ಕಷ್ಟ-ಸುಖಗಳನ್ನ ಸಮವಾಗಿ ಸ್ವೀಕರಿಸಿ ಎದುರಿಸಿ ಹಿರಿಯರಾಗಬೇಕೆಂದರು. ಬೇರೆಯವರ ವಸ್ತುಗಳು, ಧನಕನಕ ಸ್ತ್ರೀಯರು, ವಿಷಪೂರಿತ ಹಾವು, ಬೆಂಕಿ, ಕತ್ತಿಯ ಅಲಗಿನಂತೆ ಘೋರವಾದವು ಎಂದು ಬಸವಣ್ಣನವರು ತಿಳಿಸಿದ್ದಾರೆ. "ಹರಿವ ಹಾವಿಗಂಜೆ, ಉರಿಯ ನಾಲಗೆಗಂಜೆ, ಸುರಗಿಯ ಮೊನೆಗಂಜೆ ಒಂದಕ್ಕಂಜುವೆ. ಒಂದಕ್ಕಳುಕುವೆ ಪರಸ್ತ್ರೀ ಪರಧನವೆಂಬೀ ಜೂಬಿಂಗಂಜುವೆ. ಮುನ್ನಂಜದ ರಾವಳನೇ ವಿಧಿಯಾದ ಅಂಜುವೆನಯ್ಯಾ ಕೂಡಲಸಂಗಮದೇವಾ. ರಾವಣ ಶಿವಭಕ್ತ ಬ್ರಾಹ್ಮಣನಾಗಿದ್ದರೂ ಪರಸ್ತ್ರೀ ಸೀತೆಯನ್ನ ಅಪಹರಿಸಿದ ಕಾರಣ ಎಲ್ಲಾ ಚಿತ್ತಾರ ಮಸಿನುಂಗಿತು ಎಂಬಂತೆ ತನ್ನ ವ್ಯಕ್ತಿತ್ವದಿಂದ ಪ್ರಾಣ ಕಳೆದುಕೊಂಡ ಎಂದು ಉದ್ಗರಿಸಿದ್ದಾರೆ. ಅಂಬಿಗರ ಚೌಡಯ್ಯ ಪ್ರಸ್ತಾಪಿಸುತ್ತಾ ಪರಧನ ಪರಸತಿ ಪರನಿಂದನೆಗಳಿಗೆ ಮುಂದೆ ನರಕ ಎಂದು ಗುರುವಾಖ್ಯ ಸಾರುತ್ತಿದೆ. ಪರಧನ-ಪರಸತಿ-ಪರಭೂಮಿಗಳಿಗೆ ಹತವಾಗಿ ಹೋದ ದುರ್ಯೋಧನ ಎಂಬಂತೆ ವಚನದಲ್ಲಿ ಪರಿಶುದ್ದ ಜೀವನದ ಮಹತ್ವ ತಿಳಿಸಿದ್ದಾರೆ.

ಪರವಧುವನ್ನು ಮಹಾದೇವಿ ಎಂದ ಬಸವಣ್ಣ ದಾಸಿ, ವೇಶಿ, ಪರನಾರಿ, ಸಹೋದರನಾಗಿರಬೇಕು ಆಗ ಅಂಟು ಜಾಡ್ಯ ಸಹಿತ ರೋಗಗಳಿಂದ ಮುಕ್ತಿ ಎಂದ ಅಕ್ಕಮ್ಮ ಶೀಲವಂತಿಕೆ ಮತ್ತು ಸ್ತ್ರೀಯರ ಶೋಷಣೆಯ ವಿರುದ್ಧ ಸಾಮಾಜಿಕ, ನೈತಿಕ ಮೌಲ್ಯಸಾರಿದ್ದಾರೆ. ಶಿವಲೆಂಕ ಮಂಚಣ್ಣನು ಹೇಳುತ್ತಾ ಪರಧನವ ನೊಲ್ಲದಿಪ್ಪುದೆ. ವ್ರತ, ಪರಸ್ತ್ರೀಯ ಮುಟ್ಟದಿಪ್ಪುದೆ ಶೀಲ, ಸರ್ವಜೀವನ ಮುಟ್ಟದಿಪ್ಪುದೆ ಜೀವ ಸರ್ವ ಜೀವನ ಕೊಲ್ಲದಿಪ್ಪುದೆ. ನೇಮ, ಮಿಥ್ಯ ವನ್ನಳಿದಿಪ್ಪುದೇ ನಿತ್ಯನೇಮ ಬಂದುದನಿದ್ದಂತೆ ಕೊಂಡು ಬಾರದುದಕ್ಕೆ ಕಾಂಕ್ಷೇಯ ಮಾಡದಿಪ್ಪುದೇ ಅರವತ್ನಾಲ್ಕು ಶೀಲ, ಐವತ್ತಾರು ವ್ರತ, ಮೂವತ್ತೆರಡು ನೇಮ ಎಂದು ಜೀವನ ಮೌಲ್ಯವನ್ನು ಶಿವಲಂಕ ಮಂಚಣ್ಣ ಬಣ್ಣಿಸಿದ್ದಾರೆ.

ಸೊನ್ನಲಿಗೆಯ ಸಿದ್ದರಾಮ ಶರಣರು ಹೆಣ್ಣಿನ ಅಸ್ತಿತ್ವ ಸಾಕ್ಷಾತ್ ಕಪಿಲಸಿದ್ದ ಮಲ್ಲಿಕಾರ್ಜುನ ನೋಡಾ ಎಂದು ಸ್ತ್ರೀಯರನ್ನು ಉದ್ದೇಶಿಸಿ ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು. ತಾ ಮಾಡಿದ ಹೆಣ್ಣು ವಿಷ್ಣುವಿನ ಎದೆಯನ್ನೇರಿತು. ಆದ ಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಸಾಕ್ಷಾತ್ ಕಪಿಲಸಿದ್ದ ಮಲ್ಲಿಕಾರ್ಜುನ ನೋಡಾ ಎಂಬುದಾಗಿ ಸ್ತ್ರೀಯರ ಸ್ವಾತಂತ್ರ್ಯ-ಸಮಾನತೆ, ಸಾಮಾಜಿಕ ಜವಬ್ದಾರಿ, ಸ್ತ್ರೀಯರಿಗೆ ಗೌರವ ನೀಡಬೇಕೆಂಬುದರ ಬಗ್ಗೆ ಸಾಮಾಜಿಕ, ಆರ್ಥಿಕ ಧಾರ್ಮಿಕ ಜಾಗೃತಿ ಮೂಡಿಸಿದ್ದಾರೆ. ಜೀವನದ ಮೌಲ್ಯ ಶಾಯಶ ಹೌದು ಕುಳಿತು ತಿನ್ನುವರಿಗೆ ಕುಡಿಕೆ ಹೊನ್ನು ಸಾಲದು. ದುಡಿಯದೆ ತಿನ್ನುವಂತಹವರು ತಿನ್ನಲು ಯೋಗ್ಯರಲ್ಲ.

ಕಾಯಕ, ಯಾವುದಾದರೇನು ನಿಷ್ಠೆ ಪ್ರಾಮಾಣಿಕತೆ, ಜವಾಬ್ದಾರಿಯನ್ನರಿತ ಕರ್ತವ್ಯದಲ್ಲಿ ನಿರತರಾಗಿ ಬಂದ ಉತ್ಪತ್ತಿಯಿಂದ ತಾನು ಅನುಭೋಗಿಸಿ–ಲೋಕದ ಹಿತಕ್ಕೆ ದಾಸೋಹ ಮಾಡುವ ಚಿಂತನೆಯನ್ನ ಶರಣರು ಸ್ವತಃ ರೂಢಿಸಿಕೊಂಡಿದ್ದರು ಮತ್ತು ಕಾಯಕದ ಮಹತ್ವ ಸಾರಿದರು. ಬಸವಣ್ಣರವರು 'ಕಾಯಕವೇ ಕೈಲಾಸ' ಎಂಬ ಸರ್ವಕಾಲಿಕ ಸತ್ಯ ಸಂದೇಶ ನೀಡಿದ್ದರೆ. ಅನುಭವ ಮಂಟಪಕ್ಕೆ ಎಲ್ಲಾ ಜಾತಿ, ಮತ, ವೃತ್ತಿ ಬಾಂಧವರಿಗೆ ಆಹ್ವಾನ ನೀಡಿ ಎಲ್ಲರಲ್ಲಿನ ಕಸುಬಿನ ಭೇದವನ್ನು ವಿರೋದಿಸಿ ಯಾವ ಕಾಯಕ ದಲ್ಲಾದರೂ ನಿಷ್ಠೆಯಿಂದ ತಮ್ಮನ್ನ ತೊಡಗಿಸಿಕೊಳ್ಳಬೇಕೆಂದು ಕಾಯಕದಲ್ಲಿ ಸಮಾನತೆಯ ಪ್ರತಿಪಾದಕರಾದರು.

ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರವನಾದ, ಕುಲವೇನೋ? ಆವಂದಿರ ಕುಲವೇನೋ? ಎಂದು ಪ್ರಶ್ನಿಸುತ್ತಾರೆ. ಹಡಪದ ಹಪ್ಪಣನ ಕ್ಷೌರಿಕ ವೃತ್ತಿ, ಸಮಗಾರ ವೃತ್ತಿ ಮಾಡುವ ಹರಳಯ್ಯ, ಅಂಬಿಗರ ಚೌಡಯ್ಯ, ಸೂಳೆ. ಸಂಕವ್ವೆ ಮತ್ತು ಮಡಿವಾಳ ಮಾಚಯ್ಯ ಭಂಡಾರಿ ಕಾಯಕ ಮಾಡುವ ಬಸವಣ್ಣ, ಡೋಹರ ಕಕ್ಕಯ್ಯ, ಚರ್ಮದ ವೃತ್ತಿಯ ಮಾದಾರ ಚನ್ನಯ್ಯನ, ಕಾಯಕದಲ್ಲಿ ಸಮಾನತೆ ಇದೆ ಎಂದು ಸ್ವೀಕರಿಸಿದರು. ಪ್ರತಿಯೊಂದು ಜಾತಿಗಳಿಗೆ ನಿಜವಾದ ಮೂಲವಿಲ್ಲ. ಕಸುಬಿನ ಆಧಾರದಲ್ಲಿ ಪ್ರತಿಪಾದಿಸಿದ ಶರಣರು ಸರ್ವರು ಮೆಚ್ಚುವಂತಹ ಸಮೃದ್ಧ ಸ್ವಾವಲಂಬಿ ಆರ್ಥಿಕ ಜೀವನ ರೂಪಿಸಿಕೊಂಡು ದಾರಿದ್ರ ತೊಲಗಿಸುವ ಮೂಲಕ ವರ್ಗ, ವೃತ್ತಿ, ಲಿಂಗ, ವರ್ಣ, ಸಮಾನತೆಗೆ, ನಾಂದಿಹಾಡಿದರು. ಶ್ರಮಿಕ ವರ್ಗದ ಮೇಲಿನ ವರ್ಗದವರನ್ನು ದುಡಿಮೆಯ ಸ್ತರಕ್ಕೆ ತರುವ ಪ್ರಯತ್ನ ನಡೆಯಿತು. ಸಾಮಾಜಿಕ, ಆರ್ಥಿಕ ಸಮಾನತೆಯ ಮಹತ್ವ ಸಾರಿದರು. ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿ, ಲಿಂಗವಾದರೂ ಕಾಯಕದಿಂದಲೇ ಶಿಲೆಯ ಕುಲ ಹರಿಯುವುದು, ಜಂಗಮವಾದರೂ ಕಾಯಕದಿಂದಲೇ ವೇಷದ ಪಾಷ ಹರಿಯುವುದು, ಕಾಯಕವು ತಾವು ಮಾಡುವ ಶಿವನ ಪೂಜೆ ಎಂಬುದು ಹೆಗ್ಗಳಿಕೆಯ ಅಂಶವಾಗಿಹುದು. ದೇಹ ಮನಸ್ಸು ಶುದ್ಧವಾಗಿ ದೈವಮಾರ್ಗ ತೋರುವ ಸಾಧನಗಳೇ ಕಾಯಕ ಎಂಬುದಾಗಿ ಶರಣರು ಕಾಯಕ ಮೌಲ್ಯದ ಮಹತ್ವ ತಿಳಿಸಿದರು.

ಆಯ್ದಕ್ಕಿ ಲಕ್ಕಮ್ಮ ಶುದ್ಧ ಕಾಯಕ ಮತ್ತು ಕಾಯಕವೇ ನಮಗೆ ದೇವರ ಅನುಗ್ರಹ ಎಂದು ತನ್ನ ಪತಿಗೆ ತಿಳಿಸುತ್ತಾ ಕಾಯಕ ನಿಂದಿತ್ತು ಹೋಗಯ್ಯ ಭಾವ ಶುದ್ಧಾವಾಗಿ ಶರಣರ ತಿಪ್ಪೆಯ ತಪ್ಪಲು ಅಕ್ಕಿಯ ತಂದು ನಿಶ್ಚಯಿಸಿ ಮಾಡಬೇಕು ಎನ್ನುತ್ತಾಳೆ. ಮಹಾಮಂಟಪದ ಮನೆಯ ಅಂಗಳದಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ತಂದು ಜಂಗಮರಿಗೆ ದಾಸೋಹ ಮಾಡುವ ಕಾಯಕವನ್ನು ಮಾಡುತ್ತಿದ್ದ ಆಯ್ದಕ್ಕಿ ಲಕ್ಕಮ್ಮ ಮಾರಯ್ಯ ಪತಿಪತ್ನಿಯರು ತನ್ನ ವಚನದಲ್ಲಿ ಕಾಯಕದಲ್ಲಿ ನಿರತನಾದೆಡೆ ಗುರು ದರ್ಶನವಾದರೂ ಮರೆಯಬೇಕು, ಲಿಂಗ ಪೂಜೆಯಾದರೂ ಮರೆಯಬೇಕು, ಜಂಗಮ ಮುಂದಿದ್ದರೂ ಹಂಗೂ ಹರಿಯಬೇಕು, ಕಾಯಕವೇ ಕೈಲಾಸವಾದ ಕಾರಣ. ಅಮರೇಶ್ವರ ಲಿಂಗವಾಯಿತ್ತಾದರೂ ಕಾಯಕದೊಳಗೂ ತಾವು ಮಾಡುವ ಕಾಯಕಕ್ಕೆ ಪ್ರಥಮ ಪ್ರಾಶಸ್ತ್ಯ ನೀಡಿ, ಮಿಕ್ಕೆಲ್ಲಾ ಸೇವೆಗಳನ್ನು ನಂತರ ಪ್ರಾಶಸ್ತ್ಯವೆನ್ನುವ ಮೂಲಕ ಕಾಯಕದ ಮಹತ್ವವನ್ನು ಮೌಲ್ಯವನ್ನು ತಾವು ಸರ್ವಕಾಲ ಮಾಡುವ ಕಾಯಕ ಸಮ್ಮತವೆಂದು ಪ್ರತಿಪಾದಿಸಿದ್ದಾರೆ.

ಕಾಯಕದ ಮಹತ್ವವನ್ನು ಸ್ವತಃ ಸಿದ್ದರಾಮೇಶ್ವರರು ದಿವ್ಯ ಸಂದೇಶಕ್ಕೆ ಸೀಮಿತವಾಗಿರದೆ ಅವರ ವಾಣಿ– ಪ್ರಾಯೋಗಿಕ ಕರ್ಮದ ಸೌಲಭ್ಯಗಳನ್ನು ಪೂರೈಸಲು ಹಾಗೂ ರೈತ ಸಮೂಹದ ಉನ್ನತಿಗಾಗಿ ಕೆರೆ, ಬಾವಿ, ಕಟ್ಟೆ, ಕೊಳಗಳನ್ನು ನಿರ್ಮಿಸಿ ನೀರಾವರಿ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಕೃಷಿ ಕಾಯಕವನ್ನ ಜಾತಿ, ಜನಾಂಗ, ಲಿಂಗ ತಾರತಮ್ಯ ಎಣಿಸದೆ ಭೂಮಿಯನ್ನು ನಂಬಿ ಉತ್ಕೃಷ್ಟ ಬದುಕನ್ನ ರೂಪಿಸಿಕೊಳ್ಳಬಹುದಾದ ಜೀವನ ಮೌಲ್ಯವನ್ನ ತಮ್ಮ ವಚನಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಕೃಷಿಮಾಡಿ ಉಣ್ಣದೆ ಹಸಿವು ಹರಿವ ಪರಿ ಇನ್ನೆಂತೋ ಕರ್ಮಯೋಗವ ಮಾಡದೆ ನಿರ್ಮಲ ಚಿತ್ತವನರಿಯುವ ಪರಿ ಇನ್ನೆಂತೋ ಬೇಯದೆ ಅಶನವನುಂಬತಾವಾವುದು ಕಪಿಲಸಿದ್ದ ಮಲ್ಲಿಕಾರ್ಜುನ ಲಿಂಗಕ್ಕೆ ಯೋಗಿಯೇ ಶರೀರ ವೃಥಾ ಹಾಳಾಗಬಾರದು, ಜನ್ಮತಳೆದ ಕಾಯ ಸಾರ್ಥಕ ಜೀವನಗೈಯ್ಯಲು ಶುದ್ಧ ಕಾಯಕದಿಂದ ಕೂಡಿರಬೇಕು ಎಂಬುದೆ ಅವರ ಅಭಿಮತ.

ಮಾದಾರ ಧೂಳಯ್ಯ ರಸ್ತೆ ಬದಿಯಲ್ಲಿ ಚರ್ಮವ ಹದಗೊಳಿಸಿ ಚಪ್ಪಲಿ ಕೆಲಸದಲ್ಲಿ ತೊಡಗಿದ್ದು ಭಕ್ತಿ ಜ್ಞಾನ ಪೂಜೆಗಳಿಗಿಂತ ಮಿಗಿಲಾದ ಶಕ್ತಿ ಕಾಯಕದಿಂದ ಸಾಧ್ಯ ಎಂದು, ತಮ್ಮ ವಚನದಲ್ಲಿ ಸತ್ಯಶುದ್ಧ ಕಾಯಕವ ಮಾಡಿತಂದು ವಂಚನೆಯಿಲ್ಲದ ಪ್ರಪಂಚವಳಿದು. ಇಷ್ಟಲಿಂಗಕ್ಕೆ ದಾಸೋಹವ ಮಾಡುವ ಸದ್ಭಕ್ತನ ಹೃದಯದೊಳಗೆ ಅಚ್ಚೊತ್ತಿದಂತಿಪ್ಪ ಕಾಮಧೂಮಧೂಳೇಶ್ವರ ಪ್ರಭುವೇ ಎಂದಿದ್ದಾರೆ.

ಶುದ್ಧಕಾಯಕ ಮಾಡಿ ವಂಚನೆಯಿಲ್ಲದೆ ನಿತ್ಯವೂ

ಧೂಳೇಶ್ವರ ಲಿಂಗಕ್ಕೆ ದಾಸೋಹ ಮಾಡಿದೆಡೆ ಶಿವ ಹೃದಯದಲ್ಲಿ ನೆಲೆಸುವನು ಮತ್ತು ಕಾಯಕ ಮಾಡಿ ದಾಸೋಹ ಮಾಡಿಸುವ ಮೂಲಕ ಧೂಳೇಶ್ವರನ ಅನುಗ್ರಹಕ್ಕೆ ಪಾತ್ರವಾಗುತ್ತದೆ. ಕಾಯಕಮಾಡಿ ಬರುವ ಉತ್ಪನ್ನದಿಂದ ನಾವು ನಮ್ಮ ಪರಿವಾರ ಹಾಗೂ ದೇವರ ಕಾರ್ಯಗಳಿಗೆ ದಾಸೋಹಕ್ಕೆ ಧಾನಮಾಡಬೇಕು ಎಂದಿದ್ದಾರೆ. ಅತಿಯಾದ ಆಸೆ–ಗತಿಕೇಡು, ಆಸೆ ದುಃಖಕ್ಕೆ ಮೂಲ ಎಂಬಂತೆ ದುರಾಸೆಯಿಂದ ಮನಃಶಾಂತಿ ಮತ್ತು ಆರೋಗ್ಯ ಹದಗೆಡುತ್ತದೆ. ಕಾಯಕ ಮಾಡಿ ಬಂದ ಆಧಾಯದಲ್ಲಿ ಸಮಾಜ, ಧರ್ಮ ಮತ್ತು ಸಾಂಸ್ಕೃತಿಕ ಭೆಳವಣಿಗೆಗೆ ನೆರವು ನೀಡಬೇಕೆಂದು ಅರ್ಥೈಸಿ. ಅಳವಡಿಸಿಕೊಳ್ಳುವುದೇ ನಿಜ ಮೌಲ್ಯಗಳಾಗಿವೆ.

ಅಲ್ಲಮಪ್ರಭುಗಳು ತಮ್ಮ ವಚನಗಳ ಮೂಲಕ ಪ್ರಸ್ತಾಪಿಸುತ್ತಾರೆ. ಹೊನ್ನು ಮಾಯೆ ಎಂಬರು ಹೊನ್ನು ಮಾಯೆಯಲ್ಲ ಹೆಣ್ಣು ಮಾಯೆ ಎಂಬರು, ಹೆಣ್ಣು ಮಾಯೆ. ಅಲ್ಲ, ಮಣ್ಣು ಮಾಯೆ ಎಂಬರು, ಮಣ್ಣು ಮಾಯೆ ಅಲ್ಲ, ಮನದ ಮುಂದಣ ಆಸೆಯೇ ಮಾಯೆ ಕಾಣಾಗುಹೇಶ್ವರ, ಮನುಷ್ಯ ಸುಖ, ಸಂತೋಷ, ಸಂತೃಪ್ತಿ, ನೆಮ್ಮದಿ, ಶಾಂತಿಯುತ ಜೀವನದ ಆಸೆ ಅಗತ್ಯಗಳ ಪೂರೈಕೆಗೆ ಅತಿಯಾದ ವ್ಯಾಮೋಹ ಆಸೆ. ಇರಬಾರದು. ಸಂತೃಪ್ತಿಯು ಮಾನವೀಯ ಮೌಲ್ಯಗಳನ್ನು ಸ್ವೀಕರಿಸಿ ಅಳವಡಿಸಿ ಕೊಳ್ಳುವುದರಿಂದ ಮಾತ್ರ ಲಭ್ಯವಾಗುತ್ತದೆ. ಅದಕ್ಕೆ ಬದಲಾಗಿ ಮಧ್ಯಪಾನ, ನಶೆತರುವಂತಹ ಡ್ರಗ್ಸ್, ಮಾಂಸ, ದುಬಾರಿ ವೆಚ್ಚ ಶಕ್ತಿ ಸಾಮರ್ಥ್ಯಗೆ ಮೀರಿದ ವಜ್ರ. ವೈಡೂರ್ಯ ವಸ್ತುಗಳ ಅತಿಯಾದ ವ್ಯಾಮೋಹದಿಂದ ದೇಹದ ಆರೋಗ್ಯ, ಹಾನಿಕಾರಕ ಸ್ಥಿತಿ ಉದ್ಭವಿಸುವ ಎಚ್ಚರಿಕೆಯ ಮೌಲ್ಯಗಳಿವೆ. ಕಾಯಕ ಮಾಡುತ್ತಾ ತನಗೆ ಅವಶ್ಯಕವಾದಷ್ಟು ಸಂಗ್ರಹಿಸಿಟ್ಟುಕೊಂಡು ಉಳಿದ ಉತ್ಪನ್ನ ಸೇವೆಗಳನ್ನು ಸಮಾಜದ ಪ್ರತಿಯೊಬ್ಬ ಇಲ್ಲದವರೆಗೂ ವಿತರಣೆ ಯಾಗಬೇಕಿತ್ತು. ಅತಿಯಾದ ದುರಾಸೆಯನ್ನ ಹೊಂದಿದ ಆಸೆಬುರುಕರು ತಮ್ಮ ಅವಶ್ಯಕತೆಗೆ ಮೀರಿದಂತೆ ಎಲ್ಲವೂ ನನಗೆ, ನನ್ನ ಭವಿಷ್ಯಕ್ಕೆ ಬೇಕೆಂಬ ಸ್ವಾರ್ಥದಿಂದ ಸಂಗ್ರಹಿಸಿಕೊಂಡಲ್ಲಿ ಅಸಮತೋಲನ ಉದ್ಭವಿಸಿ ವಿರಸಕ್ಕೆ ಕಾರಣವಾಗುತ್ತದೆ ಎಂಬುದಾಗಿ ಬಸವೇಶ್ವರರು ಹೊನ್ನಿನೊಳಗೊಂದೊರೆಯ ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದನಾದರೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ ತಿಳಿಸಿದ್ದಾರೆ. ಕಾಯಕವನ್ನು ಕೇವಲ ದುಡಿಮೆಗಷ್ಟೆ ಅರ್ಥೈಸದೆ ತನುಮನ ಶುದ್ಧಿಯಿಂದ ಮಾಡುವ ಕೆಲಸ ಆ ಮೂಲಕ ದೈವ ಸಾಕ್ಷಾತ್ಕಾರ ಪಡೆಯಬಹುದೆಂದು ಸೂಚಿಸಿದ್ದಾರೆ. ಕಾಯಕವೇ ಕೈಲಾಸ ಸೂಕ್ತಿ ಜನರಿಗೆ ಸಾಕ್ಷಾತ್ಕರಿಸಿಕೊಟ್ಟ ಚಿರಂತನ ಜೀವನ ಮೌಲ್ಯ ಸಂದೇಶವಾಗಿದೆ.

ಕರ್ನಾಟಕದ ಮಾರ್ಟಿನ್ ಲೂಥರ್ ಕಿಂಗ್ ಮತ್ತು ಕರ್ನಾಟಕದ ಕಾರ್ಲ್ ಮಾರ್ಕ್ಸ್ ಎಂದು ಬಣ್ಣಿಸಲಾದ ಕ್ರಾಂತಿ ಪುರುಷ ಬಸವೇಶ್ವರರು ಸಾಮಾಜಿಕ ಆರ್ಥಿಕ ಮತ್ತು ಧಾರ್ಮಿಕ ಸುಧಾರಣೆಗಳ ಮೂಲಕ ಮಾನವೀಯ ಮೌಲ್ಯಗಳನ್ನು ಶರಣರ ಜೊತೆಗೂಡಿ ಜಾತ್ಯಾತೀತ ತತ್ವದಡಿ ಸಾಮಾಜಿಕ ನ್ಯಾಯ, ಆರ್ಥಿಕ ಸಮಾನತೆ ಸಾಧಿಸುವ ದೃಢ ಸಂಕಲ್ಪತೊಟ್ಟು ಇಲ್ಲದವರಿಗಾಗಿ ದಾಸೋಹ ಮಾಡುವ ಮನಸ್ಥಿತಿಯನ್ನು ನಿರ್ಮಾಣಮಾಡುವ ಪ್ರಯತ್ನ ಇಂದಿನ ಮನುಕುಲಕ್ಕೆ ವಿದ್ಯಾರ್ಥಿ ನಿಲಯ, ಅನಾಥಾಶ್ರಮ ದಾಸೋಹ. ಪರಿಕಲ್ಪನೆಯ ಮಹತ್ವದ ಪ್ರತಿಪಾದಕರಾಗಿದ್ದಾರೆ.

**ದಾಸೋಹ ಮೌಲ್ಯ :** ಲಿಂಗಾಯತ ಧರ್ಮದಲ್ಲಿ ಕಾಯಕದ ಮಹತ್ವ ದಾಸೋಹಕ್ಕೂ ಪ್ರೇರಣೆ ಇದೆ. ಪ್ರತಿಯೊಬ್ಬ ಶರಣನು ಇಲ್ಲದವರ ಏಳಿಗೆ. ದಾಸೋಹಕ್ಕಾಗಿ, ಆತ್ಮೋದ್ಧಾರ ಮತ್ತು ಸಮಾಜೋದ್ಧಾರ ಭಾವನೆಯಿಂದ ಕೈಗೊಳ್ಳುವ ವೃತ್ತಿ ಶುದ್ಧ ಕಾಯಕವಾಗುತ್ತದೆ. ಕಳ್ಳತನ, ದರೋಡೆ, ದುಷ್ಕೃತ್ಯಗಳನ್ನು ತಿರಸ್ಕರಿಸಿದ್ದಾರೆ. ಶರಣನಾದವ ತನ್ನ ಪರಿಶ್ರಮದಿಂದ ಗಳಿಸಿದ ಸಂಪತ್ತಿನಲ್ಲಿ ತನ್ನ ಅವಶ್ಯಕತೆಗೆ ಅನುಗುಣವಾಗಿ ಬೇಕಾದಷ್ಟು ತನ್ನಲ್ಲಿಟ್ಟುಕೊಂಡು ಉಳಿದ ಸಂಪತ್ತನ್ನ ಸಮಾಜದ ಹಿತಾಸಕ್ತಿಗಾಗಿ ದಾಸೋಹ ಮಾಡಬೇಕೆನ್ನುತ್ತಾರೆ. ಜನ್ಮ ಜನ್ಮಕ್ಕೂ ಹೋಗಲೀಯದೆ ಸೋಹಂ ಎಂದೆನಿಸದೆ ಬದುಕಿಸಯ್ಯ ಕೂಡಲಸಂಗಮದೇವ ಎಂದು ಬಿನ್ನೈಸಿಕೊಳ್ಳುವ ಮೂಲಕ ದಾಸೋಹದ ಅರಿವನ್ನು ಬಸವೇಶ್ವರರು ತಿಳಿಸಿರುತ್ತಾರೆ. ಶರಣರು ಕಾಯಕದ ಜೊತೆಗೆ ದಾಸೋಹ ಸಿದ್ಧಾಂತವನ್ನು ಪ್ರತಿಪಾದಿಸುತ್ತಾ ದಾಸೋಹವೆಂದರೆ ಕಾಯಕದ ಪ್ರತಿಫಲವೇ ಆಗಿದೆ. ಕಾಯಕದಿಂದ ಬಂದ ಆಧಾಯದ ಒಂದಷ್ಟು ಭಾಗವನ್ನು ದಾಸೋಹಕ್ಕೆ ಮೀಸಲಾಗಿ ತೆಗೆದಿರಿಸುವುದು ಮತ್ತು ಅಹಂಕಾರ ಅಳಿದು ನಿರ್ವಂಚನೆಯ ದಾಸೋಹದ ಭಾಗವಾಗಿ ತೊಡಗಿಸಿಕೊಳ್ಳುವುದು ಜೀವನ್‌ಮುಕ್ತಿಯ ಸಾಧನವೇ ಹೌದು. ದಾಸಿಮಯ್ಯನವರು ತಮ್ಮ ವಚನದಲ್ಲಿ ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಬೀಸುವ ಗಾಳಿ ನಿಮ್ಮ ದಾನ, ಎಂದಿದ್ದಾರೆ. ದಾಸೋಹ ಎಂದರೆ ಶರಣರು ದೇವರ ಪ್ರಸಾದ, ದೇವರ ಕೃಪೆ ಮತ್ತು ಸಮಾಜದ ಶ್ರೇಯಸ್ಸಿಗಾಗಿ ನೀಡಿದ ದಾನವೇ ದಾಸೋಹ.

# ನೊಳಂಬ ದೇವಾಲಯಗಳು

ಅರಳಗುಪ್ಪೆಯು ತುಮಕೂರು ಜಿಲ್ಲೆಯ ತಿಪಟೂರು ತಾಲ್ಲೂಕಿನಲ್ಲಿರುವ ಪ್ರಮುಖ ಸ್ಥಳ. ತಿಪಟೂರಿನಿಂದ ಅರಳಗುಪ್ಪೆಗೆ ೧೮ ಕಿ.ಮೀ ಅದರೆ ಬಾಣಸಂದ್ರದಿಂದ ಕೇವಲ ೫ ಕಿ.ಮೀ. ಆಗುತ್ತದೆ. ತಿಪಟೂರಿನಿಂದ ಅನಿಯಮಿತವಾಗಿ ಇಲ್ಲಿಗೆ ಬಸ್ ವ್ಯವಸ್ಥೆಯಿದ್ದು ಪ್ರಮುಖವಾದ ಬೆಂಗಳೂರು ಹುಬ್ಬಳ್ಳಿ ಮಾರ್ಗದ ನಡುವೆ ಇರುವುದರಿಂದ ಈ ಗ್ರಾಮದಲ್ಲಿ ರೈಲ್ವೆ ನಿಲ್ದಾಣವೂ ಇದೆ. ಎಲ್ಲಾ ಪ್ಯಾಸೆಂಜೆರ್ ರೈಲುಗಳು ಇಲ್ಲಿ ನಿಲ್ಲಿಸಲಿದ್ದು ಕೆಲವು ಎಕ್ಸ್‌ಪ್ರೆಸ್‌ಗಳೂ ಕೂಡ ಇಲ್ಲಿ ನಿಲ್ಲಿಸಲಿವೆ.

ಇಲ್ಲಿರುವ ಹೊಯ್ಸಳರ ಅದ್ಭುತವಾದ ದೇವಾಲಯಕ್ಕೆ ಮುಂಚೆಯೇ ಇಲ್ಲೊಂದು ಸಧೃಢವಾದ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪದ ಪ್ರಾಯೋಗಿಕ ದೇವಾಲಯವೊಂದು ಅಸ್ತಿತ್ವದಲ್ಲಿತ್ತು. ಅರಳುಗುಪ್ಪೆ ಅಥವಾ ಅರಳಗುಪ್ಪೆ ಎಂದು ಕರೆಯಲಾಗುವ ಈ ಗ್ರಾಮದ ಪ್ರಾಚೀನ ಹೆಸರು ಅಳರಿಗುಪ್ಪೆ. ಇಲ್ಲಿರುವ ಕಲ್ಲೇಶ್ವರ ದೇವಾಲಯವನ್ನು ಕೆಲವು ವಿದ್ವಾಂಸರು ಗಂಗರ ದೇವಾಲಯ ಎಂದು ಕರೆದಿರುವರಾದರೂ ಇಲ್ಲಿನ ವಾಸ್ತುವಿಶೇಷಗಳನ್ನು ಗಮನಿಸಿದರೆ ಇದು ಖಂಡಿತವಾಗಿಯೂ ನೊಳಂಬರ ದೇವಾಲಯವಾಗಿದೆ. ಈ ಗ್ರಾಮದಲ್ಲಿ ದೊರೆತ ಗಂಗರ ಕಾಲದ ಶಾಸನವನ್ನು ಅನುಲಕ್ಷಿಸಿ ಕೆಲವು ವಿದ್ಯಾಂಸರು ಈ ದೇಗುಲವನ್ನೂ ಸಹ ಗಂಗರ ದೇವಾಲಯ ಎಂದು ಕರೆದಿದ್ದಾರೆ. ದೇಗುಲ ನಿರ್ಮಾಣ ವಿಷಯದಲ್ಲಿ ಯಾವುದೇ ಶಾಸನಾಧಾರಗಳು ಇಲ್ಲವಾದರೂ ನಿರ್ಮಾಣ ಶೈಲಿಯನ್ನು ಗಮನಿಸಿ ಇದನ್ನು ನೊಳಂಬರ ದೇವಾಲಯವೆಂದೇ ತೀರ್ಮಾನಿಸಲಾಗಿದೆ. ಇಲ್ಲಿರುವ ಅಷ್ಟ ದಿಕ್ಪಾಲಕರ ಶಿಲ್ಪಗಳಿಂದ ಈ ದೇವಾಲಯವು ವಿಶ್ವಪ್ರಸಿದ್ಧವಾಗಿದೆ.

ಪೂರ್ವಾಭಿಮುಖವಾಗಿರುವ ಕಲ್ಲೇಶ್ವರ ದೇವಾಲಯವು ಸುಮಾರು ೨ ಅಡಿಯ ಉಪಪೀಠದ ಮೇಲೆ ನಿಂತಿದೆ. ೨ ಅಡಿಯ ಅಧಿಷ್ಠಾನದ ಮೇಲೆ ದೇಗುಲವು ನಿಂತಿದೆ. ಗರ್ಭಗುಡಿ, ತೆರೆದ ಅಂತರಾಳ, ಗೂಢಮಂಟಪಗಳನ್ನು ಹೊಂದಿದೆ. ಕಲ್ಲೇಶ್ವರ ದೇವಾಲಯದ ಎದುರಿಗೆ ತೆರೆದ ನಂದಿಮಂಟಪವಿದ್ದು ದೇವಾಲಯದ ಎದುರಿಗೂ ಹಾಗೂ ಎಡಬಲಗಳಲ್ಲೂ ಒಟ್ಟು ಮೂರು ಕೋಣೆಗಳಿದ್ದು ಇದರ ಅಧಿಷ್ಠಾನವು ಕಲ್ಲೇಶ್ವರ ದೇವಾಲಯದ ಮಟ್ಟದಲ್ಲೇ ಇದ್ದುದರಿಂದ ಇದನ್ನು ಸಮಕಾಲೀನವಾಗಿಯೇ ನಿರ್ಮಿಸಿರಬೇಕು. ಆದರೆ ಇದರಲ್ಲಿ ಉಮಾಮಹೇಶ್ವರ ಬಿಂಬವನ್ನು ಹೊರತುಪಡಿಸಿದರೆ ಇನ್ನುಳಿದ ಎರಡು ಬಿಂಬಗಳು ಹೊಯ್ಸಳರ ಕಾಲದ್ದಾಗಿದೆ. ದೇಗುಲಕ್ಕೆ ಬಲಭಾಗದಲ್ಲಿರುವ ಒಂದು ಕೋಣೆಯಲ್ಲಿ ಉಮಾಮಹೇಶ್ವರ ಶಿಲ್ಪವನ್ನು ಇಡಲಾಗಿದೆ. ಎದುರುಗಡೆಯಲ್ಲಿರುವ ಗುಡಿಯಲ್ಲಿ ಹೊಯ್ಸಳರ ಕಾಲದ ಸೂರ್ಯನ ಶಿಲ್ಪವಿದ್ದು ಎಡಭಾಗದಲ್ಲಿರುವ ಗುಡಿಯಲ್ಲಿ ಹೊಯ್ಸಳರ ಕಾಲದ ಚೆನ್ನಕೇಶವನ ಶಿಲ್ಪವಿದೆ. ದೇವಾಲಯದ ಸುತ್ತಲೂ ಕಲ್ಲೇಶ್ವರ ದೇವಾಲಯವನ್ನು ಹೊರತುಪಡಿಸಿದರೆ ಇನ್ನೂ ಐದು ದೇವಾಲಯಗಳಿದ್ದು ಇವುಗಳಲ್ಲಿ ಕೆಲವಾದರೂ ನೊಳಂಬರ ಕಾಲದಲ್ಲಿಯೇ ನಿರ್ಮಾಣವಾದಂತಿದೆ. ಇದೇ ಅರಳಗುಪ್ಪೆಯ ಕೆರೆಯ ತೂಬಿನಲ್ಲಿರುವ ಕ್ರಿ.ಶ. ೧೧೯೧ರ ಶಾಸನವು ಮಹಾದೇವ ದೇವಾಲಯವನ್ನು ಹೆಸರಿಸುತ್ತದೆ. ಇದು ಬಹುಶಃ ಈ ಕಲ್ಲೇಶ್ವರ ದೇವಾಲಯವೇ ಇರಬೇಕು.



ಸುಂಕಂ ಗೋವರ್ಧನ
ಬೆಂಗಳೂರು
ಮೊ : 9535762464

**ಗರ್ಭಗೃಹ :** ದೇವಾಲಯದ ಗರ್ಭಗೃಹದ ಒಳಮುಖವು ಒಟ್ಟು ಏಳು ಅಡಿ ಉದ್ದ ಹಾಗೂ ಏಳು ಅಡಿ ಅಗಲಗಳನ್ನು ಹೊಂದಿರುವ ಚೌಕಾಕಾರದ ಕೋಣೆಯಾಗಿದೆ. ಈ ಗರ್ಭಗೃಹದಲ್ಲಿ ಸುಮಾರು ಎರಡು ಅಡಿಯ ಪೀಠದ ಮೇಲೆ ಸುಮಾರು ಒಂದೂವರೆ ಅಡಿಯ ಶಿವಲಿಂಗವಿದೆ. ಶಿವಲಿಂಗದ ಪೀಠವು ಸುಮಾರು ೪ ಅಡಿಗಳಷ್ಟು ಅಗಲವಾಗಿವೆ. ಇದು ನೊಳಂಬರ ಕಾಲದಲ್ಲಿ ನಿರ್ಮಾಣವಾದ ಶಿವಲಿಂಗಗಳಲ್ಲಿ ಅತ್ಯಂತ ಪ್ರಮುಖವಾದ ಶಿವಲಿಂಗವಾಗಿದೆ.



ಗರ್ಭಗೃಹದ ಬಾಗಿಲುವಾಡವು ಅತ್ಯಂತ ಸರಳವಾಗಿದ್ದು ಕೇವಲ ಮೂರು ಶಾಖೆಗಳನ್ನು ಒಳಗೊಂಡಿದೆ. ಎರಡು ಪದ್ಮಬಂಧ ಶಾಖೆಗಳ ನಡುವೆ ಇರುವ ವಿನ್ಯಾಸವು ಇದರ ಪ್ರಮುಖ

ಕೇಂದ್ರವಾಗಿದೆ. ಕೆಳಗಡೆ ಗಂಗೆ ಮತ್ತು ಯಮುನೆಯರ ಬದಲಿಗೆ ಸಾಲಂಕೃತ ವಾದ ಎರಡು ಪೂರ್ಣಕುಂಭಗಳನ್ನು ಬಿಡಿಸಲಾಗಿದೆ. ಕೆಳಗಿನ ಹೊಸ್ತಿಲ ಎರಡು ಪಾರ್ಶ್ವಗಳಲ್ಲಿ ಎರಡು ಬದಿಯಲ್ಲಿ ಎರಡು ಅರ್ಧಕಮಲಗಳನ್ನು ಬಿಡಿಸಲಾಗಿದೆ.

**ತೆರೆದ ಅಂತರಾಳ :** ನಾವು ಗೂಢಮಂಟಪದಲ್ಲಿ ನಿಂತರೆ ತೆರೆದ ಅಂತರಾಳದಲ್ಲಿರುವ ಎರಡು ಶ್ರೀಕಾರದ ತಿರುಗುಣಿ ಕಂಬಗಳನ್ನು ನೋಡಬಹುದು. ಇವುಗಳನ್ನು ವಾಸ್ತುಶಾಸ್ತ್ರವು ರುದ್ರಕಾಂತ ಕಂಬಗಳೆಂದು ಕರೆಯುತ್ತದೆ. ಗೂಢಮಂಟಪದ ಕಂಬಗಳಿಗೆ ಹೋಲಿಸಿದರೆ ಇದು ಗಾತ್ರದಲ್ಲಿ ಸ್ವಲ್ಪ ಚಿಕ್ಕದಾಗಿವೆ. ಗರ್ಭಗುಡಿ ಮತ್ತು ಅಂತರಾಳವು ಸಂಧಿಸುವ ಗೋಡೆಗಳಲ್ಲಿ ಎರಡು ಭಿತ್ತಿಪಾದಗಳನ್ನು ಬಿಡಿಸಲಾಗಿದೆ. ಅಂತರಾಳ ಹಾಗೂ ಗೂಢಮಂಟಪಗಳು ಸಂಧಿಸುವ ಗೋಡೆಗಳಲ್ಲೂ ಸಹ ಹೀಗೆಯೇ ಎರಡು ಭಿತ್ತಿಪಾದಗಳನ್ನು ಬಿಡಿಸಲಾಗಿದೆ.

**ಗೂಢಮಂಟಪ :** ನಾವು ದೇವಾಲಯವನ್ನು ಒಳಹೊಕ್ಕ ತಕ್ಷಣ ಸಿಗುವುದೇ ಈ ಗೂಢಮಂಟಪ. ಇಲ್ಲಿ ನಾಲ್ಕು ನೊಳಂಬರ ಕಾಲದ ಶ್ರೀಕಾರದ ಕಂಬಗಳನ್ನು ನಾವು ನೋಡಬಹುದು. ಇಂತಹ ಕಂಬಗಳನ್ನು ರುದ್ರಕಾಂತ



ಕಂಬಗಳೆಂದು ಕರೆಯಲಾಗುತ್ತದೆ. ಅನೇಕ ವಿದ್ವಾಂಸರು ಈ ಕಂಬಗಳ ಕಾರಣದಿಂದಲೇ ಈ ದೇವಾಲಯವನ್ನು ಗಂಗರ ದೇವಾಲಯವೆಂದು ಕರೆದಿದ್ದಾರೆ, ದೇವಾಲಯದ ಒಳಭಿತ್ತಿಯಲ್ಲಿರುವ ಕಂಬಗಳು ಚತುರಶ್ರ ಮುಖವನ್ನು ಹೊಂದಿರುವ ಚಿತ್ರಖಂಡ ಮಾದರಿಯ ಕಂಬಗಳಾಗಿವೆ. ಈ ಕಂಬಗಳಲ್ಲಿ ಯಾವುದೇ ರೀತಿಯ ಅಲಂಕರಣಗಳನ್ನು ಕೆತ್ತಲಾಗಿಲ್ಲ. ಇಲ್ಲಿನ ನೊಳಂಬ ಶಿಲ್ಪಗಳು ತಮ್ಮ ಸಂಪೂರ್ಣ ಶ್ರಮವನ್ನು ವಿಶ್ವಮಾನ್ಯ ಅಷ್ಟದಿಕ್ಪಾಲಕರ ಶಿಲ್ಪಗಳನ್ನು ಕೆತ್ತುವುದರಲ್ಲೇ ವಿನಿಯೋಗಿಸಿದ್ದುದರಿಂದ ಇಲ್ಲಿನ ಕಂಬಗಳಲ್ಲಿ ಅಂತಹ ಅಲಂಕರಣಗಳನ್ನು ಮಾಡಲು ಹೋಗಿಲ್ಲ ಎಂದೂ ಅನಿಸುತ್ತದೆ.



**ಅಷ್ಟದಿಕ್ಪಾಲಕರ ಶಿಲ್ಪಗಳು :** ಬಹುತೇಕ ವಿದ್ವಾಂಸರ ಅಭಿಪ್ರಾಯದಂತೆ ಕಲ್ಲೇಶ್ವರ ದೇವಾಲಯದ ಅಷ್ಟದಿಕ್ಪಾಲಕರ ಶಿಲ್ಪಗಳು ಅತ್ಯಂತ ಸೊಗಸಾದ ಪಟ್ಟಿಕೆಯಾಗಿದೆ. ಒಂಬತ್ತು ಅಂಕಣಗಳಲ್ಲಿ ಈ ಪಟ್ಟಿಕೆಯನ್ನು ನಿರ್ಮಿಸಲಾಗಿದೆ. ನಟ್ಟ ನಡುವೆ ನೊಳಂಬರ ಅತ್ಯದ್ಭುತ ನಟರಾಜನ ಶಿಲ್ಪವಿದ್ದರೆ ಸುತ್ತಲೂ ಅಷ್ಟದಿಕ್ಪಾಲಕರನ್ನು ಕೆತ್ತಲಾಗಿದೆ. ಈಗ ಪ್ರತಿಯೊಂದು ಶಿಲ್ಪಗಳನ್ನು ವಿವರವಾಗಿ ಗಮನಿಸೋಣ.



**ನಟರಾಜ :** ಈಗಾಗಲೇ ತಿಳಿದಿರುವ ಹಾಗೆ ನೊಳಂಬ ಶಿಲ್ಪಗಳಲ್ಲಿ ನಟರಾಜನಿಗೆ ವಿಶೇಷವಾದ ಪ್ರಾಮುಖ್ಯತೆ ಯಿದೆ. ಬಹುತೇಕ ಅಷ್ಟದಿಕ್ಪಾಲಕರ ಶಿಲ್ಪಗಳ ನಡುವೆ ನೊಳಂಬರು ನಟರಾಜನನ್ನೇ ಮೂಡಿಸಿದ್ದಾರೆ. ಆದರೆ ದೇವಾಲಯದಲ್ಲಿ ಇಂದು ಉಳಿದುಕೊಂಡಿರುವ ನೊಳಂಬರ ಅಷ್ಟದಿಕ್ಪಾಲಕರ ಪಟ್ಟಿಕೆಯಲ್ಲಿ ಹೇಮಾವತಿಯ ಬಳಿಯಿರುವ ಪಾತಶಿವರದ ದೇವಾಲಯವನ್ನು, ಧರ್ಮಪುರಿಯ ಮಲ್ಲಿಕಾರ್ಜುನ ದೇವಾಲಯುವನ್ನು, ಗಮನಿಸಿದರೆ ಇವೆರಡಕ್ಕಿಂತ ವಿಭಿನ್ನವಾದ ರೀತಿಯಲ್ಲಿ ಇಲ್ಲಿ ನಟರಾಜನನ್ನು ಪಸ್ತುತಪಡಿಸಲಾಗಿದೆ.

# ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಅರಭಗಟ್ಟ ಲಿಂಗೈಕ್ಯ ಬಸಪ್ಪನವರು

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟೀಷರವರೆಗಿನ ಎಲ್ಲಾ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಕೀರ್ತಿಕಳಶವನ್ನು ಎತ್ತಿಹಿಡಿದಿರುವುದರ ಪ್ರತೀಕ. ನಮ್ಮ ಸ್ವಾತಂತ್ರ್ಯ/ಸ್ವಾತಂತ್ರ್ಯ ಎನ್ನುವುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ, (ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷ, ಸ್ವಾತಂತ್ರ್ಯ ನಮ್ಮ ಪರಮಪುರುಷಾರ್ಥ ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲಾ ಭಾರತೀಯರು ಭಾರತಮಾತೆಯ ಪದತಲದಲ್ಲಿ ತನುಮನಧನಗಳ್ನು ಅರ್ಪಿಸಿದ್ದಾರೆ. ಭಾರತವನ್ನು ಭಾರತದ ಸ್ವಾತಂತ್ರ್ಯ ಸಂಗ್ರಾಮದ ತುಡಿತ ಸುಮಾರು ಮುನ್ನೂರು ವರ್ಷ ಶಕ್ತಿಯುತ ಉಳಿಸಿರುವ ಮಹಾತ್ಮರುಗಳಿಗೂ ಮಿಗಿಲಾದುದು. ಇಡೀ ಭಾರತವೇ ಬ್ರಿಟೀಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಅರ್ಥಪೂರ್ಣವಾಗಿ ಸಡಗರ, ಸಂಭ್ರಮಗಳಿಂದ ಆಚರಿಸಿದ್ದೇವೆ. ಅದು ನಮ್ಮ ಕರ್ತವ್ಯ ಕೂಡ ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮದ ರಣಕಹಳೆ ನಮ್ಮ ಕರ್ನಾಟಕದಲ್ಲೂ ಮೊಳಗಿತು. ಕರ್ನಾಟಕದ ವೀರಸಿಂಹಗಳು ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ದುಮುಕಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸುತ್ತೇವೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ವಿದುರಾಶ್ವತ್ಥ, ಈಸೂರು, ಶಿವಪುರ ಸೇರಿದಂತೆ ಅನೇಕ ಅವಶೇಷಗಳು, ಕುರುಹುಗಳು ಇತಿಹಾಸದ ಪುಟಗಳಲ್ಲಿ ದಾಖಲೆಯಾಗಿವೆ.



ಕನ್ನಡ ನಾಡಿನಲ್ಲಿ ವಿಶಿಷ್ಟ ಇತಿಹಾಸ ಹೊಂದಿರುವ ಗಂಡುಮೆಟ್ಟಿನ ಕೋಟೆಯ ನಾಡು ಚಿತ್ರದುರ್ಗ ಇಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವೂ ತುಂಬ ಮಹತ್ವವಾದುದು. ತಮ್ಮ ದೇಶಪ್ರೇಮದ ಹೋರಾಟದಲ್ಲಿ ಜನಸಾಮಾನ್ಯರೂ ರೈತರೂ ಇದ್ದರು. ತಂದೆ ಸಿದ್ಧರಾಮಪ್ಪ, ತಾಯಿ ಬೊಮ್ಮಕ್ಕನವರ ದ್ವಿತೀಯ ಸುಪುತ್ರರಾಗಿ ಮಾರ್ಚಿ 10 ರಂದು 1930ರಲ್ಲಿ ಜನಿಸಿದ ದ್ವಿತೀಯ ಪುತ್ರನಿಗೆ ಬಸಪ್ಪನೆಂದು ನಾಮಕರಣ ಮಾಡಿದರು. ಬಾಲ್ಯದಲ್ಲಿಯೇ ಮಾತಾಪಿತೃ ವಿಯೋಗ ಪಡೆದ ನತದೃಷ್ಟ ಬಸಪ್ಪನವರನ್ನು ಅವರ ದಾಯಾದಿಗಳು ಹಾಗೂ ಹಿರಿಯ ಸೋದರ ಸಣ್ಣಸಿದ್ದಪ್ಪನವರು, ಸೋದರತ್ತೆ ಬಸವಾಪುರದ ಲಕ್ಕಮ್ಮ ಪಟೇಲ್ ಕಲ್ಲಪ್ಪನವರು ಅಕ್ಕರೆಯಿಂದ ವಿದ್ಯೆ ಕಲಿಯಲೆಂದು ಶಾಲೆಗೆ ಕಳುಹಿಸುತ್ತಾ, ಕೃಷಿ ಕುಟುಂಬದ ಕೆಲಸ ಕಾರ್ಯಗಳಲ್ಲಿ ನೆರವಾಗುತ್ತಾ ಬೆಳೆಯುತ್ತಿದ್ದ ಬಸಪ್ಪನವರಿಗೆ ಅರಬಗಟ್ಟದ ಆಂಜನೆಯ ಗುಡಿ ಮುಂಭಾಗದ ತುಂಬಿ ನಿಂತ ಕೆರೆ. ಹರಿಯುವ ಹಳ್ಳಗಳ ಸುಂದರ ಪರಿಸರ ಬೆಂಗಳೂರಿನಿಂದ ಬೊಂಬಾಯಿಗೆ ಓಡಾಡುತ್ತಿದ್ದ ಉಗಿಬಂಡಿ. ಅಚ್ಚರಿಯ ಸಂಗತಿ ಆ ರೈಲ್ವೆ ರಸ್ತೆಯ ಬದಿಯಲ್ಲೇ ಕಾಲ್ನಡಿಗೆಯಲ್ಲಿ ರಾಮಗಿರಿ ಹಾಗೂ ಹೊಸದುರ್ಗ ರೋಡ್ ಶಾಲೆಗಳಲ್ಲಿ ವಿದ್ಯಾಭ್ಯಾಸ. ಸಜ್ಜನಿಕೆಯ ಗ್ರಾಮಸ್ಥರಿಂದ ಅರಬಗಟ್ಟ ಗ್ರಾಮದಲ್ಲಿ ಸಮ ವಯಸ್ಕ ಬಾಲ್ಯದ ಗೆಳೆಯರೊಂದಿಗೆ ಗೋಲಿ, ಬುಗುರಿ, ಗೆಜ್ಜುಗ, ಚೆಂಡು ದಾಂಡುಗಳೊಂದಿಗೆ ಗ್ರಾಮೀಣ ಆಟಗಳನ್ನಾಡುತ್ತಾ ಮುದ್ದಾದ ಗೋವಿನಕರುಗಳೊಂದಿಗೆ ಮುಂದಿನ ಜೀವನದ ಗುರಿ ಅರಿಯದ ವಯಸ್ಸಿನಲ್ಲಿ ಬಾಲ್ಯ ಕಳೆಯುತ್ತಾ ಬಸವಾಪುರದ ತುಂಬಿದ ಮನೆ ಅರಬಗಟ್ಟ ಹೀಗೆ ಓಡಾಟಗಳ ನಡುವೆ ಊರಿನ ಹಿರಿಯರು ಭಜನೆ, ತತ್ವಪದ, ಜನಪದ ಲಾವಣಿ ಆಗಾಗ ಊರಿನ ರೈತ ಕಲಾವಿದರೇ ಅಭಿನಯಿಸುತ್ತಿದ್ದ ಹೇಮರೆಡ್ಡಿ ಮಲ್ಲಮ್ಮ ಶ್ರೀಗುರು ಸಿದ್ಧರಾಮೇಶ್ವರ, ಜಗಜ್ಯೋತಿ ಬಸವೇಶ್ವರ ಮುಂತಾದ ನಾಟಕಗಳು ಸಾಂಸ್ಕೃತಿಕ ಕಾರ್ಯಕ್ರಮಗಳು

ಬಾಲಕ ಬಸಪ್ಪನ ಮೇಲೆ ಹೆಚ್ಚಿನ ಪರಿಣಾಮ ಬೀರಿ ಭದ್ರಾವತಿಯಲ್ಲಿ ಭಜನೆ ಬಸಪ್ಪ ಎಂದೇ ಖ್ಯಾತಿ ಪಡೆದುಕೊಂಡರು. ತಾಯಿ ತಂದೆ ಇಲ್ಲದ ಮಗುವೆಂದು ಬಂಧು ಬಳಗ, ಹಿತೈಷಿಗಳ ತೋರಿಸುತ್ತಿದ್ದ ಪ್ರೀತಿ, ವಾತ್ಸಲ್ಯಗಳು ಇವರಿಗೆ ಪ್ರೋತ್ಸಾಹದಾಯಕವಾಗಿತ್ತು. ಹೊಸದುರ್ಗ ರೋಡ್ ಮಲ್ಲಪ್ಪನಹಳ್ಳಿ ಮಾಧ್ಯಮಿಕ ಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದ ಸಮಯದಲ್ಲಿ ಅಂದರೆ ಚಿತ್ರದುರ್ಗದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕಹಳೆಯೂದಿ ಜಿಲ್ಲೆಯ ಜನರನ್ನು ಸಂಘಟಿಸಿ ಹೋರಾಟಕ್ಕೆ ವೇದಿಕೆ ಸಿದ್ಧಪಡಿಸುವ ಕಾರ್ಯವನ್ನು ಹರಿಹರ ಗುಂಡೂರಾಯರು ಸಿದ್ಧಪಡಿಸಿದರೆ ಶಾಲಾ ಕಾಲೇಜು ವಿದ್ಯಾರ್ಥಿಗಳು, ಕೂಲಿಕಾರ್ಮಿಕರು, ಹಳ್ಳಿಗರು, ಮಹಿಳೆಯರೂ, ಅನಕ್ಷರಸ್ಥರು ನಿರಪೇಕ್ಷ ಬುದ್ಧಿಯಿಂದ ಶುದ್ಧ ಮನಸ್ಸಿನಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಮುಕಿ, ಎಷ್ಟೆಲ್ಲಾ ಉಲ್ಲೇಖನೀಯ ಸಾಧನೆ ಮಾಡಿದರೆಂಬುದು ಇಂದು ಮರೆತು ಹೋಗುವಂತಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಬಂಧಿಸಲ್ಪಟ್ಟ ಸತ್ಯಾಗ್ರಹಿಗಳ ಸಂಖ್ಯೆ ಅಂದಿನ ಮೈಸೂರು ಸಂಸ್ಥಾನದಲ್ಲಿ ದ್ವಿತೀಯ ಸ್ಥಾನ ಪಡೆದಿರುವುದು ಇಲ್ಲಿ ಹೋರಾಟ ಎಷ್ಟು ತೀವ್ರವಾಗಿತ್ತೆಂಬುದಕ್ಕೆ ಸಾಕ್ಷಿಯಾಗಿದೆ. ದೇಶದ ಇತಿಹಾಸದಲ್ಲಿ ಸಾವಿರಾರು ರೋಚಕ ಘಟನೆಗಳು ಸಂಭವಿಸಿರುವುದಾದರೂ ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲೂ ನಮ್ಮ ಹಿರಿಯರು ಕೂಡಾ ಅಂತಹ ಹೋರಾಟ ಮಾಡಿದ್ದರು ಎನ್ನುವುದು ನಮ್ಮೆಲ್ಲರಿಗೂ ಅತ್ಯಂತ ಅಭಿಮಾನದ ಹೆಮ್ಮೆಯ ವಿಷಯವಾಗಿದೆ. ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿ 1920ರ ನಂತರದಲ್ಲಿ ಆರಂಭಗೊಂಡಿತು. ಉತ್ತರ ಭಾರತದಲ್ಲಿ ನಡೆಯುತ್ತಿದ್ದ ಚಳುವಳಿ, ಸತ್ಯಾಗ್ರಹ, ಹೋರಾಟದ ಘಟನೆಗಳನ್ನು ಕುತೂಹಲದಿಂದ ಗಮನಿಸುತ್ತಿದ್ದರು. ನೇತಾರರ ಜಾಗೃತಿ ಭಾಷಣಗಳನ್ನು ದೇಶಭಕ್ತಿಯನ್ನು ಬಡಿದೆಬ್ಬಿಸುವ ಬರಹಗಳನ್ನು ಕವನ, ಲಾವಣಿಗಳನ್ನು ಪತ್ರಿಕೆಗಳಲ್ಲಿ ಓದುತ್ತಾ ಜಾಗೃತರಾಗುತ್ತಿದ್ದರು.

ಬದುಕು ಕೆಲವರಿಗೆ ಹೂದೋಟ ಮತ್ತೆ ಕೆಲವರಿಗೆ ಯುದ್ಧಭೂಮಿ. ತನ್ನ ಬದುಕಿನಲ್ಲಿ ಬಂದ ಎಡರು ತೊಡರುಗಳನ್ನು ಎದುರಿಸುತ್ತಾ ಹೋರಾಟದಿಂದ ತನ್ನ ಜೀವನವನ್ನು ಹಸನಾದ ಹೂದೋಟವನ್ನಾಗಿ ಮಾಡಿಕೊಂಡ ಅಪರೂಪದ ಸಾರ್ಥಕ ಬದುಕು. ಅರಬಗಟ್ಟ ಸಿದ್ದರಾಮಪ್ಪ ಬಸಪ್ಪನವರದು. ಕಾಲ ಎಂಬ ವಸ್ತುವೇ ಜೀವನ ಕಾಲದ ಸದುಪಯೋಗ ಪಡೆದುಕೊಂಡವನೇ ಜಾಣ. ಬದುಕಿನ ಶ್ರೇಷ್ಠ ಸಲಹೆಗಾರ ಕಾಲ ಈತನಿತ್ತಿರುವ ಅವಧಿಯೊಳಗೆ ಯೋಗ್ಯರಾಗಿ ಬದುಕಿದರೆ ನಮ್ಮ ಬದುಕು ಅಜರಾಮರ ಸಾಧನೆಗಾಗಿ ಬದುಕು ವೇದನೆಗಾಗಿ ಅಲ್ಲ ಎಂದು ನಿರೂಪಿಸಿದ ಎ.ಎಸ್.ಬಸವಪ್ಪನವರು ಮದಕರಿ ನಾಯಕರಾಳಿದ ಗಂಡು ಮೆಟ್ಟಿದ ನಾಡು ಎಂದೇ ಪ್ರಖ್ಯಾತವಾಗಿರುವ ಕೋಟೆಗಳ ನಾಡು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ರಾಮಗಿರಿ ಹೋಬಳಿ ಅರಭಗಟ್ಟ ಗ್ರಾಮದಲ್ಲಿ ಕೃಷಿಕಾಯಕದ ಶರಣ ಸಿದ್ದರಾಮಪ್ಪ ಹಾಗೂ ಬೊಮ್ಮಕ್ಕ ದಂಪತಿಗಳಾಗಿದ್ದು ಗುರು ಲಿಂಗ ಜಂಗಮ ಪ್ರೇಮಿಗಳು ಸದಾ ಕೃಷಿ ಕಾಯಕ ಸಾಮಾಜಿಕ ಚಿಂತನೆಗಳಲ್ಲಿ ತೊಡಗಿದ್ದ ಇವರ ದ್ವಿತೀಯ ಮಗ.

ಚಿತ್ರದುರ್ಗದ ಅತ್ಯಂತ ಪ್ರತಿಭಾವಂತ ವಕೀಲರಾಗಿದ್ದ ಎಸ್.ನಿಜಲಿಂಗಪ್ಪನವರು ಹೋರಾಟವನ್ನು ಅನೇಕ ವಕೀಲರು ಹುಲ್ಲೂರು ಶ್ರೀನಿವಾಸ ಜೋಯಿಸರು, ಕೊಟ್ರೆ ನಂಜಪ್ಪನವರು, ಬಳ್ಳಾರಿ ಸಿದ್ದಮ್ಮನವರು ರಾಜಶೇಖರ ಹಿರೇಮಠ ಮುಂತಾದವರು. ಬ್ರಿಟೀಷರೇ ಭಾರತ ಬಿಟ್ಟು ತೊಲಗಿ ಎಂಬ ಕ್ವಿಟ್ ಇಂಡಿಯಾ ಚಳವಳಿ ಆರಂಭಿಸಿದರು. ಚಿತ್ರದುರ್ಗ ದಾವಣಗೆರೆ, ಹೊಳಲ್ಕೆರೆ, ಹಿರಿಯೂರು, ಚಳ್ಳಕೆರೆ ಮೊಳಕಾಲ್ಮೂರು, ರಂಗಾಪುರ ಬಾಗೂರು, ಕೊಳಹಾಳು, ಕಸ್ತೂರಿ ರಂಗಪ್ಪನಹಳ್ಳಿ ದೊಗ್ಗನಾಳು, ನುಲೇನೂರು, ಗೊರ್ಲತ್ತು ಮರಡಿಹಳ್ಳಿ ಮುಂತಾದ ಕಡೆ ಚಳವಳಿಗಾರರನ್ನು ಮನಬಂದಂತೆ ಹೊಡೆದು ವ್ಯಾನುಗಳಲ್ಲಿ ತುಂಬಿಕೊಂಡು ಸೆರಮನೆಗಳು ಬಂಧಿಸಲು ಸಾಲದೆ ದೂರದ ಕಾಡುಗಳಲ್ಲಿ ಬಿಟ್ಟುಬರುತ್ತಿದ್ದರು. ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳು ಸಹಜವಾಗಿ ಚಳವಳಿಯಲ್ಲಿ ಮಲ್ಲಪ್ಪನಹಳ್ಳಿ, ಹೊಸದುರ್ಗ ರೋಡ್ ಮುಂತಾದ ಕಡೆ ಈಚಲು ಮರಕ್ಕೆ ಕಟ್ಟಿದ್ದ ಹೆಂಡದ ಗಡಿಗೆಗಳನ್ನು ಹೊಡೆದುಹಾಕುತ್ತಾ ಈಚಲು ಮರಗಳನ್ನು ಕಡಿದುಹಾಕುತ್ತಾ ದೇಶಭಕ್ತಿಗೀತೆಗಳನ್ನೂ ಲಾವಣಿಗಳನ್ನೂ ಹಾಡುತ್ತಾ ಪೊಲೀಸರ ಬೆದರಿಕೆ ಲಾಟಿ ಏಟುಗಳನ್ನು ಲೆಕ್ಕಿಸದೆ ದೇಶದ ಸ್ವಾತಂತ್ರ್ಯಕ್ಕೆ ಉಗ್ರಹೋರಾಟ ನಡೆಸಿದರು. ಹೆಂಡವನ್ನು ಹೊತ್ತುತರುತ್ತಿದ್ದ ಲಾರಿಗಳ್ನು ನಿಲ್ಲಿಸಿ ಅದರಲ್ಲಿದ್ದ ಹೆಂಡದ ಚೀಲಗಳನ್ನು ಕೊಯ್ದು ಹಾಕುತ್ತಿದ್ದರು. ರೈಲ್ವೆ ಭೋಗಿಗಳನ್ನು ಧ್ವಂಸ ಮಾಡುವ ಕೆಲಸ ಉರಿವ ಬಿಸಿಲಲ್ಲಿ ಸುಡುವ ಧೂಳಿನಲ್ಲಿ ಬರಿಕಾಲಿನಲ್ಲಿ ಚಪ್ಪಲಿ ಇಲ್ಲದೆ, ಕುಡಿಯಲು ನೀರಿಲ್ಲದೆ ಕಾಡು ಮೇಡುಗಳನ್ನು ಅಲೆಯುವ ಪರಿಸ್ಥಿತಿ. ಚಿಕ್ಕಯುಗಟಿ ಬಸಪ್ಪನವರು, ಅರಬಗಟ್ಟ ಸಿದ್ದರಾಮಪ್ಪನವರು ಮಲ್ಲಪ್ಪನ ಹಳ್ಳಿ ಈಶ್ವರಪ್ಪ ಚನ್ನಬಸಪ್ಪ ರುದ್ರಪ್ಪ ಮುಂತಾದವರು ಶೆಟ್ಟಿಹಳ್ಳಿ ರುದ್ರಪ್ಪ ಬಸವಾಪುರ ವೀರಭದ್ರಪ್ಪ ಉಂತಾದವರು ಹೊಳಲ್ಕೆರೆ ತಾ. ರಂಗಾಪುರದ ಎನ್.ಆರ್. ಸಿದ್ದಪ್ಪ ಕೊಟ್ರೆ ನಂಜಪ್ಪ ಮುಂತಾದವರು ಬೃಹತ್

**35ನೇ ಪುಟಕ್ಕೆ.....**

# ವಚನ ಸಾಹಿತ್ಯ ಮತ್ತು ಜೀವನ ಮೌಲ್ಯ

ವಚನ ಸಾಹಿತ್ಯ ಎಂಬುದು ಎಂಬುದು ಕೊನೆಯಿಲ್ಲದ ತೀರ, ಅದರಲ್ಲಿ ಮಾನವ ನೆಮ್ಮದಿಯಿಂದ ಜೀವನಕ್ಕೆ ಅಗತ್ಯವಿರುವ ಸಂಸ್ಕಾರ ಸಂಸ್ಕೃತಿ ಅಡಗಿದೆ, ಅದನ್ನು ಅರಿತು ಮುನ್ನಡೆದರೆ ಮಾನವ ನಿಜ ಶರಣನಾಗುತ್ತಾನೆ. ವಚನಗಳಲ್ಲಿ ಜೀವನ ಮೌಲ್ಯ ಅಡಗಿದೆ ಮತ್ತು ಅದರಿಂದ ತಿಳಿಯುವುದು ಸಾಕಷ್ಟು ವಿಷಯವಿದೆ, ಜೀವನ ಮೌಲ್ಯ ಮನಸ್ಸಿನಿಂದ ಮನಸ್ಸಿನ ಸಂಪರ್ಕದ ಅನುಭವ ಅದುವೇ ವಚನದ ಜೀವಾಳ. ಮನುಷ್ಯನಿಗೆ ಜ್ಞಾನಕಿಂತ ದೊಡ್ಡ ಸಂಪತ್ತು ಇನ್ನೊಂದಿಲ್ಲ ಎಂದು ತೋರಿಸಿಕೊಟ್ಟ ವಚನ ಸಾಹಿತ್ಯದಿಂದ ಸಮಾಜ ಕಲಿಯುವುದು ಸಾಕಷ್ಟಿದೆ. ಸಂಸ್ಕಾರದಿಂದ ಬದುಕು ಸಾರ್ಥಕವಾಗುತ್ತದೆ, ಆಧುನಿಕ ಭರಾಟೆಯಲ್ಲಿ ಕಳೆದು ಹೋಗುತ್ತಿರುವ ಇಂದಿನ ಪೀಳಿಗೆಯವರಿಗೆ ಸಂಸ್ಕಾರ ಅಗತ್ಯವಿದೆ. ಈ ನಿಟ್ಟಿನಲ್ಲಿ ತಾಯಂದಿರ ಪಾತ್ರ ಮಹತ್ವವಾಗಿದೆ.

ಜೀವನದ ನಿಜ ಸತ್ಯ ಅಂಕುಡೊಂಕುಗಳನ್ನು ತಿದ್ದಿ ಹೇಳುವುದು ಹಿರಿಯರ ಕೆಲಸ. ಅದನ್ನು ಪಾಲಿಸುವುದು ಆಚರಣೆಗೆ ತರುವುದು ಕಿರಿಯರ ಜವಾಬ್ದಾರಿ. ನಮ್ಮ ದೇಶದ ಬಹುತೇಕ ಭಾಷೆಗಳು ಉದಯಿಸಿದ್ದು ಸಂಸ್ಕೃತ ಭಾಷೆಯಿಂದ ಬಸವೇಶ್ವರ ತಮ್ಮ ವಚನ ಸಾಹಿತ್ಯದಲ್ಲಿ ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯನ್ನು ಕೊಟ್ಟು ಕನ್ನಡ ಭಾಷೆಯ ಹಿರಿಮೆ ಗರಿಮೆ ಹೆಚ್ಚಿಸಿದರು. ಶರಣರು ತಮ್ಮ ವಚನಗಳ ಮೂಲಕ ಸರಳವಾಗಿ ಜೀವನ ಮೌಲ್ಯ ವೈಚಾರಿಕ ಬದುಕು ಮೌಢ್ಯಗಳ ಧಿಕ್ಕಾರವನ್ನ ಹರಡಿದರು.

**"ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು**
**ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು**
**ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ**
**ತಮ್ಮೊಳಗಿರ್ದ ಮಹಾ ಘನವರಿಯರು**
**ಚೆನ್ನಮಲ್ಲಿಕಾರ್ಜುನ"**

ಎಂತಹ ವಚನ ಶಿವಶರಣೆ ಅಕ್ಕನದು. ನಮ್ಮೊಳಗಿರುವ ಮಹಾ ಜ್ಞಾನದ ಚಿಂತನೆಯನ್ನು ಅರಿಯಲಾರದ ನಾವು ವ್ಯರ್ಥವಾಗಿ ಕಾಲವನ್ನು ಕಳೆದು ನಮ್ಮ ಜೀವಿತಾವಧಿಯನ್ನು ಮುಗಿಸಿಬಿಡುತ್ತೇವೆ. ನಮ್ಮ ಜೀವನದ ಉದ್ದೇಶವನ್ನು ಅದರ ಸಾರ್ಥಕವನ್ನು ಅರಿತು ನಡೆದಾಗ ನಮ್ಮ ಬಾಳು ಬಂಗಾರವಾಗುತ್ತದೆ ಎಂದು ಅಕ್ಕಮಹಾದೇವಿ ತಿಳಿಸುತ್ತಾರೆ.



**ಸುರೇಶ ಈ ಕರಡೇರ**
ಸಹ ಶಿಕ್ಷಕರು ಹಾಗೂ ಗೌರವ ಕಾರ್ಯದರ್ಶಿ, ಕೆ.ಐ.ಪ್ರತಿಷ್ಠಾನ
ಸಾತೇನಹಳ್ಳಿ, ಹಿರೇಕೆರೂರು ತಾ॥.
ಮೊ : 9901990378

ವಚನ ಸಾಹಿತ್ಯ ಒಂದು ಅನನ್ಯ ಮತ್ತು ಪ್ರಬಲ ಸಾಹಿತ್ಯ ಪ್ರಕಾರವಾಗಿದ್ದು ಇದು 12 ಮತ್ತು 13ನೇ ಶತಮಾನಗಳಲ್ಲಿ ಶಿವಶರಣರು ಸಂತರು ಮತ್ತು ಶರಣೀಯರು ರಚಿಸಿದ ಕೃತಿಗಳಾಗಿವೆ. ಈ ಸಾಹಿತ್ಯವು ಆಧ್ಯಾತ್ಮಿಕತೆ ಸಮಾಜದ ಸುಧಾರಣೆ ಮತ್ತು ಅನುಭವ ಶ್ರದ್ಧೆಯ ಬಗೆಗಿನ ಆಳವಾದ ಚಿಂತನೆಗಳನ್ನು ಪ್ರತಿಬಿಂಬಿಸುತ್ತದೆ. ವಚನಗಳು ಆತ್ಮಶೋಧನೆ ಮತ್ತು ಆತ್ಮ ಸಾಕ್ಷಾತ್ಕಾರದ ಪರಿಕಲ್ಪನೆಗಳನ್ನು ಸ್ಪಷ್ಟಪಡಿಸುತ್ತವೆ. ಅವು ಆಂತರಿಕ ಪರಿಶುದ್ಧಿಗೆ ಮತ್ತು ದೈವಿಕ ಏಕತೆಗೆ ಮಹತ್ವ ನೀಡುತ್ತವೆ.

ಕಾಯಕ ಮತ್ತು ಭಕ್ತಿ ಮೂಲಕ ವ್ಯಕ್ತಿಯ ಆತ್ಮವನ್ನು ಶುದ್ಧಿಗೊಳಿಸುವ ಮತ್ತು ಜೀವನದ ಉದ್ದೇಶವನ್ನು ಹೊಂದಿಸುವ ಸಂದೇಶವನ್ನು ವಚನಗಳು ನೀಡುತ್ತವೆ. ಶರಣರು ಕಾಯಕವನ್ನು ಒಂದು ವಿಧವಾದ ಪೂಜೆಯಾಗಿ ಮತ್ತು ಆತ್ಮವನ್ನು ಪವಿತ್ರ ಗೊಳಿಸುವ ಸಾಧನವಾಗಿ ನೋಡಿದರು ಉದಾಹರಣೆ, ಬಸವಣ್ಣನವರ ಕಾಯಕವೇ ಕೈಲಾಸ ಕಾಯಕದೊಳಗಾನಂದಿಸಿಕೊಂಡು ಬೇರೆ ದೇವರ ಹುಡುಕಬೇಡಿರಿ ಎಂದು, ಬಸವಣ್ಣನವರ ಪ್ರಕಾರ ನಿಷ್ಠಾವಂತ ಕಾಯಕವು ಆತ್ಮ ಶುದ್ಧಿಗೆ ಹಾಗೂ ದೈವಿಕ ಅನುಭವಕ್ಕೆ ಮಾರ್ಗವಾಗಿದೆ.ಇದರಿಂದ ಅವರು ಕಾಯಕವನ್ನು ಅತ್ಯುನ್ನತ ಸಾಧನೆಯಾಗಿ ಪರಿಗಣಿಸಿದರು ಕಾಯಕದಲ್ಲಿ ಆನಂದಿಸಬೇಕೆಂದು ಹೇಳಿದರು.

ವಚನ ಸಾಹಿತ್ಯ ತನ್ನ ಸರಳ ಮತ್ತು ಸ್ಪಷ್ಟವಾದ ಭಾಷೆಯಿಂದ ಪ್ರಸಿದ್ಧವಾಗಿದೆ. ಇದರ ನೇರ ಮತ್ತು ಸರಳ ಶೈಲಿಯೂ ಸಾಮಾನ್ಯ ಜನರಿಗೂ ಸುಲಭವಾಗಿ ಅರ್ಥವಾಗ ಬಹುದು. ವಚನ ಸಾಹಿತ್ಯದಲ್ಲಿ ಆಧ್ಯಾತ್ಮಿಕ ಮತ್ತು ಸಾಹಿತ್ಯಿಕ ಹಾಗೂ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಹಲವಾರು ವಚನಗಳು ನಮಗೆ ದಾರಿದೀಪವಾಗುತ್ತವೆ.

**ಪತ್ರಿಕೆಗೆ ಚಂದಾದಾರಾಗಿ**

# ದಾಳಿಕೋರ ಇಟಗಿಖಾನ್‌ಗೆ ಗತಿಕಾಣಿಸಿದ ಕೆಂಚಿಕೊಪ್ಪದ ಹೆಣ್ಣು

ಹೊನ್ನಾಳಿ ಸೀಮೆಯನ್ನು ಬೆಳಗುತ್ತಿ ಅರಸರು ಆಳುತ್ತಿದ್ದು ಬೆಳಗುತ್ತಿ ಅರಸರು ವಿಜಯನಗರ ಸಾಮ್ರಾಜ್ಯದ ಸಾಮಂತರಾಜರಾಗಿ ಆಡಳಿತ ನಡೆಸುತ್ತಿದ್ದರು. ಹೊನ್ನಾಳಿ ಸೀಮೆ ಎಂದರೆ ಆಗಿನ ಕಾಲಕ್ಕೆ ಈಗಿನ ಹೊನ್ನಾಳಿಗಿಂತ ಸ್ವಲ್ಪ ಹೆಚ್ಚು ವಿಸ್ತಾರ ಹೊಂದಿತ್ತು. ಆ ಕಾಲಕ್ಕೆ ಹೊನ್ನಾಳಿ ಸೀಮೆ ಎಂಬುದು ಮಲೆನಾಡುಸೀಮೆ ಹಾಗೂ ಬಯಲಸೀಮೆಯ ದಿಡ್ಡಿ ಬಾಗಿಲಂತೆ ಇತ್ತು. ಮಲೆನಾಡು ಸೀಮೆ ಬೇರೆಯದೇ ಆದ ರಾಜರ ಆಡಳಿತಕ್ಕೆ ಒಳಪಟ್ಟಿದ್ದು. ಆ ರಾಜರ ಜೊತೆ ವಿಜಯನಗರದ ಅರಸರು ಉತ್ತಮ ಬಾಂಧವ್ಯ ಹೊಂದಿದ್ದು; ವಿಜಯನಗರದ ರಾಜರ ವ್ಯಾಪಾರ ವ್ಯವಹಾರವೆಲ್ಲ ಮಲೆನಾಡುಪ್ರದೇಶ ಹಾಗೂ ಹೊರದೇಶಗಳ ವ್ಯವಹಾರದ ಕೇಂದ್ರವಾಗಿತ್ತು ಈಗಿನ ನ್ಯಾಮತಿ ಸುತ್ತಲ ಪ್ರದೇಶ. ಸಮುದ್ರಯಾನದ ಅರಬ್ ದೇಶಗಳೊಂದಿಗಿನ ವ್ಯಾಪಾರ ಸಂಪರ್ಕವನ್ನು ಹೊಂದಿದ ಪ್ರದೇಶ.

ಇತಿಹಾಸ ಸಂಶೋಧಕರಾದ ಶಿವಮೊಗ್ಗದ ರಾಮಭಟ್ ಮತ್ತು ಸಿದ್ದಯ್ಯ (ರಾಂಪುರದ ಹತ್ತಿರದ ಊರವರು) ಇವರ ಪ್ರಕಾರ ಹೊನ್ನಾಳಿ ತಾಲ್ಲೂಕಿನ ಪ್ರತಿ ಊರಿನ ಬಗ್ಗೆ ಒಂದೊಂದು ವ್ಯಾಖ್ಯಾನ ನೀಡುತ್ತಿದ್ದರು. ಅವರ ಪ್ರಕಾರ ನ್ಯಾಮತಿ ಸುತ್ತಮುತ್ತಲ ಪ್ರದೇಶದಲ್ಲಿ ಭಾರಿ ವಿದೇಶಿ ವ್ಯಾಪಾರ ನಡೆಯುತ್ತಿತ್ತು. ಆ ವ್ಯಾಪಾರದಲ್ಲಿ ಅರಬ್ ದೇಶಗಳು ಪ್ರಮುಖವಾಗಿದ್ದವು. ಅರಬರು ಬಂದು ತಂಗುತ್ತಿದ್ದು ಹೆಚ್ಚಾಗಿ ಈಗಿನ ಅರಬಗಟ್ಟೆ ಪ್ರದೇಶದಲ್ಲಿ ಕುದುರೆ ವ್ಯಾಪಾರ ಮುಖ್ಯಕೇಂದ್ರ ಕುದುರೆಕೊಂಡವಾಗಿತ್ತು. ಯಾವುದೇ ವ್ಯವಹಾರ ನಡೆದರು ಅದಕ್ಕೆ ಸುಂಕ ಕಟ್ಟಲೇಬೇಕಿತ್ತು ಆ ಸ್ಥಳವೇ ಸುಂಕದಕಟ್ಟೆ ಎಂದೆಲ್ಲಾ ಪ್ರತಿಪಾದಿಸುತ್ತಿದ್ದರು. ಸಿದ್ದಯ್ಯನವರು ಹೊನ್ನಾಳಿಯಲ್ಲಿ ನಡೆದ ಪ್ರಥಮ ಸಾಹಿತ್ಯ ಸಮ್ಮೇಳನದಲ್ಲಿ ಈ ವಿಚಾರವಾಗಿ ರಾಮಭಟ್ ವಿಷಯ ಮಂಡಿಸಿದ್ದರು.

ಕನ್ನಡದ ಶ್ರೇಷ್ಠ ಕೃತಿ ಕವಿರಾಜ ಮಾರ್ಗದಲ್ಲಿ ನೆಲವತ್ತಿಯ ಅಡಿಕೆಯ ಬಗ್ಗೆ ಪ್ರಸ್ತಾಪವಾಗಿದೆ. ನೆಲವತ್ತಿ ಎಂಬುದು ನ್ಯಾಮತಿಯ ಪೂರ್ವದ ಹೆಸರು. ಶ್ರೇಷ್ಠ ಅಡಿಕೆ ಬೆಳೆಗೆ ಹೆಸರಾಗಿದ್ದ ನ್ಯಾಮತಿ ಪ್ರದೇಶ ವಿದೇಶಿ ವ್ಯಾಪಾರಿಗಳ ಪ್ರಭಾವಕ್ಕೆ ಒಳಗಾಗಿ ವಿದೇಶಿಗರು ನೀಡುವ ಹಣಕ್ಕೆ ಆಸೆಬಿದ್ದು ತಮ್ಮ ಮೂಲ ದುಡಿಮೆ ಬಿಟ್ಟು ವ್ಯಾಪಾರಿಗಳ ಹಿಂದೆಬಿದ್ದು ಹೊಲತೋಟಗಳು ಬೀಳುಬಿದ್ದು ಉತ್ತಮ ಅಡಿಕೆ ಬೆಳೆನಿಂತು ಹೋಯಿತು. ಬೀಳುಬಿದ್ದ ಈ ಪ್ರದೇಶ ಪುನಶ್ಚೇತನಗೊಳ್ಳಲು ವಿಜಯನಗರ ಸಾಮ್ರಾಜ್ಯ ಅಳಿದು, ಸುಲ್ತಾನರ ಆಡಳಿತಕ್ಕೆ ಬೇಸತ್ತ ಉತ್ತರ ಕರ್ನಾಟಕದ ಜನ ಇಲ್ಲಿಗೆ ವಲಸೆಬಂದು ನಿಂತಾಗಲೇ ಬರಡಾದ ಭೂಮಿ ಫಲ ಬಿಟ್ಟು ಕಂಗೊಳಿಸಿದ್ದು. ಸುಲ್ತಾನರ ಆಡಳಿತಕ್ಕೆ ಬೇಸತ್ತು ಉತ್ತರ ಕರ್ನಾಟಕದ ತಮ್ಮ ಊರುಬಿಟ್ಟು ಹೊನ್ನಾಳಿ ಸೀಮೆಗೆ ಬಂದು ಬದುಕು ಕಟ್ಟಿಕೊಂಡು ಬದುಕುತ್ತಿದ್ದ ಊರುಗಳ ಮೇಲೆ ಉತ್ತರದಿಂದ ಆಗಾಗ ಬರುತ್ತಿದ್ದ ದಾಳಿಕೋರರ ದಾಳಿ ನಡೆದೇ ಇರುತ್ತಿತ್ತು. ಈ ದಾಳಿಕೋರರು ಬಂದರೆಂದರೇ ಒಂದೊಂದು ಊರಿನ ಸಕಲ ಸಂಪತ್ತನ್ನೆಲ್ಲ ದೋಚಿಕೊಂಡು ಹೋಗುತ್ತಿದ್ದರು. ಇಡೀ ಹಳ್ಳಿಹಳ್ಳಿಗಳು ನಲುಗಿ ಹೋಗತ್ತಿದ್ದವು. ಸದಾ ಮುನ್ನೂರ ಅರವತ್ತು ದಿನವು ಬಾಯಾಗ ಅಕ್ಕಿಕಾಳು ಹಾಕ್ಕೊಂಡು ಬದುಕುವ ಸ್ಥಿತಿಗೆ ಬಂದಿದ್ದವು ಹೊನ್ನಾಳಿಸೀಮೆಯ ಊರುಗಳು.



ಡಿ.ಬಿ.ಶಂಕರಪ್ಪ
ಹುತ್ತೇಶ ಕೃಪ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ ಸವಳಂಗ ರಸ್ತೆ,
ಶಿವಮೊಗ್ಗ.
ಮೊ : 9448516344

ಒಬ್ಬ ದಾಳಿಕೋರ ಒಂದು ಹಳ್ಳಿಯ ಮೇಲೆ ದಾಳಿ ನಡೆಸಿದನಂದರೆ ಅವನು ರೈತರಬೆಳೆ, ಕೂಡಿಟ್ಟುಕೊಂಡ ನಗನಾಣ್ಯ ಕೊಂಡೊಯ್ಯದಿದ್ದರೆ ನೆಮ್ಮದಿಯಾಗಿರುತ್ತಿದ್ದರು. ಆದರೆ ಸಕಲಸಂಪತ್ತನ್ನು ಒಯ್ಯುವುದರ ಜೊತೆಗೆ ಆ ಊರಿನಲ್ಲಿನ ಸ್ಪುರದ್ರೂಪಿ, ಅತ್ಯಂತ ಚಂದದ ಹೆಣ್ಣನ್ನು ಆ ಊರಿನ ಗೌಡ ಆಯ್ಕೆಮಾಡಿ ಇಟ್ಟಿರಬೇಕಿತ್ತು. ದಾಳಿಕೋರ ಆ ಊರಿಗೆ ಬರುವ ಮುನ್ನ. ಹಾಗೆ ಅವನು ದೋಚಿದ ಎಲ್ಲಾ ಸಂಪತ್ತನ್ನು ಆ ಊರಿನ ಜನವೇ ತಮ್ಮ ಗಾಡಿಗಳ ಮೇಲೆ ಹೇರಿಕೊಂಡು ಹೊನ್ನಾಳಿ ಹೊಳೆ ದಾಟಿಸಿ ಸಾಗಿಸಬೇಕಿತ್ತು. ಅದಕ್ಕಾಗಿ ಆ ಊರಿನ ಕಟ್ಟಾಳುಗಳನ್ನು ಸಜ್ಜುಗೊಳಿಸಿಕೊಂಡಿರಬೇಕಿತ್ತು ಗೌಡ. ಈ ಸಂದರ್ಭದಲ್ಲಿ ಬಲತ್ಕಾರ ಬಲವಂತ ಹೊಡೆತ ಬಡಿತ ಎಲ್ಲವನ್ನೂ ಅನುಭವಿಸಬೇಕಿತ್ತು. ಈ ದಬ್ಬಾಳಿಕೆ, ದೌರ್ಜನ್ಯ ಸಹಿಸಲಾರದೆ ಆನೇಕ ಊರಿನ ಗಂಡಸರು ದಾಳಿಯ ಸುಳಿವು ಸಿಗುತ್ತಿದ್ದಂತೆ ತಮ್ಮ ಮನೆಬಿಟ್ಟು ಕಾಡುಸೇರಿ ಅಡಗಿಕೊಂಡಿರುತ್ತಿದ್ದರು

ಇಂತಹ ಅತಂತ್ರ ಬದುಕನ್ನು ಅನುಭವಿಸುತ್ತಾ ಹೊನ್ನಾಳಿ ಸೀಮೆಯ ಹಳ್ಳಿಗಳು ವರ್ಷಂಪ್ರತಿ ನಗ್ಗಿ ನಲುಗಿ ಹೋಗಿದ್ದವು. ಹಳ್ಳಿಯನ್ನು ಹೊಕ್ಕ ಧಾಳಿಕೋರ

ಆ ಊರಿನ ಚಂದದ ಹೆಣ್ಣಿನೊಂದಿಗೆ ತಿಂಗಳೊಪ್ಪತ್ತು ಸುಖಿಸಿ ಬಿಟ್ಟೋಗುತ್ತಿದ್ದ. ಬಿಟ್ಟೋದ ಹೆಣ್ಣಿಗೆ ಊರಗೌಡ ಮನೆ, ಅಲ್ಪ ಜಮೀನನ್ನು ಜೀವನಕ್ಕೆ ಮುಂಜೂರು ಮಾಡಿಸಿಕೊಡುವುದು ಜವಾಬ್ದಾರಿಯಾಗಿರುತ್ತಿತ್ತು. ಇಂತಹ ಸ್ಥಿತಿ ವರ್ಷಕ್ಕೊಮ್ಮೆ ಒಂದೆರಡು ಹಳ್ಳಿಗಳಿಗೆ ಬಂದೇ ಬರುತ್ತಿತ್ತು. ಈ ವರ್ಷ ಕೆಂಚಿಕೊಪ್ಪ ಗ್ರಾಮಕ್ಕೆ ದಾಳಿಕೋರ ಇಟಗಿಖಾನ್ ಆಗಮಿಸುವ ಸುದ್ದಿ ಬಂದಿದ್ದು. ಆ ದಾಳಿಕೋರನಿಗೆ ಸಕಲ ಸೌಲಭ್ಯ ಒದಗಿಸುವ ಹೊಣೆ ಊರ ಗೌಡನದಾಗಿತ್ತು.

ಅದಕ್ಕಾಗಿ ಊರಗೌಡ ಅತ್ಯುತ್ಸಾಹದಿಂದ ದಾಳಿಕೋರನಿಗಾಗಿ ದವಸ ಧಾನ್ಯ, ದನಕರ, ಗೋವುಗಳನ್ನು ಶ್ರದ್ದೆಯಿಂದ ಸಂಗ್ರಹಿಸಿಟ್ಟುಕೊಂಡು ದಾಳಿಕೋರನ ಇಟಗಿಖಾನ್ ಬರುವಿಗಾಗಿ ಸಕಲ ಸಿದ್ಧತೆ ಮಾಡಿಕೊಂಡು ಕಾಯುತ್ತಿದ್ದ. ಆದರೆ ಊರಿನ ಚಂದದ ಹೆಣ್ಣಾಗಿ ಯಾರನ್ನು ಆಯ್ಕೆ ಮಾಡಿರುವೆನೆಂದು ಯಾರಲ್ಲೂ ಬಾಯಿ ಬಿಟ್ಟಿರಲಿಲ್ಲ. ಆದಿನ ಬಂದೇ ಬಿಟ್ಟಿತು. ದಾಳಿಕೋರ ಇಟಗಿಖಾನ್ ಬಂದೇಬಿಟ್ಟ. ಊರ ಮುಂದೆ ಸಕಲಗೌರವಾಧರಗಳಿಂದ ಸ್ವಾಗತಿಸಿ ಬರಮಾಡಿಕೊಂಡ ಗೌಡ. ಸಂತುಷ್ಟಗೊಂಡ ದಾಳಿಕೋರ ಇಟಗಿಖಾನ್ ಸಂಜೆಗೆ ತನ್ನ ಬಿಡಾರಕ್ಕೆ ಬರುವ ಚಂದದ ಹೆಣ್ಣಿಗಾಗಿ ಬಡ ಬಡಿಸತೊಡಗಿದ. ಇದನ್ನು ಅರಿತ ಗೌಡ. ತಾನು ಮನದಲ್ಲಿ ಆಯ್ಕೆಮಾಡಿಟ್ಟುಕೊಂಡಿದ್ದ ಚಂದದ ಹೆಣ್ಣಿನ ಮನೆಯ ಮುಂದೆ ನಿಂತು ಆ ಹೆಣ್ಣಿಗೆ ದಾಳಿಕೋರನ ಇಂಗಿತ ಈಡೇರಿಸಲು ಆಹ್ವಾನಿಸಿದ. ನಮ್ಮ ಊರಿನ ದೊಡ್ಡಬೊಮ್ಮಪ್ಪಳ ಮನೆಯ ಹೆಣ್ಣೆ ಆ ಚಂದದ ಹೆಣ್ಣು ಕೆಂಚಾಂಬ. ಆಕೆಯ ಅವ್ವ ಬರ್ಮಕ್ಕ, ಅಪ್ಪ ದೊಡ್ಡ ನಿಂಗನಗೌಡ. ದಾಳಿಕೋರ ಬರುವನೆಂಬ ಸುದ್ದಿ ಕೇಳುತ್ತಿದ್ದಂತೆ ಊರುಬಿಟ್ಟಿದ್ದ. ಗೌಡ ಮನೆಗೆ ಬಂದಾಗ ಮನೆಯಲ್ಲಿದ್ದವರೆಂದರೆ ಅವ್ವಮಗಳಿಬ್ಬರೆ. ಕ್ಷಣ ಹೌಹಾರಿ ನಿಂತಿದ್ದರು. ಸುದ್ದಿ ತಿಳಿದು ನಮಗೆಂತಾ ಗತಿ ಬಂತಲ್ಲಾ ಎಂದು ದುಃಖಿತರಾಗಿ ಇಬ್ಬರು ತಬ್ಬಿಕೊಂಡು ಅಳುತ್ತಲೇ ಇದ್ದರು. ಇಬ್ಬರು ದೇವಿ ಮಾಯವ್ವನ ಮೇಲೆ ಭಾರಹಾಕಿ. ಆಗಲಿ ಆ ಸುಲ್ತಾನನಿಗೆ ಇಟಗಿಖಾನ್ ನಾನು ಬೇಕೆಂದರೆ ನಮ್ಮ ಮನೆಗೆ ಬರಲಿ. ನಾವು ಸಕಲ ಗೌರವಗಳಿಂದ ಅವನನ್ನು ಸ್ವಾಗತಿಸುತ್ತೇವೆ. ನೀವು ಹೋಗಿ ಸುಲ್ತಾನನಿಗೆ ಇಟಗಿಖಾನ್‌ಗೆ ಹೇಳಿ ನಾವು ಸಿದ್ದತೆ ಮಾಡಿಕೊಂಡು ಕಾಯುತ್ತಿರುತ್ತೇವೆ ಎಂದು ಗೌಡನ ಮೂಲಕ ಹೇಳಿಕಳಿಸಿದರು.

ಆ ಸುಲ್ತಾನ ಇಟಗಿಖಾನ್ ಬರುವಿಗೆ ಹೇಗೆ ಸಿದ್ಧರಾಗಬೇಕೆಂದು ಇಬ್ಬರು ಚಿಂತಿಸಿ. ಸಿದ್ದತೆ ಮಾಡಿಕೊಂಡರು. ಸಂಜೆ ಸುಲ್ತಾನ ಇಟಗಿಖಾನ್ ಮನೆಗೆ ಆಹ್ವಾನಿಸಿರುವ ಸುದ್ದಿಯಿಂದ ಸುಲ್ತಾನ ಇಟಗಿಖಾನ್ ತುಂಬಾ ಸಂತೋಷಗೊಂಡು ಅತಿ ಶೃಂಗಾರಗೊಂಡು ಸುಮಾರು ಮಧ್ಯರಾತ್ರಿಗೆ ದೊಡ್ಡಬೊಮ್ಮಪ್ಪಳ ಮನೆಮುಂದೆ ನಿಂತು ಮನೆಗೆ ಬರಲು ಹೇಳಿ, ಹೀಗೇಕೆ ಬಾಗಿಲು ಹಾಕಿಕೊಂಡಿದ್ದೀರಾ ಬಾಗಿಲು ತೆರೆಯಿರಿ ಎಂದು ದರ್ಪದಿಂದ ನುಡಿದ ನುಡಿ ಕೇಳಿಸಿಕೊಂಡ ಕೆಂಚಾಂಬ, ತಾಳಿ ಸರ್ದಾರ್ ನೀವು ಹೇಗೆ ನನ್ನನ್ನು ಕೂಡಲು ಶೃಂಗಾರಗೊಂಡು ಬಂದಿರುವಿರೋ ಹಾಗೆ ನಾನು ಶೃಂಗಾರಗೊಳ್ಳುವೆ ಎಂದು ಹೇಳುತ್ತಾ, ಸ್ವಲ್ಪ ಸಮಯ ಕಾಯಿಸಿ, ತಾಳ್ಮೆಗೆಡಿಸಿ ಕಾಮಾತುರನನ್ನಾಗಿಸಿ ಅನಂತರ ಬಾಗಿಲು ತೆಗೆದಾಗ, ಒಳಗೆ ಅಲಂಕಾರಗೊಂಡ ಚಂದದ ಹೆಣ್ಣುಕಂಡು ಮೈಮರೆತು ಹೊಸಲು ದಾಟಿ ಒಳಗೆ ಕಾಲಿಡುತ್ತಿದ್ದಂತೆ, ಕೆಂಚಾಂಬ ಸಲಾಮ್ ಮಾಡುವ ರೀತಿ ಬಗ್ಗಿ ನೆಲಕ್ಕೆ ಹಾಸಿದ್ದ ಚಾಪೆಯನ್ನು ಎಳೆಯುತ್ತಿದ್ದಂತೆ ಚಾಪೆ ಕೆಳಗೆ ರಾಗಿ ಹರಡಿದ್ದರು. ಇಟಗಿಖಾನ್ ಆಯತಪ್ಪಿ ಬೀಳತ್ತಿದ್ದಂತೆ, ಮರೆಯಲ್ಲಿ ನಿಂತಿದ್ದ ಭರ್ಮಕ್ಕ ಇಟಗಿಖಾನನ ಕತ್ತನ್ನು ತನ್ನ ಕೈಯಲ್ಲಿದ್ದ ಕುಡುಗೋಲಿನಿಂದ ಚಂಡಾಡಿಬಿಟ್ಟಳು. ರೋಷ ಉಕ್ಕಿಉಕ್ಕಿ ಬಂದಂತೆ ರಣಚಂಡಿಯಾಗಿ ಇಟಗಿಖಾನನ ಇಡೀ ಶರೀರವನ್ನು ಕೊಚ್ಚಿಕೊಚ್ಚಿ ಹಾಕುತ್ತಿದ್ದಳು. ಆಕೆ ಕೊಚ್ಚಿ ಕೊಚ್ಚಿದಂತೆ ರಕ್ತ ಪುಟಿಪುಟಿದು ಚಿಮ್ಮಿಚಿಮ್ಮಿ ಹರಿಯುತ್ತಿತ್ತು. ಹಿಂಭಾಗಲಲ್ಲಿದ್ದ ಓಣಿತುಂಬಿ ಕೊಲೆಯಾದ ಇಟಗಿಖಾನನ ಶವವನ್ನು ದ್ಯಾಸನ ಹೊಲದ ಬದುವಿನಲ್ಲಿ ಮುಸ್ಲಿಂ ಪದ್ಧತಿಯಂತೆ ಹೂಳಲಾಗಿದ್ದು, ಅವನ ಸಮಾಧಿ ಸುತ್ತಾ ಕಲ್ಲುಗಳನ್ನು ನೆಡಲಾಗಿತ್ತು. ತುಂಬಾ ವರ್ಷಗಳವರೆಗೆ ಆ ಸಮಾಧಿ ಹಾಗೇ ಇತ್ತು. ಇಡೀ ಊರ ಜನರನ್ನು ಅಲ್ಲೇ ಸಮಾಧಿ ಮಾಡುತ್ತಿದ್ದರು. ಇಟಗಿಖಾನನ ಸಮಾಧಿ ಊರವರ ಸಮಾಧಿಗಿಂತ ಸ್ವಲ್ಪ ಅಂತರದಲ್ಲಿ ಇತ್ತು. ಇಂತಹ ಇತಿಹಾಸ ಪ್ರಸಿದ್ದ ಸಮಾಧಿ ಜಾಗ 24 ಗುಂಟೆ ಇದ್ದು, ಈ ಜಾಗವನ್ನು ದೊಡ್ಡಬೊಮ್ಮಪ್ಪಳ ಕುಟುಂಬದ ಹಿರಿಯರು ಸಮಾಧಿಗಾಗೆ ಬಿಟ್ಟಿರುವ ಬರಹವು ಇರುತ್ತದೆ. ಇದೊಂದು ಸ್ಮಾರಕವಾಗಿರಲಿ ಎಂಬ ಸದುದ್ದೇಶದಿಂದ ಮತ್ತು ಕೆಂಚಾಂಬ, ಬರ್ಮಕ್ಕನವರ ಧೈರ್ಯ ಸಾಹಸಗಳಿಗೆ ಗೌರವ ದೊರೆಯುವಂತಾಗಲಿ.

ಹೊನ್ನಾಳಿ ಸೀಮೆಯ ಮೇಲೆ ಪ್ರತಿವರ್ಷವೂ ಒಂದೊಂದು ಊರಿನ ಮೇಲೆ ಧಾಳಿನಡೆಸುತ್ತಿದ್ದ ಇಟಗಿಖಾನನ್ನು ಸಂಹರಿಸಿದ ಪ್ರಯುಕ್ತ ದೊಡ್ಡಬೊಮ್ಮಪ್ಪಳ ಕುಟುಂಬಕ್ಕೆ ಊಂಬಳಿ ಜಮೀನು ಹಂಚುವಾಗ ಸರ್ಕಾರ ಎಲ್ಲರಿಗಿಂತ ಒಂದು ಪಾಲು ಹೆಚ್ಚಾಗಿ ಕೊಟ್ಟಿರುತ್ತದೆ.

# ಆರೋಗ್ಯಾಮೃತ 39

## ಜೀವಾಮೃತ

**ಹಿಂದಿನ ಸಂಚಿಕೆಯಿಂದ.....**

ಇನ್ನೂ ಗೌರವಿಸುವ ಪದ್ಧತಿ ಉಳಿದುಕೊಂಡು ಬಂದಿದೆ. ಜಂಗಮರು ಸ್ವಾಮಿಗಳು ಕಂಡೊಡನೆಯೇ ಅವರ ಪೂರ್ವಾಪರಗಳನ್ನು ವಿಚಾರಿಸದೆಯೇ ಪಾದಕ್ಕೆರಗುವ ಸಂಪ್ರದಾಯ ಬೆಳೆದು ಬಂದಿದೆ. ಏಕೆ? ಬ್ರಹ್ಮಚರ್ಯ ವ್ರತ ಬಹಳ ಕಠಿಣವಾದುದು. ಇವರು ಆ ಮಾರ್ಗದಲ್ಲಿ ನಡೆಯುತ್ತಿದ್ದಾರೆ ಎಂಬ ಕಾರಣಕ್ಕಲ್ಲವೇ? ಹೌದು ಒಬ್ಬ ಸಾಮಾನ್ಯ ಸಾಧುವೂ ಕೂಡ ಮನಸ್ಸು ಮಾಡಿದರೆ ಸಮಾಜದಲ್ಲಿ ಬಹಳಷ್ಟು ಶಾಂತಿ ಪ್ರೀತಿಗಳನ್ನು ಉಂಟುಮಾಡಬಹುದು.

ಈಗಿನ ಕಾಲದ ಬಹಳಷ್ಟು ಜನ ಬ್ರಹ್ಮಚಾರಿಗಳು ಕೇವಲ ಹೆಣ್ಣನ್ನು ಮಾತ್ರ ದೂರವಿರಿಸಿ ಕಣ್ಣು, ನಾಲಿಗೆಗಳನ್ನು ಯಾವುದೇ ನಿಯಮಗಳಿಗೆ ಒಳಪಡಿಸದೆ ಮುಕ್ತವಾಗಿ ಹರಿಯಬಿಟ್ಟಿದ್ದಾರೆ. ಯೋಗಾಭ್ಯಾಸ, ಕಠಿಣ ಪರಿಶ್ರಮಗಳನ್ನು ಗಾಳಿಗೆ ತೂರಿದ್ದಾರೆ. ಹೀಗಾದಾಗ ದೇಹದ ಊರ್ಜೆ ರೋಗದ ರೂಪದಲ್ಲಿ ಕಾಡದೇ ಇನ್ನೇನು ಮಾಡಬೇಕು? ಸರ್ವಜ್ಞ ಹೇಳುತ್ತಾರೆ 'ಕಚ್ಚೆ ಕೈ ಬಾಯಿಗಳು ಇಚ್ಛೆಯಲ್ಲಿ ಇದ್ದಿಹರೆ' ಆರೋಗ್ಯವನ್ನು ಬಯಸುವ ಯಾರೇ ಇರಲಿ ಈ ಮೂರನ್ನು ಅಂಕೆಯಲ್ಲಿಟ್ಟುಕೊಳ್ಳಲೇಬೇಕು.

ಇದರರ್ಥ ತಿನ್ನಲೇಬಾರದು, ಮದುವೆಯಾಗಲೇ ಬಾರದು, ಕೈಯಿಂದ ವ್ಯವಹಾರ ಮಾಡಲೇಬಾರದು ಎಂದರ್ಥವಲ್ಲ. ಇವುಗಳನ್ನು ವಿವೇಕದಿಂದ ಬಳಸಿದರೆ ಮನವು ಬಲಶಾಲಿಯಾಗಿ ಕೆಟ್ಟ ರುಚಿಗಳನ್ನು ತಿರಸ್ಕರಿಸುತ್ತದೆ. ಒಮ್ಮೆ ಆರೋಗ್ಯದ ಆತ್ಮಾನಂದದ ಸವಿ ನೋಡಿದ ಮನಸ್ಸು 'ಘನಮನ' ವಾಗುತ್ತದೆ. ಆಗ ಅದಕ್ಕೆ 'ನುಚ್ಚು ಮಜ್ಜಿಗೆಯು ಹಿತವಕ್ಕೊ' ಈ ಸಂದರ್ಭದಲ್ಲಿ ಒಂದು ಘಟನೆ ನೆನಪಾಗುತ್ತಿದೆ.

ಅರಸೀಕೆರೆ ಪಟ್ಟಣದಲ್ಲಿ ಪ್ರವಚನ ಕಾರ್ಯಕ್ರಮ ನಡೆಯುತ್ತಿದ್ದಾಗ ಆ ತಾಲ್ಲೂಕಿನ ಒಂದು ಗ್ರಾಮವಾದ ಮೇಟಿಕುರ್ಕೆಯ ವಿಶ್ವಣ್ಣ ಎಂಬುವವರ ಮನೆಗೆ ಪೂಜೆಗೆ ಹೋಗಿದ್ದೆವು. ಅವರ ಮನೆಯಲ್ಲಿ ಅವರ ತಂದೆ ಪುಟ್ಟಪ್ಪಜ್ಜ ಎಂಬುವವರಿದ್ದರು. ಅವರಿಗೆ 74 ವರ್ಷ. ಅವರ ಜೊತೆ ಮಾತನಾಡುತ್ತಿರುವಾಗ ಅವರ ಕಣ್ಣು, ಕಿವಿ, ಧ್ವನಿ ಎಲ್ಲವೂ ಸ್ಪಷ್ಟವಾಗಿದ್ದುದ್ದು ಕಂಡುಬಂದಿತು. ಜೊತೆಗೆ ಅವರ ಮಾತಿನಲ್ಲಿ ಧೃಡತೆ, ಸ್ಪಷ್ಟತೆಗಳು ಎದ್ದು ತೋರುತ್ತಿದ್ದವು. ಆಧುನಿಕ ನಾಗರೀಕನ ಪರಮಮಿತ್ರರಾದ ಬಿಪಿ, ಡಯಾಬಿಟಸ್, ಹೃದಯರೋಗ ಅದರಿಂದ ಎಷ್ಟೋ ಗಾವುದ ದೂರದಲ್ಲಿದ್ದವು. ಮಾತಿನ ಮಧ್ಯೆ ಅವರು ತಮ್ಮ ಒಂದು ಒಳ್ಳೆಯ ಅಭ್ಯಾಸವನ್ನು ಕುರಿತು ಹೇಳಿದರು; 'ಮನೆಯಲ್ಲಿ ಹಬ್ಬದ ದಿನ ಹೋಳಿಗೆಯನ್ನೇ ಮಾಡುತ್ತಿರಲಿ ನಾನು ಹೋಗಿ ಅಮ್ಮಯ್ಯ ನನಗೊಂದು ಮುದ್ದೆ ಮಾಡಿಬಿಡು' ಎಂದು ಮುದ್ದೆ ಮಾಡಿಸಿಕೊಂಡೇ ಊಟ ಮಾಡುತ್ತೇನೆ ಬುದ್ಧಿ' ಇದೇ ನನ್ನ ಆರೋಗ್ಯದ ಗುಟ್ಟು ಎಂದು ಹೇಳಿದರು.

ಅವರೊಬ್ಬರು ಸದ್ಗೃಹಸ್ಥರಾಗಿ ಕಾಯಕ ಜೀವಿಗಳಾಗಿ ಸದಾಚಾರದ ವಿಚಾರಮುಕ್ತ ಬದುಕನ್ನು ಬದುಕಿ ಆರೋಗ್ಯವನ್ನು ಕಾಪಾಡಿಕೊಂಡಿರುವುದರಿಂದ ಈ ಮುದಿತನದಲ್ಲೂ ಮುದ್ದೆಯೇ ಅವರಿಗೆ ಪರಮಾಮೃತವಾಗಿ ತೋರುತ್ತದೆ. ಎಷ್ಟೋ ಜನ ಭಾಷಣಕಾರರು ಕೆಲವು ವಿದ್ವಾಂಸರುಗಳು ಅಡಿಗೆಯಲ್ಲಿ ಸಿಹಿತಿನಿಸು ಇರದಿದ್ದರೆ ಸಂಘಟಕರ ಅಚಾತುರ್ಯದಿಂದ ಸಿಹಿತಿನಿಸುಗಳು ತಪ್ಪಿಹೋದರೆ ಸಿಟ್ಟಿನಿಂದ ಕುದಿಯುವುದನ್ನು ಕಾಣಬಹುದು. ವ್ಯತ್ಯಾಸ ಗೊತ್ತಾಯಿತಲ್ಲವೇ? ಅನೇಕ ಮಂದಿ ಭಾಷಣಕಾರರು ಕೇವಲ ಭಾಷಣ ಮಾಡುತ್ತಾರಷ್ಟೆ ತಮ್ಮ ವಿಕಾರಗಳನ್ನು ಕಡಿಮೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಯೋಚಿಸುವುದೇ ಇಲ್ಲ.



**ಶ್ರೀ ಶ್ರೀ ಬಸವಾನಂದಸ್ವಾಮಿಗಳವರು**
ಗುರುಬಸವ ಮಹಾಮನೆ,
ಮನಗುಂಡಿ, ಧಾರವಾಡ

**ನುಚ್ಚು ಮಜ್ಜಿಗೆಯು ಹಿತವಕ್ಕು**

ಉತ್ತರ ಕರ್ನಾಟಕದ ಅತ್ಯಂತ ಸ್ವಾದಪೂರ್ಣ ಆರೋಗ್ಯ

ದಾಯಕ ಆಹಾರವೆಂದರೆ ಜೋಳದ ನುಚ್ಚು ಮತ್ತು ಮಜ್ಜಿಗೆ. ವಿಶೇಷವಾಗಿ ಬಿಜಾಪುರ ಜಿಲ್ಲೆಯಲ್ಲಿ ಹುಳಿ ನುಚ್ಚು ಎಂದು ಕರೆಯಲ್ಪಡುವ ಅಡಿಗೆಯು ಅಲ್ಲಿನ ರೈತರಿಗೆ ಅಮೃತ ಸಮಾನವಾಗಿ ತೋರುತ್ತದೆ. ಜೋಳದ ನುಚ್ಚನ್ನು ಮಜ್ಜಿಗೆಯಲ್ಲಿ ನೆನೆಯಲು ಹಾಕಿ ರಾತ್ರಿಯೆಲ್ಲಾ ನೆನೆಯಲು ಬಿಟ್ಟು ಬೆಳಿಗ್ಗೆ ಅದನ್ನು ಕುದಿಸಿ ಇನ್ನಷ್ಟು ಮಜ್ಜಿಗೆ ಬೆರೆಸಿಕೊಂಡು ಈರುಳ್ಳಿ, ಬೆಳ್ಳುಳ್ಳಿಗಳೊಂದಿಗೆ ತಿನ್ನುತ್ತಿದ್ದರೆ ರೈತನ ಪಾಲಿಗೆ ಅದರ ಮುಂದೆ ದೇವಲೋಕದ ಅಮೃತವು ಬೇಡವೆನಿಸುತ್ತದೆ. ಇಂತಹ ಆರೋಗ್ಯಪೂರ್ಣ ಆಹಾರ ತೆಗೆದುಕೊಂಡು ಬೆವರು ಸುರಿಸಿ ದುಡಿದರೆ ಆಯುಷ್ಯ ಹೆಚ್ಚಾಗದೆಯೇ ಇರುತ್ತದೆಯೇ?

ಈ ಸಂದರ್ಭದಲ್ಲಿ ನಿಮಗೆ ಬೇಸರವಾಗುವುದಿಲ್ಲ ಎಂದರೆ ನಾನು ಬಾಲ್ಯದಲ್ಲಿ ಪಠ್ಯಪುಸ್ತಕದಲ್ಲಿ ಓದಿದ ಒಂದು ಸರ್ವಜ್ಞನ ವಚನವನ್ನು ನೆನಪಿಸಿಕೊಳ್ಳುತ್ತೇನೆ.

**ಕಚ್ಚೆ ಕೈ ಬಾಯಿಗಳು ಇಚ್ಚೆಯಲಿ ಇದ್ದಿಹರೆ**
**ಅಚ್ಚುತನಪ್ಪ ಅಜನಪ್ಪ। ಲೋಕದೊಳ್**
**ನಿಶ್ಚಿಂತನಪ್ಪ ಸರ್ವಜ್ಞ**

ಆರೋಗ್ಯವನ್ನು ಹೊಂದಲು ನಿಶ್ಚಿಂತತೆ ಅಳವಡುವುದು ಬಹಳ ಅಗತ್ಯವೆಂಬುದನ್ನು ಈಗಾಗಲೇ ನೋಡಿದ್ದೀರಿ.

**ನಯನೇಂದ್ರಿಯ ವಿಷಯದಿಂದೆ ಪತಂಗ ಕೆಡುವುದು ದೀಪದ ಜ್ವಾಲೆಯಲಿ**

ನಯನೇಂದ್ರಿಯ ಎಂದರೆ ಕಣ್ಣು. ಈ ಇಂದ್ರಿಯದ ವಿಕಾರಕ್ಕೊಳಗಾಗಿ ಪತಂಗಗಳೂ ಸೇರಿದಂತೆ ಅನೇಕ ಹುಳುಗಳು ದೀಪದ ಜ್ವಾಲೆಯಲ್ಲಿ ಬಿದ್ದು ಸಾಯುವುದನ್ನು ನೋಡಿದ್ದೀರಿ. ಇಲ್ಲಿ ಒಂದು ತಮಾಷೆ ಹೇಳುತ್ತೇನೆ; ನಗುತ್ತೀರ ತಾನೇ? ಈಗ ನಾನು ಎರಡೂ ಕೈ ಬಳಸಿ ಬ್ರೈಲ್ ಲಿಪಿಯನ್ನು ಬರೆಯುತ್ತಿದ್ದೇನೆ. ಸೊಳ್ಳೆಗಳು ಕಚ್ಚಿ ನನ್ನ ರಕ್ತವನ್ನು ತಮ್ಮ ಆಹಾರವನ್ನಾಗಿ ಮಾಡಿಕೊಂಡು ನಲಿಯುತ್ತವೆ. ಎರಡೂ ಕೈ ಕೆಲಸದಲ್ಲಿ ನಿರತವಾಗಿರುವುದರಿಂದ ಸೊಳ್ಳೆಗಳನ್ನು ಹೊಡೆದುಕೊಳ್ಳಲು ಆಗುತ್ತಿಲ್ಲ. ಮೈ ಅಲುಗಾಡಿಸಿ ಸೊಳ್ಳೆಗಳನ್ನು ಓಡಿಸಲು ಪ್ರಯತ್ನಿಸುತ್ತಿದ್ದೇನೆ. ಮನಸ್ಸಿನಲ್ಲಿ ಒಂದು ಆಲೋಚನೆ ಬರುತ್ತಿದೆ. ನಾನೇನಾದರೂ ಬ್ರಹ್ಮನಾಗಿ ಸೃಷ್ಟಿಸುವ ಅಧಿಕಾರ ಇದ್ದಿದ್ದರೆ ನೂರಾರು ಹುಳುಗಳು ದೀಪದ ಜ್ವಾಲೆಯಲ್ಲಿ ಬಿದ್ದು ಸಾಯುವಂತೆ ಈ ಸೊಳ್ಳೆಗಳ ಕಣ್ಣನ್ನು ಹಾಗೇ ನಿರ್ಮಾಣ ಮಾಡಿಬಿಡುತ್ತಿದ್ದೆ. ಬೇರೆ ಹುಳುಗಳಂತೆ ಈ ಸೊಳ್ಳೆಗಳು ಸಾಯುತ್ತಿದ್ದವು. ಡಿಡಿಟಿ ಉಳಿಯುತ್ತಿತ್ತು. ಮಲೇರಿಯಾ ಹರಡುತ್ತಿರಲಿಲ್ಲಾ. ಎಷ್ಟು ಚೆನ್ನಾಗಿರುತ್ತಿತ್ತು. ಅಲ್ವೇ? ಆದರೆ ಈಗ ಹಾಗಾಗುವುದಿಲ್ಲ. ಬೆಂಕಿ ಹಾಕಿದ ಕೂಡಲೇ ಹೊರಗೆ ಹೋಗುತ್ತವೆ. ಹೊಗೆ ಕಡಿಮೆಯಾದ ತಕ್ಷಣ ಮತ್ತೆ ಒಳಗೆ ಹಾಜರಾಗುತ್ತವೆ. ಆ ದೇವರು ಸೊಳ್ಳೆಗಳನ್ನು ಬೆಂಕಿಯಲ್ಲಿ ಬಿದ್ದು ನಾಶವಾಗುವಂತೆ ಸೃಷ್ಟಿಸಬಾರದೇ? ಎಂದು ಶಪಿಸುತ್ತಿದ್ದೇನೆ. ಸೊಳ್ಳೆಗಳು ಹಾಗಾಗುವುದಿಲ್ಲ. ಬದಲಾಗಿ ಮನುಷ್ಯನ ನಯನೇಂದ್ರಿಯಕ್ಕೆ ವಿಪರೀತ ವಿಕಾರವನ್ನಿಟ್ಟಿದೆ ಪ್ರಕೃತಿ. ನಗೆಮಾರಿ ತಂದೆ ಎಂಬ ಶರಣರು ಪರಮಾತ್ಮನನ್ನು ಅರಿಯುವ ಉಪಾಯವನ್ನು ಹೇಳುತ್ತಾ ತಮ್ಮ ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ.

**ಕಂಗಳ ಮುಂದಣ ಕಾಮನ ಕೊಂದು**
**ಮನದ ಮುಂದಣ ಆಸೆಯ ತಿಂದು**
**ಆತನನರಿ ಆತುರವೈರಿ ಮಾರೇಶ್ವರನ**

ಕಾಮನ ವಾಸಸ್ಥಾನ ಕಣ್ಣು ಎಂಬುದು ಮಾರಿತಂದೆಗಳ ಅಬಿಪ್ರಾಯ. ಒಂದು ದೃಷ್ಟಿಯಿಂದ ಅದು ಸತ್ಯವೇ. ಕಣ್ಣು ನೋಡುತ್ತದೆ, ಮನ ಬಯಸುತ್ತದೆ. ಪ್ರೇಮಿಗಳ ಮಾತು ಶುರುವಾಗುವುದು ಕಣ್ಣಿನಿಂದಲೇ ಎಂಬುದು ನಿಮಗೆ ಗೊತ್ತಿರುವ ವಿಷಯವೇ ಆಗಿದೆ. ಇಲ್ಲಿ ನೀವು ಇನ್ನೊಂದು ಸಂದೇಹ ಎತ್ತಬಹುದು. ಹಾಗಾದರೆ ಕಣ್ಣೇ ಇಲ್ಲದವರಿಗೆ ಕಾಮವಿಕಾರವೇ ಇಲ್ಲವೇ? ಕೆಲವರು ಹಾಗೆ ಭಾವಿಸಿರುವುದೂ ಉಂಟು. ಕಣ್ಣು, ಕಾಮನ ವಾಸಸ್ಥಾನ ಎನ್ನುವುದು ಎಷ್ಟು ಸತ್ಯವೋ? ಅಷ್ಟೇ ಸತ್ಯ ಕಾಮ ಮನಸಿಜ ಎಂಬುದು. ಕಣ್ಣಿಲ್ಲದವರಿಗೂ ಮನಸ್ಸು ಇದ್ದೇ ಇರುತ್ತದೆ. ಕನಕದಾಸರು ಹೇಳಿರುವಂತೆ 'ಅನ್ನದಿಂದ ಬಂದ ಕಾಮ'. ಆದ್ದರಿಂದ ಅನ್ನ ಸೇವಿಸುವವರಿಗೆಲ್ಲರಿಗೂ ಕಾಮವಿಕಾರ ಇದ್ದೇ ಇರುತ್ತದೆ. ಪ್ರಮಾಣದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಇರಬಹುದು ಅಷ್ಟೆ.

ಈ ಮಾನವರೆಂಬ ಪತಂಗಗಳು ಟಿ.ವಿ.ಯೆಂಬ ಬೆಂಕಿಯಲ್ಲಿ ಬಿದ್ದು ತಮ್ಮ ಸ್ವಯಂಶಕ್ತಿಯನ್ನು ಕಳೆದುಕೊಂಡು ನಿರ್ವೀರ್ಯರಾಗಿ ಬದುಕಿರುವುದನ್ನು ಕಾಣುತ್ತಿದ್ದೇವೆ. ಇಂಥಹ ವಿಕಾರಗಳಿಂದ ಕಣ್ಣನ್ನು ಮುಕ್ತಮಾಡಿ ಈ ದೃಷ್ಟಿಯನ್ನು ಇಷ್ಟಲಿಂಗದ ಕಡೆಗೆ ತಿರುಗಿಸಿದರೆ ಅಥವಾ ಪ್ರಕೃತಿ ದೃಶ್ಯಗಳಾದ ಸೂರ್ಯೋದಯ, ಬೆಳದಿಂಗಳು ನಕ್ಷತ್ರಗಳ ಮೇಲೆ ಕೇಂದ್ರೀಕರಿಸಿದರೆ ಕಣ್ಣು ಮಂಗಳಮಯವಾದ ದೃಶ್ಯಗಳನ್ನು ತುಂಬಿಕೊಂಡು 'ಶಿವಲಿಂಗ'ವಾಗುತ್ತದೆ.

**ಮುಂದುವರೆಯುವುದು........**

# ಆರೋಗ್ಯಕ್ಕಾಗಿ ಆಯುರ್ವೇದ

**ಸಂಚಿಕೆ – 1**

**ಲೈಫು ಸ್ಟೈಲಾಗಿರಬೇಕೇ ? ಲೈಫ್ ಸ್ಟೈಲ್ ಸರಿಪಡಿಸಿಕೊಳ್ಳಿ**

ಲೈಫ್ ಸ್ಟೈಲ್, ಜೀವನ ಶೈಲಿ, ಲೈಫ್ ಸ್ಟೈಲ್ ಡಿಸಾರ್ಡರ್, ಬದಲಾದ ಜೀವನ ಶೈಲಿ, ಇಂತಹ ಮಾತುಗಳು ಎಷ್ಟರಮಟ್ಟಿಗೆ ಪರಿಚಿತ ಎಂದರೆ ಲೈಫ್ ಇರುವ ಎಲ್ಲರೂ ಇದರ ಬಗ್ಗೆ ಪುಂಖಾನುಪುಂಖವಾಗಿ ಉಪದೇಶ ನೀಡುವಂತಾಗಿದೆ. ಕಾಲ ಸರಿದಂತೆ ಜಗತ್ತಿನ ಜೀವಿಗಳ ಜೀವನ ಶೈಲಿ ಆಧುನಿಕವಾಗುತ್ತಾ ಬಂದಿದೆ. ಈ ಬದಲಾವಣೆ ನಮ್ಮ ವೈಯಕ್ತಿಕ ಮತ್ತು ಸಮಾಜದ ಆರೋಗ್ಯಕ್ಕೆ ಪೂರಕವಾಗಿದ್ದರೆ ಮಾತ್ರ ಹಳೆ ಬೇರು ಹೊಸ ಚಿಗುರಿನ ಮರದಂತೆ ಸೊಗಸಾಗಿರುವುದು ಇಲ್ಲದಿದ್ದರೆ ಸೊರಗಿದ ಮರದಂತಾಗುವುದು.

ಬ್ಯುಸಿ ಮತ್ತು ಬಿಸಿ ಜನಜೀವನದಲ್ಲಿ ಸುಖಲೋಲುಪತೆಗಾಗಿ ಸ್ವಹಿತಕ್ಕೆ ಪೂರಕವಾದ ಬೇಕು ಬೇಡಗಳನ್ನು ಕಡೆಗಣಿಸುತ್ತಿದ್ದಾರೆ ಬಹುತೇಕರು. ನಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ಯಾವುದೇ ಹಂತದಲ್ಲೂ ಸ್ವಾಸ್ಥ್ಯ ರಕ್ಷಣೆಯನ್ನು ಮಾಡಿಕೊಳ್ಳುವ ವಿಚಾರಗಳೇ ಬರುವುದಿಲ್ಲ. ಇದ್ದರೂ ಆಧಾರಸಹಿತವಾಗಿಲ್ಲ. ಹೀಗಾಗಿ ವಿದ್ಯಾವಂತರಾದರೂ ಆರೋಗ್ಯ ವಿಷಯಗಳ ಬಗ್ಗೆ ಅಜ್ಞಾನಿಗಳಾಗಿದ್ದು ಆಚರಿಸುವಲ್ಲಿ ದೋಷಗಳುಂಟಾಗಿ ಸ್ವಾಸ್ಥ್ಯ ರಕ್ಷಣೆಯನ್ನು ಮಾಡಿಕೊಳ್ಳಲು ವಿಫಲರಾಗುತ್ತಿದ್ದಾರೆ. ಇಂತಹ ಕಾಲಘಟ್ಟದಲ್ಲಿ ಎಲ್ಲವೂ ಆಧುನಿಕಗೊಳ್ಳುತ್ತಿರುವಾಗ ಎಲ್ಲ ಐಹಿಕ ಸುಖಗಳನ್ನು ಅನುಭವಿಸುತ್ತಾ ಅದರಿಂದ ಹೊರತಾಗಿ ಇರಲು ಸಾಧ್ಯವಿಲ್ಲದಿರಲು, ಪ್ರಸ್ತುತ ಆಚರಣೆಗಳಲ್ಲಿ ಕಂಡುಬರುವ ಶಾಸ್ತ್ರ/ಸಿದ್ಧಾಂತಗಳಿಗೆ ತಕ್ಕದ್ದಲ್ಲವಾಗಿದ್ದನ್ನು ಸರಿಪಡಿಸಿ ಅದು ಆರೋಗ್ಯಕ್ಕೆ ಪೂರಕವಾಗಿರುವಂತೆ ಅನುವು ಮಾಡಿಕೊಡಲು ಈ ಲೇಖನ ಮಾಲೆ.



**ಡಾ. ಶ್ರೀಪ್ರಸಾದ್ ಎಚ್.ಎಸ್.**

ಬಿಎಎಂಎಸ್ (ಆಯುರ್ವೇದ), ಬಿಎಎಂಎಸ್ (ಇಂಟಿಗ್ರೇಟೆಡ್)

ಶ್ರೀಪ್ರಸಾದ್ ಆಯುರ್ವೇದ # 9, ಮನುವನ, ವಿಜಯನಗರ. ಬೆಂಗಳೂರು 560040

ಸ್ಥಿರ ದೂರವಾಣಿ : 080 23301090

ವಾಸ್ತವಕ್ಕೆ ಬರುವುದಾದರೆ ಕಾಲ ಸರಿದಂತೆ ಜಗತ್ತು ಚಿಕ್ಕದಾಗ ತೊಡಗಿದೆ, ಎಲ್ಲವೂ ಹೆಚ್ಚು ವೇಗವಾಗಿ ಸಾಗಿದೆ. ಸನ್ನಿವೇಶಗಳು ತಕ್ಷಣವೇ ಜರುಗುತ್ತಿದೆ, ಅನಿರೀಕ್ಷಿತ ಅನಪೇಕ್ಷಿತ ಘಟನೆಗಳು ಘಟಿಸುತ್ತಿವೆ. ದೇಶ–ಭಾಷೆ, ಆಹಾರ–ವಿಹಾರ, ಆಚಾರ–ವಿಚಾರ, ಸಂಸ್ಕೃತಿಗಳು ಬೆರಕೆಗೊಂಡು ಮಿಶ್ರ ಪದ್ಧತಿಯಾಗತೊಡಗಿದೆ. ನಮಗಿಷ್ಟವಿದೆಯೋ ಇಲ್ಲವೋ ಅವನ್ನು ಒಪ್ಪಿಕೊಳ್ಳಬೇಕಾದಂತಹ ಅನಿವಾರ್ಯ ಪರಿಸ್ಥಿತಿ ಬಂದೊದಗುತ್ತಿದೆ.

**"ಸ್ವಸ್ಥಸ್ಯ ಸ್ವಾಸ್ಥ್ಯ ರಕ್ಷಣಮ್ ಆತುರಸ್ಯ ರೋಗನುತ್"** ಎಂಬ ಸೂತ್ರದಲ್ಲಿನ ಆರೋಗ್ಯವಂತರು ತಮ್ಮ ಆರೋಗ್ಯವನ್ನು ಈ ಕಾಲಘಟ್ಟದಲ್ಲಿ ಹೇಗೆ ಕಾಪಾಡಿಕೊಳ್ಳುವುದು ಎನ್ನುವುದರ ಬಗ್ಗೆ ಚಿಂತನೆ ಮಾಡೋಣ.ತಮ್ಮೊಂದಿಗೆ ಹಂಚಿಕೊಳ್ಳುವ ವಿಚಾರಗಳು ಶಾಸ್ತ್ರಾಧಾರಿತವೂ ಮತ್ತು ಅನುಭೂತವೂ ಆಗಿರುತ್ತದೆ.

**ನಿದ್ದೆಯಿಂದ ಏಳುವುದು / ಪ್ರಾತರುತ್ಥಾನ**

ಬ್ರಾಹ್ಮೀ ಮುಹೂರ್ತೇ ಉತ್ತಿಷ್ಠೇತ್, ಸರ್ವರಿಗೂ ವಿದಿತವಾದ ವಿಷಯ, ಸೂರ್ಯೋದಯಕ್ಕೆ ಮುನ್ನ ನಿದ್ದೆಯಿಂದ ಏಳಬೇಕು. ಸೂರ್ಯನನ್ನು ನಾವುಗಳು ಸ್ವಾಗತಿಸಬೇಕೇ ವಿನಃ ಸೂರ್ಯದೇವರು ನಮ್ಮನ್ನು ಸ್ವಾಗತಿಸ ಬಾರದು ಎಂದು. ರಾತ್ರಿ ಪಾಳಿಯಲ್ಲಿ ದುಡಿಯುವುದು ಇತ್ತೀಚಿನ ದಶಕಗಳಲ್ಲಿ ಸರ್ವೇಸಾಮಾನ್ಯವಾಗಿದೆ.

ಜೀವನೋಪಾಯಕ್ಕಾಗಿ ದುಡಿಯುವ ಅನಿವಾರ್ಯತೆ ಬಹಳಷ್ಟು ಜನರಿಗೆ ಇಂದಿನ ಕಾಲದಲ್ಲಿದೆ. ಪರಿಸ್ಥಿತಿ ಹೀಗಿರುವಾಗ ಅಂತಹ ರಾತ್ರಿ ಪಾಳಿ ಕೆಲಸಗಾರರನ್ನು ಕೆಲಸ ಬಿಟ್ಟು ಬಿಡು ಎಂದು ಹೇಳಲು ಅಸಾಧ್ಯ. ಅಂತಹವರಿಗೆ ನಮ್ಮ ಸಲಹೆ ಏನೆಂದರೆ, ಕಾರ್ಯನಿರ್ವಹಿಸುವ ರಾತ್ರಿಗಳನ್ನು ಹಗಲನ್ನಾಗಿಯೂ ಹಗಲುಗಳನ್ನು ರಾತ್ರಿಗಳನ್ನಾಗಿಯೂ ಪರಿವರ್ತಿಸಿ ಕೊಳ್ಳುವುದು ಮತ್ತು ನಮ್ಮ ದಿನಚರ್ಯೆಗಳನ್ನು ರಾತ್ರಿ ಏಳುವ ವೇಳೆಗೆ ಪ್ರಾರಂಭಿಸಿ. ಹಗಲು ಮಲಗುವ ಮುಂಚೆ ರಾತ್ರಿ ಚರ್ಯೆಯನ್ನು ಅನುಸರಿಸುವ ರೂಢಿಯನ್ನು ಮಾಡಿಕೊಳ್ಳುವುದು ಒಳಿತು ಈ ರೀತಿಯಾಗಿ ಬದಲಾವಣೆ ಯನ್ನು ಮಾಡಿಕೊಂಡು ಸತತವಾಗಿ ಅನುಸರಿಸುತ್ತಾ ಬಂದರೆ ಶರೀರವು

ಬದಲಾದ ದಿನಚರ್ಯೆಗಳಿಗೆ ಹೊಂದಿಕೊಂಡು ಆರೋಗ್ಯ ಕಾಪಾಡಿಕೊಳ್ಳಬಹುದು.

ಎದ್ದನಂತರ?!

**ಕರಾಗ್ರೇ ವಸತೇ ಲಕ್ಷ್ಮೀ**
**ಕರಮಧ್ಯೇ ಸರಸ್ವತೀ**
**ಕರಮೂಲೇ ಸ್ಥಿತೌ ಗೌರಿ**
**ಪ್ರಭಾತೇ ಕರ ದರ್ಶನಮ್**

ಎಂತಹ ಉದಾತ್ತ ಚಿಂತನೆ, ನಿದ್ದೆಯಿಂದ ಏಳುತ್ತಾ ನಮ್ಮ ಬದುಕು ನಮ್ಮ ಕೈಯಲ್ಲಿಯೇ ಇದೆ. ಅದನ್ನು ರೂಪಿಸಿಕೊಳ್ಳುವವರೂ ನಾವೇ ಎಂದು ದೇವಿಯರನ್ನು ಪ್ರಾರ್ಥಿಸುತ್ತಾ ಕೈಗಳನ್ನು ಉಜ್ಜಿ ನೋಡಿಕೊಂಡು ದಿನವನ್ನು ಪ್ರಾರಂಭಿಸಬೇಕು.

**"ಬೆಳಗಾಗಿ ನಾನೆದ್ದು ಯಾರ್ ಯಾರ ನೆನೆಯಲಿ,**
**ಎಳ್ಳು ಜೀರಿಗೆ ಬೆಳೆಯೋಳ,**
**ಎಳ್ಳು ಜೀರಿಗೆ ಬೆಳೆಯೋಳ,**
**ಭೂ ತಾಯ,**
**ಎದ್ದೊಂದು ಘಳಿಗೆ ನೆನೆದೇನ"** ಎನ್ನುವ ಜನಪದವೂ ಇದೆ.

ವಿಪರ್ಯಾಸವೆಂದರೆ ಇಂದಿನ ಕಾಲದಲ್ಲಿ ಮುಂಜಾನೆ ಎದ್ದ ತಕ್ಷಣ ಮೊಬೈಲ್ ಫೋನನ್ನು ಉಜ್ಜುವುದೇ ಆಗಿದೆ. ಪ್ರಭಾತೇ ಕರ ದರ್ಶನಮ್/ತೀಡನಮ್ ಆಗಿರಲಿ, ಮೊಬೈಲ್ ದರ್ಶನಮ್/ತೀಡನಮ್ ಬೇಡ. ಮುಂದಿನ ಸಂಚಿಕೆಯಲ್ಲಿ ಭೇಟಿಯಾಗೋಣ....

## ಲಿಂಗೈಕ್ಯ ಬಸವಪ್ಪನವರು

**28ನೇ ಪುಟದಿಂದ........**

ರೈತ ಸಮಾವೇಶ ಮಾಡಿದರು. ವಿದ್ಯಾರ್ಥಿಗಳು ಓದಿನ ಕಡೆಗೆ ಪರೀಕ್ಷೆ ಬಗ್ಗೆ ಗಮನ ಕೊಡಬೇಕು. ಹೋರಾಟ ಸತ್ಯಾಗ್ರಹಗಳಲ್ಲಿ ಭಾಗವಹಿಸಬಾರದೆಂದು ಶಾಲೆಯ ಶಿಕ್ಷಕರು ಪೊಲೀಸ್‌ನವರು ಹೆದರಿಸುತ್ತಿದ್ದರು. ಆದರೂ ಅವರುಗಳ ಕಣ್‌ತಪ್ಪಿಸಿ ಬಸಪ್ಪ ಮತ್ತು ಸಮಾನ ಮನಸ್ಕ ಹೋರಾಟ ಹುಮ್ಮಸ್ಸಿನ ವಿದ್ಯಾರ್ಥಿಗಳು ಜೊತೆಗೂಡಿ ಜಯಕಾರ ಭಾರತ್‌ಮಾತಾಕಿ ಜೈ ಘೋಷಣೆ ಕೂಗುತ್ತಾ ಸಾಗುತ್ತಿದ್ದುದನ್ನು ಅವರಿಂದ ಕೇಳಿ ತಿಳಿದುಕೊಳ್ಳುವುದೇ ರೋಮಾಂಚಕಾರಿ ವಿಚಾರ ನಾನು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದು ತಪ್ಪಲ್ಲವೆಂದು ನನ್ನ ಭಾವನೆ. ಭಾಷಣ ದೇಶಭಕ್ತಿಗೀತೆ ಲಾವಣಿ ಮೆರವಣಿಗೆ ಅಗತ್ಯವಾಗಿತ್ತು. ಉಪಾಧ್ಯಾಯರುಗಳ ವಕ್ರದೃಷ್ಟಿ ಪರೀಕ್ಷೆ ಪಾಸು ಮಾಡುತ್ತೇನೆ ಎಂಬ ನಂಬಿಕೆಯಿಂದ ಪಾಠ, ಪ್ರವಚನಗಳ ವ್ಯಾಸಂಗ ಮಾಡುತ್ತಿದ್ದೇನೆ. ದೇಶದ ಸ್ವಾತಂತ್ರ್ಯಕ್ಕಾಗಿ ನಮ್ಮಂತಹ ವಿದ್ಯಾರ್ಥಿಗಳ ಸಂಘಟನೆ ಹೋರಾಟ ಅಗತ್ಯವೆಂದೇ ನನ್ನ ಭಾವನೆ ನಾವು ಮಾಡಿದ ಕೆಲಸ ತಮಗೆ ಬೇಸರವಾಗಿದ್ದರೆ ಮನ್ನಿಸಿ ಎಂದು ಶಿಕ್ಷಕರಲ್ಲಿ ಪೋಷಕರಲ್ಲಿ ಕ್ಷಮೆ ಯಾಚಿಸಿದ್ದೂ ಇದೆ. ಈ ರೀತಿ ಚಿತ್ರದುರ್ಗದ ಸಮಸ್ತರು ನಿಸ್ವಾರ್ಥ ದೇಶಪ್ರೇಮ, ತ್ಯಾಗ, ಬಲಿದಾನ ಮುಂದಿನ ಪೀಳಿಗೆ ನೆನಪಿಡುವಂತಹುದು. ಬಸಪ್ಪನವರು ವಿದ್ಯಾಭ್ಯಾಸದ ನಂತರ ಅರಬಗಟ್ಟ ಗ್ರಾಮದಲ್ಲಿ ಶಾಲೆ ಶಿಕ್ಷಕರಾಗಿ ಸೇವೆ ಸಲ್ಲಿಸಿದರು. ಬಸಾಪುರದ ಸೋದರತ್ತೆ ಮಾವನವರ ಸಂಬಂಧಿ ಉಪಾಧ್ಯಾಯಿನಿ ಎಂ.ಕೆ.ಚಂದ್ರಮ್ಮನವರನ್ನು ವಿವಾಹವಾದ ನಂತರ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಉದ್ಯೋಗಿಯಾದ ಬಸಪ್ಪನವರು ತುಂಬಿದ ಕುಟುಂಬದಲ್ಲಿ ಮಕ್ಕಳು, ಮೊಮ್ಮಕ್ಕಳು ಮರಿಮಕ್ಕಳನ್ನು ಕಂಡವರು. ನೊಳಂಬ ಸಮಾಜದ ಬಗ್ಗೆ ನಿರಂತರ ಅಭಿಮಾನ ಉಳ್ಳವರಾಗಿ ಆರಂಭದಿಂದ ಅನೇಕ ಸಿದ್ಧರಾಮೇಶ್ವರ ಜಯಂತಿ ಮಹೋತ್ಸವದಲ್ಲಿ ದವಸ ಧಾನ್ಯ, ಹಣಕಾಸು ಸಂಗ್ರಹಕ್ಕೆ ಪೂರಕವಾಗಿ ಸೇವೆ ಸಲ್ಲಿಸಿದ್ದಾರೆ. ಭದ್ರಾವತಿ ಆಕಾಶವಾಣಿಯಲ್ಲಿ ಜನಪದ, ಲಾವಣಿ ಹಾಡಿದ್ದಾರೆ. ಭದ್ರಾವತಿಯ ಅನೇಕ ಸಂಘ, ಸಂಸ್ಥೆಗಳು ಹಿರಿಯ ಸ್ವಾತಂತ್ರ್ಯ ಹೋರಾಟಗಾರರೆಂದು ಅನೇಕ ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಸಿದ್ಧರಾಮೇಶ್ವರರ ಬಗ್ಗೆ ಭಕ್ತಿಗೀತೆಗಳನ್ನು ರಚಿಸಿ ಪುಸ್ತಕ ಮುದ್ರಿಸಿ ಪ್ರಕಟಿಸಿದ್ದಾರೆ. ಈಗ 96ರ ಇಳಿವಯಸ್ಸಿನಲ್ಲಿಯೂ ಭದ್ರಾವತಿಯಲ್ಲಿ ಧಾರ್ಮಿಕ, ಸಾಮಾಜಿಕ ಚಿಂತನೆಯಲ್ಲಿ ತೊಡಗಿಕೊಂಡಿದ್ದರು.

ಇದೇ ಮಾರ್ಚ್ 9, 2025ರಂದು ಅರಭಗಟ್ಟ ಬಸಪ್ಪನವರು ಲಿಂಗೈಕ್ಯರಾಗಿದ್ದಾರೆ. ಶ್ರೀಯುತರು ನೊಳಂಬವಾಣಿ ಸಂಪಾದಕ ಮಂಡಳಿಯ ಸದಸ್ಯರಾದ ಎ.ಬಿ.ಬಸವರಾಜುರವರ ತಂದೆಯಾಗಿದ್ದು, ಅನೇಕ ಸಮಾಜಮುಖಿ ಕೆಲಸಗಳನ್ನು, ಜೊತೆಗೆ ಸ್ವಾತಂತ್ರ್ಯ ಹೋರಾಟದ ಭಾಗವಾಗಿದ್ದು ಇಂದು ನಮ್ಮನ್ನು ಅಗಲಿದ್ದಾರೆ. ಇಂತಹ ಮಹನೀಯರ ಅಗಲಿಕೆಗೆ ನಮ್ಮ ಸಮಾಜ ಬಾಂಧವರ ಪರವಾಗಿ ನೊಳಂಬವಾಣಿ ಪತ್ರಿಕಾ ಬಳಗ ಮತ್ತು ನೊಳಂಬ ಲಿಂಗಾಯತ ಸಂಘವು ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ.

**ಸಂಗ್ರಹ : ಡಾ. ಬಿ.ಸಿ.ರಾಕೇಶ್**

# ಶ್ರೀ ಗುರುಸಿದ್ಧರಾಮೇಶ್ವರರ 852ನೇ ಜಯಂತಿ ಮಹೋತ್ಸವ ಒಂದು ಅವಲೋಕನ

ನಮ್ಮ ಭಾರತ ಆಧ್ಯಾತ್ಮಿಕತೆಯ ನಾಡು ಅಜ್ಞಾನದ ಕತ್ತಲೆಗೆ ಬೆಳಕಾಗಿ ಕಾಣಿಸಿಕೊಳ್ಳುವ ಕಿರಣಗಳೆಂದರೆ ಸಾರ್ಥಕ ಬದುಕಿಗೆ ಮಹಾನ್ ಸಾಧಕರು ಸಂತ ಶರಣರು ನೀಡಿದ ಜೀವನ ಮೌಲ್ಯಗಳ ವಿಶ್ವಗುರು ಬಸವಣ್ಣನವರು 12ನೇ ಶತಮಾನದಲ್ಲಿ ಸಮಾನತೆ ವಿಶ್ವಕಲ್ಯಾಣಕ್ಕೆ ಭಾವೈಕ್ಯತೆಗೆ ಕಾಯಕ ದಾಸೋಹ ಅಂತರಂಗದ ಅನುಭವ ಅಭಿವ್ಯಕ್ತಿಯಿಂದ ವಿಶ್ವಕ್ಕೆ ನೀಡಿದ ವಚನದ ಸತ್ಯ ಅಸಂಖ್ಯಾತ ಮಹಾಶರಣರ ಅಮೂಲ್ಯ ಕೊಡುಗೆಯಾಗಿದೆ. ಯೋಗಿಗಳ ಯೋಗಿ ಶಿವಯೋಗಿ ಶ್ರೀ ಗುರುಸಿದ್ಧರಾಮೇಶ್ವರರು ಅತ್ಯಂತ ಪ್ರಭಾವಶಾಲಿ ಶಿವಶರಣರು ಮಕರ ಸಂಕ್ರಾಂತಿ ಉತ್ತರಾಯಣ ಪುಣ್ಯಕಾಲದಂದು ಜನಿಸಿದ ಅವರ ಜನ್ಮಸ್ಥಳ ಸೊನ್ನಲಿಗೆ ಶ್ರೀ ಗುರುಸಿದ್ಧರಾಮೇಶ್ವರರು ನಮ್ಮೆಲ್ಲರ ಆರಾಧ್ಯ ದೈವ. ಕರ್ನಾಟಕದ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ವಿಶಿಷ್ಟವಾದ ಕೊಡುಗೆ ನೀಡುವ ಮೂಲಕ ನೊಳಂಬ ಅರಸು ಮನೆತನವು ಕ್ರಿ.ಶ. 8ನೇ ಶತಮಾನದದಿಂದ 18ನೇ ಶತಮಾನದವರೆಗೆ ನಾಡಪ್ರಭುಗಳಾಗಿ ಆಳ್ವಿಕೆ ನಡೆಸಿದರು. ನೊಳಂಬ ಲಿಂಗಾಯತ ಸಂಘವು ಪ್ರತಿ ವರ್ಷವೂ ಕರ್ನಾಟಕದ ವಿವಿಧ ಕ್ಷೇತ್ರಗಳಲ್ಲಿ ನಿರಂತರವಾಗಿ ಆಚರಿಸಿಕೊಂಡು ಬರುತ್ತಿರುವ ಶ್ರೀ ಗುರು ಸಿದ್ಧರಾಮೇಶ್ವರ ಜಯಂತಿ ಮಹೋತ್ಸವದಲ್ಲಿ ನಾಡಿನಾದ್ಯಂತ ಲಕ್ಷಾಂತರ ಮಂದಿ ಅಭಿಮಾನಿಗಳು, ಸದ್ಭಕ್ತರು ಜಾತಿ ಮತ ಭೇದವಿಲ್ಲದೆ ಸ್ವಯಂ ಪ್ರೇರಣೆಯಿಂದ ಭಾಗವಹಿಸುತ್ತಾರೆ.

ನೊಳಂಬ ಲಿಂಗಾಯತ ಸಂಘವು ಕಳೆದ 52 ವರ್ಷಗಳಿಂದ ಕರ್ನಾಟಕದ ವಿವಿಧ ಕಡೆ ಹಾಗೂ ಆಂಧ್ರ ಪ್ರದೇಶ, ಮಹಾರಾಷ್ಟ್ರ ರಾಜ್ಯಗಳಲ್ಲಿ ಜಯಂತಿ ಮಹೋತ್ಸವವನ್ನು ಆಚರಿಸಿಕೊಂಡು ಬರುತ್ತಿದೆ. ಕರ್ನಾಟಕದ ರಾಜಧಾನಿ ಮಹಾನಗರ ಬೆಂಗಳೂರು ಇಲ್ಲಿ ಎರಡನೇ ಬಾರಿಗೆ ಶ್ರೀ ಕರ್ಮಯೋಗಿ ಗುರು ಸಿದ್ಧರಾಮೇಶ್ವರರ 852ನೇ ಜಯಂತಿ ಮಹೋತ್ಸವವನ್ನು ಪ್ರತಿಷ್ಠಿತ ಅರಮನೆ ಮೈದಾನದಲ್ಲಿರುವ ತ್ರಿಪುರವಾಸಿನಿ ಸಭಾಂಗಣದಲ್ಲಿ ಜನವರಿ 14 ಮತ್ತು 15ರಂದು ಆಯೋಜಿಸಲಾಗಿತ್ತು. ಯಾವುದೇ ಕೆಲಸಗಳು ಕೇವಲ ಅನಿಸಿಕೆಯಿಂದ ಸಾಧ್ಯವಿಲ್ಲ. ಆ ದಿಸೆಯಲ್ಲಿ ಕಾಯಾ, ವಾಚಾ, ಮನಸ್ಸು, ಶ್ರದ್ಧೆ, ಪರಿಶ್ರಮ, ಸಂಘಟನೆ, ಪರಸ್ಪರ ಸಹಕಾರ ಮನೋಭಾವನೆಯಿಂದ ದುಡಿದಾಗ ಯಶಸ್ಸು ಸಾಧ್ಯ ಎನ್ನುವುದಕ್ಕೆ ಅನ್ವರ್ಥವಾಗುವಂತೆ ನೊಳಂಬ, ಲಿಂಗಾಯತ ಸಂಘ ಬೆಂಗಳೂರು ಅಧ್ಯಕ್ಷರು ಶ್ರೀ ಬಿ.ಕೆ. ಚಂದ್ರಶೇಖರ್ ಹಾಗೂ ಪದಾಧಿಕಾರಿಗಳು ಕಾರ್ಯಕಾರಿ ಸಮಿತಿ ಸದಸ್ಯರುಗಳು ಶ್ರೀ ಗುರು ಸಿದ್ಧರಾಮೇಶ್ವರರ 852ನೇ ಜಯಂತಿ ಮಹೋತ್ಸವ ಸ್ವಾಗತ ಸಮಿತಿ ಅಧ್ಯಕ್ಷರು ಶ್ರೀ ಎಸ್.ಎನ್.ಸಿದ್ಧರಾಮಪ್ಪ ಐ.ಪಿ.ಎಸ್. (ನಿ.) ಪದಾಧಿಕಾರಿಗಳು ವಿವಿಧ ಸಮಿತಿಗಳ ಕಾರ್ಯಕಾರಿ ನಿರ್ವಾಹಕರುಗಳು ವ್ಯವಸ್ಥಿತವಾಗಿ ಯಾವುದೇ ರೀತಿ ನ್ಯೂನತೆ, ಕುಂದು ಕೊರತೆ ಅಚ್ಚುಕಟ್ಟಾಗಿ ಶ್ರದ್ಧೆ, ಪರಿಶ್ರಮದಿಂದ ಮಹೋತ್ಸವದ ಯಶಸ್ವಿಗೆ ಮೂಲಕಾರಣಕರ್ತರಾಗಿದ್ದು ಅಭಿನಂದನೀಯವಾದ ವಿಚಾರ ಎನ್ನಬಹುದು.



**ಎ.ಬಿ.ಬಸವರಾಜ್**
#13, ಬಸವಕಿರಣ, 5ನೇ ಅಡ್ಡರಸ್ತೆ,
ನಂಜಾರೆಡ್ಡಿ ಕಾಲೋನಿ, ಬೆಂಗಳೂರು–17.
ಮೊ : 9448102779

ಮಕರ ಸಂಕ್ರಾಂತಿ ಶುಭದಿನ 14–1–25 ಮಂಗಳವಾರ ಮುಂಜಾನೆ 8 ಗಂಟೆಗೆ ಪರಮಪೂಜ್ಯ ಶ್ರೀ ಮ.ನಿ.ಪ್ರ. ಶ್ರೀ ಶ್ರೀ ಡಾ ಅಭಿನವ ಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮಿಗಳು, ವಿರಕ್ತಮಠ, ಕುಪ್ಪೂರು ತಮ್ಮಡಿಹಳ್ಳಿ. ಇವರು ಷಟ್‌ಸ್ಥಳ ಧ್ವಜಾರೋಹಣ ನೆರವೇರಿಸಿದರು.

ನಂದಿ ಧ್ವಜಾರೋಹಣವನ್ನು ನೊಳಂಬ ಲಿಂಗಾಯತ ಸಂಘದ ಪದಾಧಿಕಾರಿಗಳು, ಸದಸ್ಯರು ಸಮಾಜ ಬಾಂಧವರ ಸಮ್ಮುಖದಲ್ಲಿ ಅಧ್ಯಕ್ಷರಾದ ಶ್ರೀ ಬಿ.ಕೆ. ಚಂದ್ರಶೇಖರ್‌ರವರು ನೆರವೇರಿಸಿದರು. ಹರಗುರು ಚರಮೂರ್ತಿಗಳೊಂದಿಗೆ ಶ್ರೀ ಗುರುಸಿದ್ಧರಾಮೇಶ್ವರ ಸ್ವಾಮಿಯವರ ಉತ್ಸವದ ಮೆರವಣಿಗೆ, ಅಖಿಲ ಭಾರತ ವೀರಶೈವ ಮಹಾಸಭಾ ಮುಂಭಾಗದಿಂದ ಸಡಗರ, ಸಂಭ್ರಮಗಳಿಂದ ವೀರಗಾಸೆ, ಡೊಳ್ಳು ಜಾನಪದ ನೃತ್ಯ ತಂಡಗಳೊಂದಿಗೆ ರಾಜಬೀದಿ ಮೆರವಣಿಗೆ, ತ್ರಿಪುರವಾಸಿನಿ ಸಭಾಂಗಣಕ್ಕೆ ಆಗಮಿಸುತ್ತಿದ್ದಂತೆ ನೆರೆದಿದ್ದ ಅಭಿಮಾನಿಗಳ ಜಯಘೋಷ ಮುಗಿಲು ಮುಟ್ಟಿದಂತೆ ರೋಮಾಂಚನ ಗೊಳಿಸುತ್ತಾ ಬೆಂಗಳೂರಿನ ಬೆಳಗಿನ

ಚಳಿಗೆ ಪ್ರತಿಸ್ಪರ್ಧಿ ಎನ್ನುವಂತಿದ್ದು, ಕಲಾವಿದರಿಗೆ ಇನ್ನಷ್ಟು ಹುರುಪು, ಹುಮ್ಮಸ್ಸು ಮೂಡಿಸುತ್ತಿತ್ತು. ದಾಸೋಹ ಸಮಿತಿಯ ರುಚಿಯಾದ ಉಪಹಾರ ಸೇವನೆಯೊಂದಿಗೆ ಸದ್ಭಕ್ತರು, ಸಮಾಜ ಬಾಂಧವರು, ದಾನಶೂರ ಕಂಬಿ ಸಿದ್ಧರಾಮಣ್ಣ ಮಹಾಮಂಟಪದ ವೇದಿಕೆಯ ಉದ್ಘಾಟನಾ ಸಮಾರಂಭಕ್ಕೆ ಸಿದ್ಧಗೊಳ್ಳುತ್ತಾ ಅಪರೂಪಕ್ಕೆ ರಾಜಧಾನಿಯಲ್ಲಿ ಭೇಟಿ ಮಾಡಿದ ಬಂಧು ಮಿತ್ರರ ಉಭಯ ಕುಶಲೋಪರಿಯೊಂದಿಗೆ ನಿಗದಿಪಡಿಸಿದ್ದ ಆಸನಗಳತ್ತ ಧಾವಿಸುತ್ತಿದ್ದುದು ಶಿಸ್ತಿನ ಸಿಪಾಯಿಗಳಂತೆ ಕಂಡುಬರುತ್ತಿತ್ತು.

ವೇದಿಕೆ ಕಾರ್ಯಕ್ರಮ ಶರಣರ ವಚನ ಹಾಗೂ ಭಕ್ತಿಗೀತೆಗಳೊಂದಿಗೆ ಆರಂಭವಾಯಿತು. ಹರಗುರು ಚರಮೂರ್ತಿಗಳ ದಿವ್ಯ ಸಾನಿಧ್ಯದಲ್ಲಿ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪನವರು ಸಮಾರಂಭವನ್ನು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಶ್ರೀ ಜಿ.ಎಸ್. ಬಸವರಾಜ್, ಮಾಜಿ ಲೋಕಸಭಾ ಸದಸ್ಯರು ವಹಿಸಿದ್ದರು. ಅರಣ್ಯ ಸಚಿವ ಈಶ್ವರ ಖಂಡ್ರೆಯವರು ಸ್ಮರಣ ಸಂಚಿಕೆ "ನೊಳಂಬ" ಬಿಡುಗಡೆ ಮಾಡಿದರು.

ನೊಳಂಬ ಇತಿಹಾಸ ಮತ್ತು ಸಂಘದ ಸಾಕ್ಷ್ಯಚಿತ್ರವನ್ನು ಬಿಜೆಪಿ ರಾಜ್ಯಾಧ್ಯಕ್ಷರು ಹಾಗೂ ಶಿಕಾರಿಪುರ ಶಾಸಕರಾದ ಶ್ರೀ ಬಿ.ವೈ. ವಿಜಯೇಂದ್ರರವರು ಬಿಡುಗಡೆ ಮಾಡಿದರು. ವೇದಿಕೆಯ ಮೇಲೆ ನಾಡಿನ ವೈವಿಧ್ಯಮಯ ಕ್ಷೇತ್ರದ ಗಣ್ಯ ಮಹನೀಯರು, ಅತಿಥಿಗಳು, ಸನ್ಮಾನಿತರು ಉಪಸ್ಥಿತರಿದ್ದು ಮಧ್ಯಾಹ್ನ ಶುಚಿ ರುಚಿಯಾದ ಮಹಾಪ್ರಸಾದ ನಂತರ ಸಾಹಿತ್ಯಗೋಷ್ಠಿ ಹೆಸರಾಂತ ಚಲನಚಿತ್ರ ನಟರೂ ನಮ್ಮ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳೂ ಆದ ಡಾಲಿ ಧನಂಜಯ್ ವಿಶೇಷ ಆಕರ್ಷಣೆಯೊಂದಿಗೆ ವಚನ ಚಿಂತನೆಯ ಉತ್ತಮ ವಿಚಾರಗಳನ್ನು ಹಂಚಿಕೊಂಡರು.

ಉಪನ್ಯಾಸಕಾರ ಸಾಹಿತಿ, ಚಟ್ನಳ್ಳಿ ಮಹೇಶ್‌ರವರಿಂದ ಸಿದ್ಧರಾಮೇಶ್ವರ ವಚನಗಳಲ್ಲಿ ತುಂಬಿರುವ ಸರ್ವಕಾಲಿಕ ಮೌಲ್ಯಗಳ ಬಗ್ಗೆ ಸೂಕ್ತ ವಿಚಾರ ಮಂಥನವಾಯಿತು. ಸಾಂಸ್ಕೃತಿಕ ಕಾರ್ಯಕ್ರಮ, ವಚನನೃತ್ಯ ಸಂಗೀತ ಕಾರ್ಯಕ್ರಮ ಶ್ರೀ ಶಿವಕುಮಾರ ಕಲಾಸಂಘ ಸಾಣೇಹಳ್ಳಿ ಇವರು ಪ್ರಸ್ತುತಪಡಿಸಿದ ಶಿವಯೋಗಿ ಸಿದ್ಧರಾಮೇಶ್ವರ ನಾಟಕ ಪ್ರದರ್ಶನ ಏರ್ಪಡಿಸಲಾಗಿತ್ತು.

ಬುಧವಾರ 15–1–25 ಬುಧವಾರ ಬೆಳಗ್ಗೆ 7.30ಕ್ಕೆ ಪರಮಪೂಜ್ಯ ಮಾತೆ ಬಸವಾಂಜಲಿ ಬಸವ ಜ್ಞಾನ ಮಂದಿರ ಮೈಸೂರು ಇವರ ದಿವ್ಯ ನೇತೃತ್ವದಲ್ಲಿ ಸಮಾಜದ ವಟುಗಳಿಗೆ ಹಾಗೂ ಉಪಸ್ಥಿತರಿದ್ದ ಎಲ್ಲ ಸಮಾಜ ಬಾಂಧವರಿಗೆ ಇಷ್ಟಲಿಂಗ ಪೂಜಾ ವಿಧಾನ ಲಿಂಗಧಾರಣಾ ಕಾರ್ಯಕ್ರಮ ಸುವ್ಯವಸ್ಥಿತವಾಗಿ ನೆರವೇರಿತು.

ಭಕ್ತಿಸಂಗೀತ ಜನಪದ ಝೇಂಕಾರ ಮಲ್ಲಿಗೆ ಸುಧೀರ್‌ನ ಮಂಜುಳ ಮಹೇಶ್ ತಂಡದ ಕಾರ್ಯಕ್ರಮದೊಂದಿಗೆ ಮಹಿಳಾ ಮತ್ತು ಕೃಷಿಗೋಷ್ಠಿ ಉದ್ಘಾಟನೆ ಹರಗುರು ಚರಮೂರ್ತಿಗಳ ನಾಡಿನ ಗಣ್ಯರ, ರಾಜಕೀಯ ಮುತ್ಸದ್ದಿಗಳ ಮಂತ್ರಿ ಮಹೋದಯರ ಉಪಸ್ಥಿತಿಯಲ್ಲಿ ನೆರವೇರಿತು.

ಸಮಾರೋಪ ಸಮಾರಂಭದೊಂದಿಗೆ ಎರಡು ದಿನಗಳು ಶಿವಯೋಗಿ ಸಿದ್ಧರಾಮೇಶ್ವರರ ಸಾರ್ಥಕ ಸಾಧನೆ, ವಚನ ಸಾಹಿತ್ಯ ನೊಳಂಬ ಇತಿಹಾಸ ಪ್ರಸ್ತುತ ಸಂಘ ಸಂಸ್ಥೆಗಳ ಕರ್ತವ್ಯ ಎಲ್ಲ ವಿಚಾರಗಳ ವಿನಿಮಯ ಚಿಂತನೆ ವಸ್ತು ಪ್ರದರ್ಶನ ಮುಂದಿನ ವ್ಯಾಪಾರಿ ಮಳಿಗೆಗಳಲ್ಲಿ ವ್ಯಾಪಾರದ ಭರಾಟೆ ಮಾಮೂಲಾಗಿತ್ತು. ವಿಶೇಷವಾಗಿ ನಮ್ಮ ಸಮಾಜದ ವೈದ್ಯರುಗಳು ಆರೋಗ್ಯ ತಪಾಸಣೆ ಶಿಬಿರವನ್ನು ಯಶಸ್ವಿಯಾಗಿ ನಡೆಸಿದ್ದು, ಸಾರ್ಥಕವೆನ್ನಿಸಿತು. ಸಮಾರೋಪದೊಂದಿಗೆ ಊರಿಗೆ ಹೊರಡುವ ಧಾವಂತ ಮುಂದಿನ ಸಿದ್ಧರಾಮೇಶ್ವರ ಜಯಂತಿ ಎಲ್ಲಿರಬಹುದು ಎಂಬ ಊಹಾಪೋಹ ಏನೇ ಇದ್ದರೂ ಬೆಂಗಳೂರಿನ ಸಿದ್ಧರಾಮೇಶ್ವರ ಮಹೋತ್ಸವ ಕಾರ್ಯಕ್ರಮದ ಎಲ್ಲಾ ಸಮಿತಿಯ ಮುಖ್ಯಸ್ಥರು, ಪದಾಧಿಕಾರಿಗಳು, ಸದಸ್ಯರು ಸಮಾಜ ಬಾಂಧವರು ಯಾವುದೇ ಗೊಂದಲಗಳಿಲ್ಲದೆ ಪರಸ್ಪರ ಪ್ರೀತಿ–ವಿಶ್ವಾಸಗಳಿಂದ ಶ್ರೀಗುರು ಸಿದ್ಧರಾಮೇಶ್ವರ ಸ್ವಾಮಿಯ ಸೇವೆಗೆ ಆದ್ಯತೆ ಮಿಕ್ಕ ಏನೇ ಸಣ್ಣಪುಟ್ಟ ಲೋಪದೋಷಗಳಿದ್ದರೂ ಗೌಣ ಎನ್ನುವಂತೆ ಒಟ್ಟಾಗಿ ಶ್ರಮಿಸಿದ್ದು ಸಮಾರಂಭದ ಸಾರ್ಥಕತೆಯ ಮೂಲ ಉದ್ದೇಶ ನೆರವೇರಿದಂತಾಯಿತು

ಎಲ್ಲವನ್ನೂ ತ್ರಿಪುರವಾಸಿನಿ ಸಭಾಂಗಣದಲ್ಲೇ ಸಮರ್ಪಿಸಿ ಹೊಸ ಹುರುಪಿನಿಂದ 853ನೇ ಸಿದ್ಧರಾಮೇಶ್ವರ ಜಯಂತಿ ಮಹೋತ್ಸವಕ್ಕೆ ಈಗಲೇ ಸನ್ನದ್ಧರಾಗುವ ಶಕ್ತಿ ಚೈತನ್ಯ–ಅನ್ಯೋನ್ಯತೆ ಸಮರಸ ಭಾವನೆ ಮತ್ತು ವಿಶ್ವಕಲ್ಯಾಣದ ಗುರಿಯತ್ತ ಹೆಜ್ಜೆ ಹಾಕುವ ಸಮಸ್ತರಿಗೂ ಶ್ರೀ ಗುರು ಸಿದ್ಧರಾಮೇಶ್ವರ ಸ್ವಾಮಿ ಬಸವಾದಿ ಶರಣರು ಕರುಣಿಸಲಿ ಎಂದು ಆಶಿಸುತ್ತಾ ಎಲ್ಲರಿಗೂ ಶರಣು ಶರಣಾರ್ಥಿ.

# ಭಾಷಾ ತಂತ್ರಜ್ಞಾನದ ವಿಕಾಸ

ಮಾನವನಿಗೆ ಆಲೋಚನಾಶಕ್ತಿಯಿರುವ ಕಾರಣ ಆತ ಬೇರೆಲ್ಲ ಪ್ರಾಣಿ ಗಳಿಗಿಂತ ಭಿನ್ನವೆನಿಸಿಕೊಂಡಿದ್ದಾನೆ. ಇಂತಹ ಆಲೋಚನಾ ಶಕ್ತಿಯೇ ಸಂವಹನಕ್ಕೆ ದಾರಿ ಮಾಡಿಕೊಟ್ಟಿರಬೇಕು. ಹಾಗಾಗಿ ತನ್ನ ಅನುಭವಗಳನ್ನು ಭಾವನೆಗಳನ್ನು ವ್ಯಕ್ತಪಡಿಸಿ ಬೇರೊಬ್ಬರ ಮನಸ್ಸನ್ನು ಅರಿಯಲು ಸನ್ನೆ, ಸಂಕೇತ ಇತ್ಯಾದಿಗಳನ್ನು ಬಳಸಿ ಆನಂತರ ಒಂದು ಮಾಧ್ಯಮವನ್ನು ಕಂಡುಕೊಂಡ. ಅದೇ ಭಾಷೆ ಆರಂಭದಲ್ಲಿ ಈ ಭಾಷೆ ಕೇವಲ ಮಾತಿನ ಸ್ವರೂಪವಷ್ಟೇ ಆಗಿತ್ತು. ಯಾವುದೇ ವ್ಯವಹಾರವಾಗಲೀ ಮಾತು ಸರ್ವಸ್ವವಾಗಿತ್ತು.

ಈ ಮಾತನ್ನು ಯಾವ ರೂಪದಲ್ಲೂ ದಾಖಲಿಸುವ ರೂಢಿಯಿರಲಿಲ್ಲ. ಮಾತನ್ನು ದಾಖಲಿಸುವ ಸಲುವಾಗಿ ಬಂದದ್ದೇ ಬರಹ. ಅದುವರೆಗೂ ಬರಹ ಇರಲಿಲ್ಲವೆಂದಲ್ಲ. ತನ್ನ ಮನಸ್ಸಿನಲ್ಲಿರುವುದನ್ನು ಕರಡು ಚಿತ್ರಗಳ ಮೂಲಕ ಅಭಿವ್ಯಕ್ತಿಪಡಿಸುತ್ತಿದ್ದ. ಆದರೆ ಸಂವಹನ ಮಾಧ್ಯಮವಾದ ಮಾತನ್ನು ಬರಹ ರೂಪಕ್ಕೆ ತಂದುದು ಒಂದು ಅಸಮಾನ್ಯ ತಂತ್ರಜ್ಞಾನ ಎನ್ನಬಹುದು. ಪ್ರತಿಯೊಂದು ಧ್ವನಿಗೂ ಒಂದೊಂದು ಅಕ್ಷರ ರೂಪವನ್ನು ನೀಡಿ ಅದನ್ನು ಬಳಕೆಗೆ ತರಲಾಯಿತು. ಅಂದರೆ ಭಾಷಾ ತಂತ್ರಜ್ಞಾನದ ಆರಂಭವೆಂದರೆ ಲಿಪಿಯ ಉಗಮ. ಹೀಗೆ ಲಿಪಿಯ ಉಗಮವಾದ ನಂತರ ಅದನ್ನು ದಾಖಲಿಸಲು ವಿಧವಿಧವಾದ ವಸ್ತುಗಳನ್ನು ಬಳಸಲಾಯಿತು. ಅಂದರೆ ಬರೆಯಲು ಬಳಸಲಾದ ವಸ್ತುಗಳು ಹಲವಾರಿವೆ. ಇದಕ್ಕೆ ಕಾರಣ, ಆಯಾ ಪ್ರದೇಶದಲ್ಲಿ ಸಿಗುವ ಬರವಣಿಗೆಯ ಸಾಮಗ್ರಿ, ಅದರ ಪ್ರಮಾಣ, ಬಳಸಲು ಅಗತ್ಯವಾದ ತಾಂತ್ರಿಕ ಜ್ಞಾನ, ಒಂದು ಪ್ರದೇಶದಲ್ಲಿ ಬಿದಿರು ಅನುಕೂಲವಾಗಿ ಕಂಡರೆ ಮತ್ತೊಂದು ಕಡೆ ತಾಳೆಗರಿ, ಇನ್ನೊಂದು ಕಡೆ ಆವೆ ಮಣ್ಣಿನ ಹಲಗೆಗಳು, ಶಿಲೆಗಳು ಹೀಗೆ ಅನೇಕ ವಸ್ತುಗಳು ಬರವಣಿಗೆಯ ಸಾಮಗ್ರಿಗಳಾದವು. ಈಜಿಪ್ಟ್‌ನ ನೈಲ್ ನದಿ ತೀರದಲ್ಲಿ ಬೆಳೆಯುತ್ತಿದ್ದ 'ಪ್ಯಾಪಿರಸ್' ಎಂಬ ಒಂದು ವಿಧದ ಹುಲ್ಲನ್ನು ಸಂಸ್ಕರಿಸಿ ಬರಹಕ್ಕಾಗಿ ಉಪಯೋಗಿಸಲಾಯಿತು.

ಈ ಹುಲ್ಲಿನ ಸುರುಳಿಗಳು ಬಹುಬೇಗ ಜೀರ್ಣವಾಗುತ್ತಿದ್ದ ಕಾರಣ, ಇನ್ನಿತರ ಸಾಧನ ಸಲಕರಣೆಗಳ ಕಡೆಗೆ ಮನಸ್ಸು ತಿರುಗಿತು. ಕೆಲವು ಪ್ರದೇಶಗಳಲ್ಲಿ ಹದಮಾಡಿದ ಪ್ರಾಣಿಗಳ ಚರ್ಮದ ಮೇಲೆ ಬರೆಯಲಾಯಿತು. ಮರದ ತೊಗಟೆಗಳ ಮೇಲೆ ಬರೆದರು. ಹೀಗೆ ಪರ್ಯಾಯವಾಗಿ ಬಂದ ಸಲಕರಣೆಗಳೂ ಕೂಡ ಬೇಗ ಹಾಳಾಗುತ್ತಿದ್ದವು. ಹಲಗೆಗಳು, ಬೊಂಬುಗಳ ಮೇಲೆ ಬೃಹದ್ಗ್ರಂಥಗಳನ್ನು ಬರೆಯುವುದು ಮತ್ತು ಅವುಗಳನ್ನು ಬಳಸುವುದು ಸುಲಭದ ಮಾತಾಗಿರಲಿಲ್ಲ. ಸಾಂಸ್ಕೃತಿಕ ಅಂಶ ಹಾಗೂ ಪರಂಪರೆಯೂ ಸಹ ಪರ್ಯಾಯ ಸಲಕರಣೆಗಳಿಗೆ ಕಾರಣವಾಗಿರಬೇಕು. ಉದಾಹರಣೆಗೆ, ಸತ್ತ ಪ್ರಾಣಿಯ ಚರ್ಮದ ಮೇಲೆ ಧಾರ್ಮಿಕ ಗ್ರಂಥಗಳನ್ನು, ನೀತಿ ಪಾಠಗಳನ್ನು ಬರೆಯುವುದು ಅಮಾನವೀಯ ಎಂದು ಭಾವಿಸಲಾಗಿತ್ತು.

ನಂತರದ ಹಂತದಲ್ಲಿ ಲೋಹದ ಪಟ್ಟಿಗಳ ಮೇಲೆ, ಬಟ್ಟೆಯ ಮೇಲೆ ಬರೆಯಲಾಯಿತು. ಆದರೆ ಇವುಗಳ ಬೆಲೆಯೂ ಅಧಿಕವಾಗಿದ್ದುದು, ಶಿಲೆಗಳನ್ನು ಬರಹಕ್ಕಾಗಿ ಬಳಸಿದರೂ ಬೇಕೆಂದ ಕಡೆಗೆ ಒಯ್ಯುವುದು ಸಾಧ್ಯವಿರಲಿಲ್ಲ. ಅಲ್ಲದೆ ಅವುಗಳ ಮೇಲೆ ಬರೆಯುವುದು ತ್ರಾಸದಾಯಕವಾಗಿತ್ತು. ಹಾಗಾಗಿ ತಾಳೆಗರಿಗಳ ಬಳಕೆ ಬಂದಿತು. ಇವು ಒಂದೆರಡು ಶತಮಾನಗಳ ಬಳಕೆ ಬರುವಂತಿದ್ದು ಬೆಲೆಯೂ ಸಹ ಕಡಿಮೆ. ಅಲ್ಲದೆ ಅವುಗಳನ್ನು ಸೇರಿಸಿ ಚಿಕ್ಕ ಚಿಕ್ಕ ಕಟ್ಟುಗಳಾಗಿ ಮಾಡಿ ಕೈಯಲ್ಲಿ ಸಾಗಿಸಲು ಅನುಕೂಲವಾಗುವಂತಿತ್ತು. ಹೀಗಾಗಿ ತಾಳೆಗರಿಗಳು ಭಾಷಾಧ್ಯಯನಕ್ಕೆ ಪೂರಕವಾಗಿ ಬಂದಿವೆ. ತಾಳೆಗರಿಗಳ ಮೇಲೆ ಬರೆಯುವ ಕ್ರಮ ಮುಂದೆ ಕಲ್ಲಚ್ಚು, ಮುದ್ರಣ ಬರುವವರೆಗೂ ಮುಂದುವರಿಯುತ್ತದೆ. ಅಂದರೆ ಯಾಂತ್ರಿಕ ಸಾಧನದ ಆವಿಷ್ಕಾರವಾಗುವವರೆಗೂ ಮುಂದುವರಿಯುತ್ತದೆ. ಕಲ್ಲಚ್ಚಿ (ಲಿಥೋಗ್ರಫಿ)ನಲ್ಲಿ ಕಲ್ಲಿನ ಮೇಲೆ ಕೊರೆದ ವಿಷಯದ ಮೇಲೆ ಮಸಿಯನ್ನು ಹಚ್ಚಿ ಪ್ರತಿಗಳನ್ನು ತೆಗೆಯಲಾಗುತ್ತಿತ್ತು. ಅಂದರೆ ಇಲ್ಲಿ ಒಂದಕ್ಕಿಂತ ಹೆಚ್ಚು ಪ್ರತಿಗಳ ಅವಶ್ಯಕತೆ ಇದ್ದಾಗ ಈ ಮಾದರಿ ಅನುಸರಿಸಲಾಗುತ್ತಿತ್ತು. ಮುದ್ರಣ ಬಂದ ನಂತರ ಜ್ಞಾನ ಪ್ರಸಾರ, ಭಾಷಾಪ್ರಸಾರ ತೀವ್ರವಾಯಿತು.

**ಯಂತ್ರಗಳ ಯುಗ**

ಮುದ್ರಣ ಯಂತ್ರದ ಆವಿಷ್ಕಾರವಾದುದು ಜ್ಞಾನ ಪ್ರಸಾರದಲ್ಲಿ ಬಹುದೊಡ್ಡ ಕ್ರಾಂತಿಯನ್ನೇ ಉಂಟು ಮಾಡಿತು. ಮೊದಲು ಧಾರ್ಮಿಕ ಗ್ರಂಥಗಳ ಪ್ರಸಾರದಲ್ಲಿ ಆರಂಭಗೊಂಡು ಆ ನಂತರ ಇನ್ನಿತರ ವಲಯಗಳಿಗೂ ವಿಸ್ತರಿಸಿತು. ಈ ಅಚ್ಚಿನ ಕಲೆಯ ತಂತ್ರಜ್ಞಾನ ಅದುವರೆಗೂ ಇದ್ದಂತಹ ಬರೆಯುವ ಕ್ರಮದಿಂದ ಅಕ್ಷರವನ್ನು ಮೂಡಿಸುವ

ಕ್ರಮಕ್ಕೆ ಪಲ್ಲಟಗೊಳ್ಳಲು ಕಾರಣವಾಯಿತು. ಒಂದೇ ಬಾರಿಗೆ ಪುಸ್ತಕಗಳ ಅನೇಕ ಪ್ರತಿಗಳನ್ನು ತೆಗೆಯುವುದು ಮುದ್ರಣದಿಂದ ಸಾಧ್ಯವಾದುದು ಜ್ಞಾನ ಪ್ರಸಾರಕ್ಕೆ ಸಹಾಯಕವಾಯಿತು. ಭಾಷೆಗೆ ಸಂಬಂಧಿಸಿದಂತೆ ಬಂದಂತಹ ಇನ್ನೊಂದು ಉಪಕರಣವೆಂದರೆ ಬೆರಳಚ್ಚು ಯಂತ್ರ. ಇದೂ ಸಹ ಅಕ್ಷರಗಳನ್ನು ಬರೆಯುವುದರ ಬದಲಾಗಿ ಮೂಡಿಸಬಲ್ಲಂತಹ ಒಂದು ಅವಿಷ್ಕಾರ. ಇದರಲ್ಲಿ ಅಕ್ಷರಗಳನ್ನು ಮುದ್ರಣ ಮಾಧ್ಯಮಕ್ಕೆ ಸಮೀಪವಿರುವಂತೆ ಮೂಡಿಸಿ ಇಚ್ಚಿತ ಕೆಲಸವನ್ನು ಮಾಡಿಕೊಳ್ಳಬಹುದಾಗಿದೆ. ಮೊದಲು ಸಾಮಾನ್ಯ ರೀತಿಯ ಬೆರಳಚ್ಚು ಯಂತ್ರಗಳು ಬಂದವು. ಸ್ವಲ್ಪಕಾಲದ ನಂತರ ವಿದ್ಯುಚ್ಚಾಲಿತ ಬೆರಳಚ್ಚು ಯಂತ್ರ ಬಂದು ಇಂದು ಮುದ್ರಣದಂತೆಯೇ ಎರಡೂ ಭಾಗದಲ್ಲಿ ನಿರ್ದಿಷ್ಟ ಮಾರ್ಜಿನ್ ಫಾಂಟ್‌ಗಳನ್ನು ಹೊಂದಿತ್ತು.

ಬೆರಳಚ್ಚು ಯಂತ್ರದಲ್ಲಿ ಒಮ್ಮೆಗೆ ಮೂರುನಾಲ್ಕು ಪ್ರತಿಗಳನ್ನು ಮಾತ್ರ ತೆಗೆಯಬಹುದಾಗಿತ್ತು. ಹಾಗಾಗಿ ಪ್ರತಿ ತೆಗೆಯುವ ಯಂತ್ರದ ಆವಿಷ್ಕಾರವಾಯಿತು. ಬೆರಳಚ್ಚು ಯಂತ್ರದಲ್ಲಿ ಒಂದು ಬಗೆಯ ಕಾಗದದ ಮೇಲೆ ಟೈಪು ಮಾಡಿದ ಹಾಳೆಯನ್ನು ಈ ಯಂತ್ರಕ್ಕೆ ಜೋಡಿಸಿ, ಮಸಿ ಲೇಪಿಸಿ ಅನೇಕ ಪ್ರತಿಗಳನ್ನು ತೆಗೆಯಬಹುದಾಗಿತ್ತು. ಧ್ವನಿಯ ವಿಶ್ಲೇಷಣೆಗೆ ಸಂಬಂಧಿಸಿದಂತೆ, ಧ್ವನಿಯ ಉತ್ಪಾದನೆಯ ಸ್ವರೂಪವನ್ನು ತಿಳಿಯಲು ಭಾಷಾ ಪ್ರಯೋಗಶಾಲೆಗಳು ಬಂದವು. ಇವು ಮುಖ್ಯವಾಗಿ ಧ್ವನಿ ವಿಶ್ಲೇಷಣೆಗೆ ಹಾಗೂ ಭಾಷಾ ಬೋಧನೆಗೆ ನೆರವಾದವು.

ಧ್ವನಿ ವಿಶ್ಲೇಷಣೆಗೆ ಹಾಗೂ ಸಂಬಂಧಿಸಿದಂತೆ ಆಸಿಲೋಸ್ಕೋಪ್ ಮತ್ತು ಸ್ಪೆಕ್ಟ್ರೊಗ್ರಾಮ್ ಎಂಬ ಎರಡು ಯಂತ್ರಗಳು ಬಂದವು. ಧ್ವನಿ ಮುದ್ರಿಸಿಕೊಂಡ ಮಾತು ಅಥವಾ ಧ್ವನಿಯನ್ನು ಕಣ್ಣಿಗೆ ಕಾಣುವ ಅಲೆಗಳ ರೂಪದಲ್ಲಿ ಪಡೆಯಲು ಈ ಯಂತ್ರಗಳನ್ನು ಬಳಸಲಾಗುತ್ತದೆ. ಧ್ವನಿಮುದ್ರಿತ ರೂಪವನ್ನು ಕಣ್ಣಿಗೆ ಕಾಣುವ ತರಂಗ ಚಿತ್ರಗಳನ್ನಾಗಿ ಮೂಡಿಸುವ ಯಂತ್ರ ಆಸಿಲೋಸ್ಕೆಪ್. ಇಲ್ಲಿ ಧ್ವನಿಯು ಅಲೆಗಳ ಕಂಪನ ವಿಸ್ತಾರ ಮತ್ತು ತರಂಗಾಂತರಗಳನ್ನು ನೋಡಲು ಸಾಧ್ಯ. ನಿರಂತರವಾಗಿ ಹರಿಯುವ ಅಲೆಗಳಂತೆ ಕಾಣುವ ಈ ಚಿತ್ರಗಳು ಯಂತ್ರದ ಪರದೆಯ ಮೇಲೆ ಮೂಡುತ್ತವೆ. ಧ್ವನಿಯ ಹಿಂದೆ ಅಡಗಿದ ಶಕ್ತಿಯ ತೀವ್ರತೆಯನ್ನು ವಿಶ್ಲೇಷಿಸಿ ತೋರಿಸುವ ಯಂತ್ರ ಸ್ಪೆಕ್ಟ್ರೋಗ್ರಾಮ್. ಇದರ ಮೂಲಕ ಒಂದು ಧ್ವನಿಯ ತೀವ್ರತೆ ಯಾವ ಕಾಲದಲ್ಲಿ ಎಷ್ಟು ಎಂಬುದನ್ನು ಗುರುತಿಸಬಹುದು. ಪ್ರತಿಯೊಂದು ಧ್ವನಿಯ ಉಚ್ಚಾರದ ಕಾಲಕ್ಕೆ ನಾಲಿಗೆಯ ಸ್ಥಿತಿ ಹೇಗಿರುತ್ತದೆ ಎಂಬುದು ತಿಳಿಯುತ್ತದೆ. ಈ ಧ್ವನಿವಿಶ್ಲೇಷಣೆಗೆ ಸಂಬಂಧಿಸಿದಂತಹ ಮಾಹಿತಿಯನ್ನು ಕಾಗದದ ಮೇಲೆ ಮುದ್ರಿಸಿಕೊಳ್ಳ ಬಹುದಾಗಿದೆ.

ಭಾಷಾಧ್ಯಯನಕ್ಕಾಗಿ ಮಾಹಿತಿ ಸಂಗ್ರಹ ಹಾಗೂ ದಾಖಲೀಕರಣ ಪ್ರಕ್ರಿಯೆಯಲ್ಲಿ ಅನುಕೂಲವಾಗುವ ಯಂತ್ರಗಳೆಂದರೆ ಟೇಪ್‌ರೆಕಾರ್ಡರ್, ಮೈಕ್ರೋಫಿಲಂ, ಮೈಕ್ರೋಫಿಶ್‌ಗಳು. ಅಧ್ಯಯನದ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಅಕರಗ್ರಂಥಗಳನ್ನು, ಇನ್ನಿತರ ಮಾಹಿತಿಗಳನ್ನು ಫೋಟೋ ತೆಗೆದು ಮೈಕ್ರೋಫಿಲಂಗಳ ರೂಪದಲ್ಲಿಡಬಹುದಾಗಿದೆ. ಅಂತೆಯೇ ಮೈಕ್ರೋಫಿಶ್ ಕಾರ್ಡುಗಳ ಮೇಲೆ ಅನೇಕ ಪುಟಗಳನ್ನು ದಾಖಲಿಸಿಡಬಹುದು. ಇವುಗಳನ್ನು ಇದಕ್ಕೆಂದೇ ರೂಪಿಸಲಾದ ಮೈಕ್ರೋಫಿಶ್ ರೀಡರ್‌ಗಳೆಂಬ ಯಂತ್ರಗಳ ಪರದೆಗಳ ಮೇಲೆ ಓದಬಹುದು. ಸಣ್ಣದಾದ ಅಕ್ಷರಗಳು ಈ ರೀಡರ್‌ಗಳಲ್ಲಿ ಓದಬಹುದಾದ ಗಾತ್ರದಲ್ಲಿ ಕಾಣುತ್ತವೆ. ಹಾಗಾಗಿ ಇವು ಭಾಷಾಧ್ಯಯನದ ತಂತ್ರಜ್ಞಾನದ ಸಲಕರಣೆಯಾಗಿ ಸಹಾಯಕವಾಗಿವೆ.

ಟೇಪ್‌ರೆಕಾರ್ಡರ್‌ಗಳು ಯಾವುದೇ ಧ್ವನಿಯನ್ನು ದಾಖಲಿಸಿಕೊಳ್ಳಬಹುದಾದ ಸಾಧನವಾಗಿವೆ. ಭಾಷಾಧ್ಯಯನಕ್ಕೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಕ್ಕೆ ಅಗತ್ಯವಾದ ಉಪಕರಣವಾಗಿದೆ. ಮತ್ತೆ ಮತ್ತೆ ಕೇಳಬಹುದಾದ ಸೌಲಭ್ಯವಿರುವುದರಿಂದ ಮಾಹಿತಿ ವಿಶ್ಲೇಷಣೆಯಲ್ಲಿ ಸಹಕಾರಿಯಾಗಿದೆ. ಮ್ಯಾಗ್ನೆಟಿಕ್ ಟೇಪ್‌ಗಳ ಮೇಲೆ ಮಾಹಿತಿಯನ್ನು ಹಿಡಿದಿಡಬಹುದಾದ ಇದರ ಹೆಗ್ಗಳಿಕೆ ಎಂದರೆ ದಾಖಲಿಸಿದ ಮಾತನ್ನು ಹಲವು ವರ್ಷಗಳ ಬಳಿಕವೂ ಕೇಳಬಹುದಾಗಿರುವುದು. ಭಾಷಾಧ್ಯಯನವೆಂದರೆ ಭಾಷಾ ಬೋಧನೆ ಕಲಿಕೆಯೂ ಸೇರುತ್ತದೆ. ಇಲ್ಲಿ ಬಳಕೆಯಾಗುವ ತಂತ್ರಜ್ಞಾನಿಕ ಸಲಕರಣೆಗಳೆಂದರೆ ದೃಶ್ಯಶ್ರವ್ಯ ಸಾಧನಗಳು. ಇವುಗಳಲ್ಲಿ ಟಿವಿ, ಟೇಪ್‌ರಿಕಾರ್ಡರ್‌ಗಳು ಮುಖ್ಯವಾದವು.

**ಉನ್ನತ ತಂತ್ರಜ್ಞಾನ**

ಈಚಿನ ದಿನಗಳಲ್ಲಿ ಮಾನವ ಭಾಷೆಯನ್ನು ವಿವಿಧ ರೀತಿಯಲ್ಲಿ ಸಂಸ್ಕರಿಸಲು ಅಧ್ಯಯನ ಮಾಡಲು ರೂಪಿಸಲಾಗಿರುವ ಕಂಪ್ಯೂಟರ್ ತಂತ್ರಜ್ಞಾನ. ಈ ಮುಂದೆ ಸಾಂಪ್ರದಾಯಿಕವಾಗಿ ಬಳಸಲಾದ ಎಲ್ಲ ಬಗೆಯ ತಂತ್ರ, ಬಳಕೆ, ರೀತಿ ಇತ್ಯಾದಿಗಳನ್ನು ಮೀರಿ ಉನ್ನತ ಬಗೆಯ

**46ನೇ ಪುಟಕ್ಕೆ....**

# ಪ್ರಕೃತಿಯ ನಡುವೆ ಮಾನವ

ಪ್ರಕೃತಿಯ ನಡುವೆ ಮನುಷ್ಯನ ಬದುಕು ಆನಂದ, ಆರೋಗ್ಯ ಮತ್ತು ಸಂತೋಷದಾಯಕವಾಗಿರಬೇಕಾದರೆ ಶುದ್ಧವಾದ ಗಾಳಿ, ಶುದ್ಧವಾದ ನೀರು ಮತ್ತು ಶುದ್ಧವಾದ ಆಹಾರ ಬಹಳ ಮುಖ್ಯ. ಮರ-ಗಿಡ, ಬಳ್ಳಿ, ಹೂವು, ಬೆಟ್ಟ, ಗುಡ್ಡಗಳು, ನೀರು, ಕೆರೆ-ಕಟ್ಟೆಗಳು, ದಟ್ಟವಾದ ಅರಣ್ಯ ಇವುಗಳನ್ನೆಲ್ಲ ಒಳಗೊಂಡಿರುವುದೇ ಒಂದು ಸುಂದರವಾದ ಪ್ರಕೃತಿ. ಈ ಪ್ರಕೃತಿಯ ನಡುವೆ ಮನುಷ್ಯ, ಪ್ರಾಣಿ-ಪಕ್ಷಿಗಳು, ಕ್ರಿಮಿ-ಕೀಟಗಳು ಬದುಕುತ್ತಿವೆ. ಮನುಷ್ಯನಿಗೆಬೇಕಾದಂತಹ ಆಹಾರ, ನೀರು, ಗಾಳಿಯನ್ನು ಪ್ರಕೃತಿ ನಿರಂತರವಾಗಿ ನೀಡುತ್ತಿದೆ. ಮರಗಿಡಗಳಿಂದ ಸಿಗುವ ಬಹಳ ಮುಖ್ಯವಾದ ಆಮ್ಲಜನಕ ಮನುಷ್ಯನನ್ನು ಬದುಕಲು ಮತ್ತು ಆರೋಗ್ಯವಂತನನ್ನಾಗಿರಿಸಲು ಸಹಕಾರಿಯಾಗಿದೆ.

ಮನುಷ್ಯನಿಗೆ ಅಮೂಲ್ಯವಾದ ಆಮ್ಲಜನಕವನ್ನು ಪ್ರಕೃತಿ ನಿರಂತರವಾಗಿ ನೀಡಿ ಮನುಷ್ಯನ ಬದುಕನ್ನು ಶುದ್ಧವಾಗಿರಿಸುತ್ತದೆ. ಪ್ರಕೃತಿ ಒಳ್ಳೆಯವರನ್ನಾಗಲೀ, ಕೆಟ್ಟವರನ್ನಾಗಲೀ, ಬಡವರನ್ನಾಗಲೀ, ಶ್ರೀಮಂತರನ್ನಾಗಲೀ ಮತ್ತು ಯಾವುದೇ ಜಾತಿಮತದ ತಾರತಮ್ಯವನ್ನು ನೋಡದೆ ಎಲ್ಲರಿಗೂ ಎಲ್ಲವನ್ನೂ ಸಮಾನತೆಯಿಂದ ನೀಡುತ್ತದೆ. ಪ್ರಕೃತಿಗೆ ಯಾವುದೇ ದ್ವೇಷವಾಗಲೀ ಜಾತಿಯ ವೈಷಮ್ಯವಾಗಲೀ, ಅಸೂಯೆಯಾಗಲೀ ಇರುವುದಿಲ್ಲ. ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಪ್ರಕೃತಿಯನ್ನು ನಾಶಮಾಡುತ್ತಿದ್ದಾನೆ. ಬೆಟ್ಟ ಗುಡ್ಡಗಳನ್ನು ಒಡೆದುಹಾಕುತ್ತಿದ್ದಾನೆ. ಮರಗಳನ್ನು ಮಾರಣ ಹೋಮ ಮಾಡುತ್ತಿದ್ದಾನೆ. ಮನುಷ್ಯನಿಗೆ ಬೇಕಾದಂತಹ ಆಹಾರ, ನೀರು ಮತ್ತು ಪ್ರಾಣಿ ಪಕ್ಷಿಗಳಿಗೆ, ದನಕರುಗಳಿಗೆ ಬೇಕಾಗುವ ನೀರು ಮತ್ತು ಆಹಾರವನ್ನು ಪ್ರಕೃತಿಯಿಂದಲೇ ಪಡೆಯಲಾಗುತ್ತಿದೆ.

ಇದೆಲ್ಲಾ ಸಿಗಬೇಕಾದರೆ ಸಮೃದ್ಧವಾಗಿ ಮಳೆ ಬಂದರೆ ಮಾತ್ರ ಸಾಧ್ಯ. ಕೃತಕ ನೀರು, ಕೃತಕ ಗಾಳಿಯಿಂದ ಮನುಷ್ಯ ತಾತ್ಕಾಲಿಕವಾಗಿ ಬದುಕಲು ಮಾತ್ರ ಸಾಧ್ಯ, ಆದರೆ ಪ್ರಕೃತಿ ನೀಡುವ ಸೌಲಭ್ಯಗಳು ಮನುಷ್ಯನ ಬದುಕಿಗೆ ಸಹಾಯವಾಗುತ್ತದೆ. ಮನುಷ್ಯ ಎಲ್ಲಿಯವರೆಗೆ ಇದನ್ನು ಅರ್ಥಮಾಡಿ ಕೊಳ್ಳುವುದಿಲ್ಲವೋ ಅಲ್ಲಿಯ ತನಕ ಪ್ರಕೃತಿಯ ಮೇಲೆ ಬಲವಾದ ಪೆಟ್ಟು ಬೀಳುತ್ತಲೇ ಇರುತ್ತದೆ. ಈ ಹಿಂದೆ ಬೆಟ್ಟಗುಡ್ಡಗಳಲ್ಲಿ ವಾಸಿಸುತ್ತಿದ್ದ ಋಷಿ ಮುನಿಗಳು, ಆದಿವಾಸಿಗಳು, ಪ್ರಕೃತಿಯಲ್ಲಿ ಸಿಗುವ ಶುದ್ಧವಾದ ಗಾಳಿ, ಆಹಾರ, ನೀರನ್ನು ಉಪಯೋಗಿಸಿಕೊಂಡು ನೂರಾರು ವರ್ಷಗಳ ಕಾಲ ಆರೋಗ್ಯವಾಗಿರುತ್ತಿದ್ದರು ಮತ್ತು ಪ್ರಕೃತಿಯಿಂದ ಸಿಗುತ್ತಿರುವ ಸಂತೋಷ ಮತ್ತು ಆನಂದವನ್ನು ಅನುಭವಿಸಿಕೊಂಡು ಬದುಕುತ್ತಿದ್ದರು.



**ಆರ್. ರಂಗನಾಥ್**
ಬೆಂಗಳೂರು.
ಮೊ : 7829999060

ಪ್ರಕೃತಿಯಲ್ಲಿ ದೊರಕುತ್ತಿರುವ ಸಂಪನ್ಮೂಲಗಳ ಉಪಯೋಗವನ್ನು ಪಡೆದುಕೊಂಡ ಮನುಷ್ಯ ಪ್ರಕೃತಿಯನ್ನೇ ನಾಶಮಾಡಲು ಹೊರಟಿರುವುದು ಎಷ್ಟರ ಮಟ್ಟಿಗೆ ಧರ್ಮ? ದಿನೇದಿನೇ ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಮನುಷ್ಯನ ಮೂಲಭೂತ ಸೌಕರ್ಯಗಳ ಪೂರೈಕೆಗಾಗಿ ಕಾಡಿನ ಸಂಪತ್ತನ್ನು ನಾಶಮಾಡುತ್ತಿದ್ದಾನೆ. ದಟ್ಟವಾದ ಅರಣ್ಯವನ್ನು ಕಡಿದು ಅಲ್ಲಿ ಮನೆಗಳನ್ನು ರೆಸಾರ್ಟ್ ಮತ್ತು ಪ್ರವಾಸಿ ಮಂದಿರಗಳನ್ನು ನಿರ್ಮಿಸುತ್ತಿದ್ದಾನೆ. ವಿಷದ ಅನಿಲ, ವಿಷದ ಮಣ್ಣು ಹಾಗೂ ವಿಷದ ಆಹಾರ ಪದಾರ್ಥಗಳಿಂದ ಮನುಷ್ಯ ಆರೋಗ್ಯವಾಗಿರಲು ಹೇಗೆ ತಾನೆ ಸಾಧ್ಯ? ಪ್ರಕೃತಿಯ ನಡುವೆ ನಾವು ಬದುಕುತ್ತಿದ್ದೇವೆ. ಈ ಪ್ರಕೃತಿ ನಮಗೆ ಎಲ್ಲವನ್ನೂ ನೀಡುತ್ತಿದೆ ಇದನ್ನು ನಾವು ಉಳಿಸಿ ಬೆಳೆಸಿಕೊಂಡು ಸಂರಕ್ಷಿಸಿಕೊಂಡು ಹೋಗಬೇಕೆಂಬ ಅರಿವು ಮನುಷ್ಯನಿಗಿರಬೇಕು. ಈ ಪ್ರಕೃತಿಯ ನಡುವೆ ಬದುಕುತ್ತಿರುವ ಮನುಷ್ಯ ತನ್ನನ್ನು ತಾನು ಪ್ರಶ್ನಿಸಿಕೊಳ್ಳಬೇಕಾಗುತ್ತದೆ.

ನಾನು ಯಾರಿಗಾದರೂ ತೊಂದರೆ ಕೊಡುತ್ತಿದ್ದೇನೆಯೇ? ದ್ವೇಷ ಅಸೂಯೆ ಸಾಧಿಸುತ್ತಿದ್ದೇನೆಯೇ? ನನ್ನಲ್ಲಿ ನಿಸ್ವಾರ್ಥ, ಧರ್ಮ, ಸಹಕಾರ, ಸೌಹಾರ್ದತೆ ಇದೆಯೇ? ಮತ್ತು ನಾನು ಮಾಡುತ್ತಿರುವ ನನ್ನ ಕರ್ತವ್ಯಗಳಲ್ಲಿ ಪ್ರಾಮಾಣಿಕತೆ ಇದೆಯೇ? ಎಂದು ತನ್ನ ಮನಸ್ಸನ್ನು ತಾನು ಪ್ರಶ್ನಿಸಿಕೊಂಡು ಒಳ್ಳೆಯ ಭಾವನೆಗಳನ್ನು ಅಳವಡಿಸಿಕೊಂಡಾಗ ಇನ್ನೊಬ್ಬರನ್ನು ಹೋಗಿ ನ್ಯಾಯ ಕೇಳುವ ಅವಶ್ಯಕತೆ ಇರುವುದಿಲ್ಲ.

ಸಾರ್ವಜನಿಕರು ಜನಪ್ರತಿನಿಧಿಗಳು, ಅಧಿಕಾರಿಗಳು ಈ ಸೂಕ್ಷ್ಮತೆಯನ್ನು

ಅರ್ಥಮಾಡಿಕೊಳ್ಳುವುದರ ಜೊತೆಗೆ ಪ್ರಕೃತಿಗೆ ತೊಂದರೆಕೊಡಬಾರದು ಮತ್ತು ನಾಶಗೊಳಿಸಬಾರದು ಎಂಬ ಅರಿವು ಬಹಳ ಮುಖ್ಯ. ಪ್ರಕೃತಿ ಸದಾ ಶಾಂತವಾಗಿರುತ್ತದೆ, ಒಂದೊಂದು ಸಾರಿ ವಿಕೋಪಗೊಂಡರೆ ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಪ್ರಕೃತಿ ದೇವರಿದ್ದಂತೆ ಇಂತಹ ಪ್ರಕೃತಿಯನ್ನು ನಾಶಗೊಳಿಸಿ ಮತ್ತೊಂದು ದೇವರ ಗುಡಿಯನ್ನು ಕಟ್ಟುವುದು ಅರ್ಥವಿಲ್ಲದ್ದು. ಹಸಿದು ಬಂದವನಿಗೆ ಅನ್ನ ನೀಡದೆ ದೇವರಿಗೆ ನೈವೇದ್ಯ ಎಂಬ ಆಚರಣೆಗಳು ಬದಲಾಗಬೇಕಾಗಿದೆ. ಮಾಡಬಾರದ ಪಾಪಗಳನ್ನು ಮಾಡಿ ಗಂಗೆಯಲ್ಲಿ ಮೂರು ಬಾರಿ ಮುಳುಗಿದರೆ ತನ್ನ ಪಾಪಗಳು ಕಳೆಯುತ್ತವೆ ಎಂಬ ಭ್ರಮೆಯಿಂದ ಮನುಷ್ಯ ಹೊರಬರಬೇಕು. ನೀನು ಏನಾದರೂ ಪಾಪಕರ್ಮಗಳನ್ನು ಮಾಡಿ ನಂತರ ನನ್ನ ಬಳಿಗೆ ಬಾ ನೀನು ಮಾಡಿರುವ ಪಾಪಕರ್ಮಗಳನ್ನು ನಾನು ತೊಳೆಯುತ್ತೇನೆ ಎಂದು ಯಾವ ದೇವರೂ ಹೇಳಿಲ್ಲ. ಅದರ ಬದಲು ಹಸಿದವನಿಗೆ ಒಂದು ತುತ್ತು ಅನ್ನ ನೀಡಿದರೆ ಅದೇ ದೇವರಿಗೆ ತೃಪ್ತಿಯಾಗುತ್ತದೆ. ಅಭಿವೃದ್ಧಿ ಮಾಡುವ ನೆಪದಲ್ಲಿ ಪ್ರಕೃತಿಯನ್ನು ನಾಶಮಾಡಿದರೆ ಅಭಿವೃದ್ಧಿಗಿಂತ ತೊಂದರೆಗಳೇ ಹೆಚ್ಚು ಪ್ರಕೃತಿಯನ್ನು ನಾಶಗೊಳಿಸಿದರೆ ಅದರ ನಡುವೆ ಬದುಕುತ್ತಿರುವ ಪ್ರಾಣಿ ಪಕ್ಷಿಗಳ ಬದುಕಿಗೆ ಬಹುದೊಡ್ಡ ಪೆಟ್ಟು ಬೀಳುತ್ತದೆ.

ಈಗಾಗಲೇ ಪ್ರಾಣಿಗಳು ಹಳ್ಳಿ ಮತ್ತು ನಗರಗಳ ಕಡೆ ಹೆಜ್ಜೆ ಹಾಕುತ್ತಿವೆ. ನಮ್ಮ ವಾಸಸ್ಥಾನಕ್ಕೆ ನೀವು ಬಂದು ತೊಂದರೆ ಮಾಡಿದರೆ ನಿಮ್ಮ ವಾಸಸ್ಥಾನಕ್ಕೆ ನಾವೂ ಕೂಡ ಬಂದು ತೊಂದರೆ ಮಾಡುತ್ತೇವೆ ಎಂದು ತಮ್ಮ ಹಕ್ಕನ್ನು ಕೇಳುತ್ತವೆ. ಪ್ರಕೃತಿಯ ನಡುವೆ ಆನಂದವಾಗಿ ಸ್ವತಂತ್ರವಾಗಿ ಬದುಕುತ್ತಿರುವ ಪ್ರಾಣಿ ಪಕ್ಷಿಗಳಿರುವ ಜಾಗಕ್ಕೆ ಕೊಡಲಿಪೆಟ್ಟು ಬಿದ್ದರೆ ಅವು ಎಲ್ಲಿಗೆ ಹೋಗಬೇಕು? ಅನಿವಾರ್ಯವಾಗಿ ಅವು ಹಳ್ಳಿ ನಗರಗಳ ಕಡೆ ಹೆಜ್ಜೆ ಹಾಕುತ್ತಿವೆ. ಆದ್ದರಿಂದ ಪ್ರಕೃತಿಯನ್ನು ನಾವು ಅದರ ಪಾಡಿಗೆ ಅದನ್ನು ಬಿಟ್ಟು ವನ್ಯಜೀವಿಗಳು ಮತ್ತು ಆದಿವಾಸಿಗಳನ್ನು ಪ್ರಕೃತಿಯ ನಡುವೆ ಸ್ವತಂತ್ರವಾಗಿ ಬದುಕಲು ಬಿಡಬೇಕು. ಪ್ರಕೃತಿ ತನ್ನ ಪಾಡಿಗೆ ತಾನಿದ್ದುಕೊಂಡು ಯಾರ ಆದೇಶಕ್ಕೂ ಕಾಯದೆ ತನ್ನ ಕರ್ತವ್ಯಗಳನ್ನು ಸದ್ದಿಲ್ಲದೆ ಮಾಡುತ್ತಿರುತ್ತದೆ.

ಪ್ರಾಣಿ ಪಕ್ಷಿಗಳು, ಜೇನುನೊಣಗಳು, ಬೀಜಬಿತ್ತನೆ ಪರಾಗಸ್ಪರ್ಶದಂತಹ ಕೆಲಸಗಳನ್ನು ಸಮಯ ಸಂದರ್ಭಕ್ಕನುಗುಣವಾಗಿ ಮಾಡುತ್ತಿರುತ್ತವೆ. ಇದರಿಂದ ವೃಕ್ಷ ಸಂಪತ್ತು ವೃದ್ಧಿಗೊಳ್ಳುತ್ತದೆ. ಪ್ರಕೃತಿಯಿಂದಾಗಲೀ ಪ್ರಾಣಿಪಕ್ಷಿಗಳಿಂದಾಗಲೀ ತೊಂದರೆ ಇಲ್ಲವೆಂದಾದಮೇಲೆ ಅವುಗಳಿಗೆ ನಾವೇಕೆ ತೊಂದರೆ ಕೊಡಬೇಕು ಅವುಗಳು ಮಾಡುವ ಕರ್ತವ್ಯಗಳನ್ನು ನೋಡಿ ಮನುಷ್ಯ ಕಲಿಯಬೇಕೇ ಹೊರತು ತನ್ನ ಸ್ವಾರ್ಥಕ್ಕಾಗಿ ಅವುಗಳನ್ನು ನಾಶಗೊಳಿಸುವುದು ನ್ಯಾಯಸಮ್ಮತವಲ್ಲ.

ಮನುಷ್ಯನು ತನ್ನ ಸ್ವಾರ್ಥಕ್ಕಾಗಿ ಈಗಾಗಲೇ ಪ್ರಕೃತಿಯನ್ನು ಸಾಕಷ್ಟು ಹಾಳು ಮಾಡಿದ್ದಾನೆ ಇನ್ನಾದರೂ ಅರಿತುಕೊಳ್ಳದೇ ಹೋದರೆ ಪ್ರಕೃತಿ ನಾಶವಾಗುವುದರ ಜೊತೆಗೆ ಸಕಲ ಜೀವಸಂತತಿಯೂ ನಾಶಹೊಂದುತ್ತದೆ. ಇದರಿಂದ ಮನುಷ್ಯನ ವಿನಾಶಕ್ಕೆ ಕಾರಣವಾಗುತ್ತದೆ. ಆದ್ದರಿಂದ ಪ್ರಕೃತಿಯ ವಿಷಯದಲ್ಲಾಗಲೀ ಜೀವ ಸಂಕುಲಗಳ ವಿಷಯದಲ್ಲಾಗಲೀ ಯಾರೂ ರಾಜಕಾರಣ ಮಾಡುವುದು ಸರಿಯಲ್ಲ ಎಲ್ಲರೂ ಪ್ರಕೃತಿಯ ನಡುವೆಯೇ ಬದುಕುತ್ತಿರುವುದು ಪ್ರಕೃತಿ ನಮಗೆ ತಾಯಿಯಿದ್ದಂತೆ ಪ್ರಕೃತಿ ನೀಡುವ ಗಾಳಿ, ಬೆಳಕು, ನೀರು ಎಲ್ಲರಿಗೂ ಸಮಾನವಾಗಿ ನೀಡುತ್ತಿದೆ ಅಂದಮೇಲೆ ನಾವೆಲ್ಲರೂ ಕೂಡ ಸಮಾನತೆಯಿಂದ ಒಟ್ಟುಗೂಡಿ ಪ್ರಕೃತಿಯನ್ನು ಉಳಿಸಿ ಬೆಳೆಸುವುದಕ್ಕಾಗಿ ಸಹಕರಿಸುವುದು ನಮ್ಮ ಧರ್ಮ.

---

ಇದು ನಿಲಯ ಮಾತ್ರವಲ್ಲ ಆಲಯ
ನನ್ನಂತ ಎಷ್ಟೋ ವಿದ್ಯಾರ್ಥಿಗಳ ಬದುಕಿಗೆ ಆಶಯ,
ಊರು ಮನೆಯ ಬಿಟ್ಟು
ಓದುವ ಛಲವ ತೊಟ್ಟು
ಬಂದ ಮನಸ್ಸಿಗೆ ನೆಮ್ಮದಿಯ ಆಶ್ರಯ

ಇದು ನಿಲಯ ಮಾತ್ರವಲ್ಲ ಆಲಯ
ನನ್ನಂತ ಎಷ್ಟೋ ವಿದ್ಯಾರ್ಥಿಗಳ ಬದುಕಿಗೆ ಆಶಯ,
ಕಂಬಿ ಸಿದ್ಧರಾಮಣ್ಣ ಕನಸಿನ ವಿದ್ಯಾರ್ಥಿನಿಲಯ
ಇಂದು ಅವರ ನೆನಪಿನ ದೇವಾಲಯ,

ನಿತ್ಯ ಊಟ ನಿತ್ಯ ಪಾಠ
ನಡುವೆ ಬರದಿರಲಿ ಚಟ
ಓದು ಬರಹ ಬಿಟ್ಟು
ಬೇರೇನು ಸುಳಿಯದಿರಲಿ ನಮ್ಮ ತಟ

ಇದು ನಿಲಯ ಮಾತ್ರವಲ್ಲ ಆಲಯ
ನನ್ನಂತ ಎಷ್ಟೋ ವಿದ್ಯಾರ್ಥಿಗಳ ಬದುಕಿಗೆ ಆಶಯ.

– **ಅನುಪ್ರಸಾದ್,** ಹಾರೋನಹಳ್ಳಿ.

# ಪಲ್ಲವರು

ಪಲ್ಲವರ ಚರಿತ್ರೆ ಪ್ರಾರಂಭವಾಗುವುದು ಅವರು ಶಾತವಾಹನರ ಸಾಮಂತರಾಗಿ ಶಾತವಾಹನ ಸಾಮ್ರಾಜ್ಯದ ದಕ್ಷಿಣ ಭಾಗವಾದ ಅಮರಾವತಿಯಿಂದ ಕಂಚಿಯವರೆಗಿನ ಪ್ರದೇಶವನ್ನು ಆಳತೊಡಗಿದಾಗ ಕ್ರಿ.ಶ. ಮೂರನೆಯ ಶತಮಾನದ ಹೊತ್ತಿಗೆ ಶಾತವಾಹನ ಸಾಮ್ರಾಜ್ಯದ ಅಂತ್ಯವಾದ ಮೇಲೆ ಪಲ್ಲವರು ತಾವು ಆಳುತ್ತಿದ್ದ ಭಾಗಗಳಲ್ಲಿಯೇ ಸ್ವತಂತ್ರ ಆಳ್ವಿಕೆ ಪ್ರಾರಂಭಿಸುತ್ತಾರೆ. ಈ ಭಾಗವು ತೊಂಡೈಮಂಡಲ ಹೆಸರಿನಿಂದ ಗುರುತಿಸಿಕೊಂಡು ಉತ್ತರ ಪಿನಾಕಿನಿ ಮತ್ತು ದಕ್ಷಿಣ ಪಿನಾಕಿನಿ ನದಿಗಳ ನಡುವಿನ ಭೂಭಾಗವನ್ನು ಒಳಗೊಂಡಿರುತ್ತದೆ. ಅದರ ಜೊತೆಗೆ ಉತ್ತರ ಭಾಗದಲ್ಲಿ ಪುರಾತನ ನಗರವಾದ ಅಮರಾವತಿ(ಧಾನ್ಯ ಕಟಕ)ಯೂ ಪಲ್ಲವರ ರಾಜ್ಯದಲ್ಲಿ ಸೇರಿರುತ್ತದೆ. ತೊಂಡೈಮಂಡಲವು ಮೊದಲಿಗೆ ಕರಿಕಾಲಚೋಳನ ಕಾಲದಲ್ಲಿ ಚೋಳರಾಜ್ಯದ (early cholas) ಉತ್ತರ ಪ್ರಾಂತ ವಾಗಿತ್ತು, ಚೋಳ ಸಾಮ್ರಾಜ್ಯದ ಅವನತಿಯ ನಂತರ ಅದು ಶಾತವಾಹನರ ಸಾಮ್ರಾಜ್ಯದೊಳಕ್ಕೆ ಸೇರಿಸಿಕೊಂಡಿತ್ತು.

ಶಾತವಾಹನ ಸಾಮ್ರಾಜ್ಯದ ದಕ್ಷಿಣ ಭಾಗವು ಶಾತವಾಹನ ಚಕ್ರವರ್ತಿ ಯಜ್ಞಶ್ರೀ ಕಾಲದಲ್ಲಿ ಪಲ್ಲವರ ಬಪ್ಪದೇವನಿಗೆ ಸಾಮಂತರಾಜ್ಯವಾಗಿ ಸಿಕ್ಕಿತ್ತು. ಪಲ್ಲವ ಪ್ರಾಕೃತ ಲಿಪಿಯ ಶಾಸನಗಳು ಹೇಳುವಂತೆ ಬಪ್ಪದೇವ ಮತ್ತು ಅವನ ನಂತರದ ಎರಡು ತಲೆಮಾರುಗಳು ಧಾನ್ಯಕಟಕ ಪ್ರದೇಶದ ಅಡವಿಗಳನ್ನು ಕಡಿದು ವ್ಯವಸಾಯ ಭೂಮಿಯಾಗಿ ಪರಿವರ್ತನೆ ಮಾಡಿಸಿದ್ದರು. ವ್ಯವಸಾಯಕ್ಕೆ ಅನುಕೂಲ ಆಗುವಂತೆ ಕೆರೆಗಳನ್ನು ನಿರ್ಮಿಸಿದ್ದರು. ಕ್ರಿ.ಶ. 350ರ ಸಮಯದಲ್ಲಿ ಸಮುದ್ರ ಗುಪ್ತನು ದಕ್ಷಿಣ ಭಾರತದ ಮೇಲೆ ದಂಡೆತ್ತಿ ಬಂದಾಗ ಪಲ್ಲವ ರಾಜ್ಯವನ್ನು ಕಂಚಿಯಿಂದ ವಿಷ್ಣುಗೋಪ ಆಳುತ್ತಿದ್ದನು. ವಿಷ್ಣುಗೋಪನು ಸಮುದ್ರಗುಪ್ತನಿಗೆ ಸೋತಮೇಲೆ ವೀರಕುರ್ಚಪಲ್ಲವನಿಂದ ಹೊಸದಾಗಿ ಪಲ್ಲವ ರಾಜ್ಯದ ಆಳ್ವಿಕೆ ಪ್ರಾರಂಭವಾಯಿತು. ವೀರಕುರ್ಚಪಲ್ಲವನು ಶಿವ ಸ್ಕಂದ ನಾಗನ ಮಗಳನ್ನು ವಿವಾಹ ಆಗಿದ್ದಿದ್ದರಿಂದ ಅವನಿಗೆ ನಾಗರ ಬೆಂಬಲವೂ ಸಿಕ್ಕಿತು.

ವೀರಕುರ್ಚ ಪಲ್ಲವ ಮತ್ತು ಅವನ ಮಗನಾದ ಸ್ಕಂದವರ್ಮ ಪಲ್ಲವರು ಅದುವರೆಗೆ ಕಳೆದುಕೊಂಡಿದ್ದ ಪ್ರದೇಶಗಳನ್ನು ಮತ್ತೆ ಗಳಿಸಿಕೊಂಡರು. ಈ ಸಮಯದಲ್ಲಿ ತಲಕಾಡು ಗಂಗರು ಪಲ್ಲವರ ಸಾಮಂತರಾದರು. ಚೋಳರ ವಶದಲ್ಲಿ ಇದ್ದ ಕಂಚಿಯನ್ನು ಪುನರ್ವಶಪಡಿಸಿಕೊಳ್ಳುವುದೇ ಅಲ್ಲದೆ ಆನಂತರ ಬಂದ ಪಲ್ಲವ ರಾಜರು ಚೋಳ ರಾಜ್ಯವನ್ನು ದಕ್ಷಿಣದವರೆಗೂ ಗೆದ್ದುಕೊಂಡರು. ಕ್ರಮೇಣ ಈ ಭಾಗಗಳ ಮೇಲಿನ ಹಿಡಿತ ಸಡಿಲವಾದರೂ ಆರನೇ ಶತಮಾನದ ಕಡೆಯ ಭಾಗದಲ್ಲಿ ಸಿಂಹವರ್ಮನ್ ಮತ್ತು ಅವನ ವಾರಸುದಾರರು ಆ ಭಾಗಗಳನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡು ಪಲ್ಲವಸಾಮ್ರಾಜ್ಯದಿಂದ ಆಡಳಿತ ನಡೆಸಿದರು.

ಏತನ್ಮಧ್ಯೆ ಕದಂಬರ ಮಯೂರವರ್ಮನು ಪ್ರಬಲನಾಗಿ ಶ್ರೀಪರ್ವತದ (ಶ್ರೀಶೈಲ) ಪಶ್ಚಿಮ ಮತ್ತು ಉತ್ತರದ ಪಲ್ಲವ ಸಾಮ್ರಾಜ್ಯದ ಭಾಗಗಳನ್ನು ತನ್ನ ಅಧೀನಕ್ಕೆ ತೆಗೆದುಕೊಂಡನು. ನಾಲ್ಕು ಮತ್ತು ಐದನೇ ಶತಮಾನಗಳಲ್ಲಿ ಕದಂಬರಿಗೂ ಪಲ್ಲವರಿಗೂ ನಡುವೆ ಕದನಗಳು ಸಾಗಿಯೇ ಇದ್ದವು. ಐದನೇ ಶತಮಾನದಲ್ಲಿ ಬಾದಾಮಿಯ ಚಾಲುಕ್ಯರು ಬಂದ ನಂತರ ಕದಂಬರು ಹಿನ್ನೆಲೆಗೆ ಸರಿದು ಸಾಮ್ರಾಜ್ಯ ವಿಸ್ತರಣೆಗಾಗಿ ಚಾಲುಕ್ಯ-ಪಲ್ಲವರ ನಡುವೆ ವೈರತ್ವ ಬೆಳೆಯಿತು. ಪಲ್ಲವ ಸಾಮ್ರಾಜ್ಯದ ಉತ್ತರ ಭಾಗವಾದ ವೆಂಗಿಯು ಶಾಶ್ವತವಾಗಿ ಪಲ್ಲವರ ಕೈತಪ್ಪಿತು. ಕ್ರಿ.ಶ.610ರಲ್ಲಿ ಇಮ್ಮಡಿ ಪುಲಿಕೇಶಿಯು ಪಲ್ಲವರ ಮಹೇಂದ್ರವರ್ಮನಿಂದ ವೆಂಗಿಯನ್ನು ಕಿತ್ತುಕೊಂಡು ತನ್ನ ತಮ್ಮ ಕುಬ್ಜ ವಿಷ್ಣುವರ್ಧನನ್ನು ಅದಕ್ಕೆ ರಾಜನನ್ನಾಗಿ ಮಾಡಿ ಪೂರ್ವ ಚಾಲುಕ್ಯ ಸಾಮ್ರಾಜ್ಯದ ಆರಂಭಕ್ಕೆ ಕಾರಣನಾದನು.

ಹೀಗಾಗಿ ಪಲ್ಲವರು ಉತ್ತರದಲ್ಲಿ ತಮಗಾದ ರಾಜ್ಯನಷ್ಟವನ್ನು ದಕ್ಷಿಣದಕಡೆ ತುಂಬಿಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿ ಎದುರಾಯಿತು. ಈ ವಿಸ್ತರಣೆಯಿಂದ ದಕ್ಷಿಣದ ರಾಜರು ನಿರ್ನಾಮವಾದರು, ಕಾವೇರಿಯ ಜಲಾವೃತವಾದ ಚೋಳರಾಜ್ಯವನ್ನು ಪಲ್ಲವರ ಸಿಂಹ ವಿಷ್ಣುವು ಆಕ್ರಮಿಸಿಕೊಂಡನು. ಪುಲಿಕೇಶಿಯು ವೆಂಗಿಯನ್ನು ಆಕ್ರಮಿಸಿಕೊಂಡಿದ್ದಕ್ಕೆ ಪ್ರತೀಕಾರವಾಗಿ ಪಲ್ಲವರ ಒಂದನೇ ನರಸಿಂಹ ವರ್ಮನು ಕ್ರಿ.ಶ. 642ರಲ್ಲಿ ಚಾಲುಕ್ಯರ ರಾಜಧಾನಿ ಬಾದಾಮಿಯನ್ನು ಸುಟ್ಟುಹಾಕಿದನು. ಈ ವೈರವು ಎರಡೂ ರಾಜವಂಶಗಳ ನಡುವೆ ಕಾಲಕ್ರಮೇಣ ಹೆಚ್ಚುತ್ತಲೇ ಹೋಗಿ ನಿರಂತರ ಯುದ್ಧಗಳಿಗೆ ಕಾರಣವಾಯಿತು. ಉತ್ತರಾಧಿಕಾರಿಗಳ ಬದಲಾವಣೆಯಲ್ಲಿ ನಂದಿವರ್ಮ ಪಲ್ಲವಮಲ್ಲನು ಎಂಟನೇ ಶತಮಾನದ ಎರಡನೇ ದಶಕದಲ್ಲಿ ಪಲ್ಲವ ಸಿಂಹಾಸನ ಏರಿ ಅರವತ್ತೆರಡು ವರ್ಷಗಳ ಕಾಲ ರಾಜ್ಯಭಾರ ನಡೆಸಿದ. ಅವನು ಇತರರಿಂದ ಅಲ್ಲದೆ ಪಲ್ಲವ ವಂಶೀಕನೇ ಆದ ಚಿತ್ರಮಾಯನಿಂದಲೂ ವಿರೋಧ ಎದುರಿಸುತ್ತಲೇ ಸಾಗಿದನು. ಕ್ರಿ.ಶ.741ರಲ್ಲಿ ಚಾಲುಕ್ಯರ ಎರಡನೇ

ವಿಕ್ರಮಾದಿತ್ಯನಿಂದ ಪರಾಜಿತನಾಗಿ ರಾಜಧಾನಿ ಕಂಚಿಯಿಂದಲೂ ಹೊರಗೆ ಉಳಿಯಬೇಕಾಯ್ತು. ಕಡೆ ಕಡೆಯಲ್ಲಿ ಬಲವರ್ಧನೆ ಮಾಡಿಕೊಂಡು ಗಂಗರನ್ನು, ಬಾಣರನ್ನು ತನ್ನ ಅಧೀನಕ್ಕೆ ತೆಗೆದುಕೊಂಡನು.

ಎಂಟನೇ ಶತಮಾನದ ಮಧ್ಯ ಭಾಗದಲ್ಲಿ ರಾಷ್ಟ್ರಕೂಟರು ಪಶ್ಚಿಮ ಚಾಲುಕ್ಯರನ್ನು ಹಿಂದೆ ಸರಿಸಿ ತಾವು ಮುನ್ನೆಲೆಗೆ ಬಂದಿದ್ದು ಪಲ್ಲವರ ಪಾಲಿಗೆ ನಿರಾಳದ ಸಂಗತಿ ಏನೂ ಆಗಲಿಲ್ಲ. ಚಾಲುಕ್ಯ-ಪಲ್ಲವ ವೈರವು ರಾಷ್ಟ್ರಕೂಟ-ಪಲ್ಲವ ವೈರವಾಗಿ ಮಾರ್ಪಾಡು ಆಯಿತು ಅಷ್ಟೇ. ಅದು ಹಾಗೆಯೇ ಮುಂದಿನ ಎರಡು ಶತಮಾನಗಳ ಕಾಲ ಮುಂದುವರೆಯಿತು. ಇಬ್ಬರ ನಡುವೆ ಕಾಲಕಾಲಕ್ಕೆ ನಡೆದ ಯುದ್ಧಗಳು ಇಬ್ಬರನ್ನೂ ಬಲಹೀನ ಮಾಡಿದ ಪರಿಣಾಮವಾಗಿ ಕ್ರಿ.ಶ. 973ರಲ್ಲಿ ಕಲ್ಯಾಣಿ ಚಾಲುಕ್ಯರ ಎರಡನೇ ತೈಲಪನಿಗೆ ಸೋತು ರಾಷ್ಟ್ರಕೂಟ ಸಾಮ್ರಾಜ್ಯವು ಅಂತ್ಯವಾಯಿತು. ರಾಷ್ಟ್ರಕೂಟರು ಪಲ್ಲವರ ಮೇಲೆ ತಮ್ಮ ಮೊದಲ ದಂಡಯಾತ್ರೆಯನ್ನು ಎರಡನೇ ಗೋವಿಂದನ ಮುಂದಾಳತ್ವದಲ್ಲಿ ನಡೆಸಿ ನಂದಿವರ್ಮ ಪಲ್ಲವಮಲ್ಲನ ಮಗ ದಂತಿವರ್ಮನಿಂದ ಕಪ್ಪಕಾಣಿಕೆ ಪಡೆದರು. ಇದೇ ಸಮಯದಲ್ಲಿ ದಕ್ಷಿಣದಲ್ಲಿ ಪಾಂಡ್ಯರು ಪ್ರಬಲರಾಗಿ ವರಗುಣ ಪಾಂಡ್ಯನು ಚೋಳರನ್ನು ಸೋಲಿಸಿ ಪಲ್ಲವ ರಾಜಧಾನಿ ಕಂಚಿಯ ಅಂಚಿನವರೆಗೂ ಬಂದಿದ್ದನು. ಆದರೂ ದಂತಿವರ್ಮನ ಆಳ್ವಿಕೆಯು ಅರ್ಧಶತಮಾನದ ಕಾಲ, ಅಂದರೆ ಕ್ರಿ.ಶ. 830ರವರೆಗೂ ಸಾಗಿತು. ಆ ಸಮಯದಲ್ಲಿ ಬಾಣರ ವಿಜಯಾದಿತ್ಯನು ಪಲ್ಲವ ರಾಜ್ಯದ ಉತ್ತರ ಭಾಗದ ಸಾಮಂತನಾಗಿ ಆಳ್ವಿಕೆ ನಡೆಸಿದನು. ದಂತಿವರ್ಮನ ನಂತರ ಬಂದ ಪಲ್ಲವ ರಾಜರು ಪಾಂಡ್ಯರನ್ನು ಗೆದ್ದು ದಕ್ಷಿಣದ ಕಡೆ ತಮ್ಮ ಪ್ರಾಬಲ್ಯ ಹೆಚ್ಚಿಸಿಕೊಂಡರು, ಅದೇ ಸಮಯದಲ್ಲಿ ಮುತ್ತುರಾಯರು ಕೂಡಾ ಪಲ್ಲವರ ಅಧೀನರಾದರು. ಮುಂದೆ ಪಲ್ಲವ ರಾಜ್ಯಕ್ಕೆ ಕಷ್ಟ ಒದಗಿದ್ದು ಅಪರಾಜಿತ ಪಲ್ಲವನ ಕಾಲದಲ್ಲಿ. ಈತನು ಶಾಖಾಗಂಗರ ಒಂದನೇ ಪೃಥ್ವೀಪತಿ ಮತ್ತು ಚೋಳರ ಆದಿತ್ಯನ ಸಹಕಾರದಿಂದ ಪಾಂಡ್ಯರ ವಿರುದ್ಧ ನಡೆದ ತಿರುಪುರಂಬಿಯಂ ಯುದ್ಧದಲ್ಲಿ ಜಯ ಸಾಧಿಸುತ್ತಾನೆ (ಆ ಕದನದಲ್ಲಿ ಪೃಥ್ವೀಪತಿಯ ಪ್ರಾಣ ಹೋಗುತ್ತದೆ), ಆದರೆ ಕ್ರಿ.ಶ. 900ರಲ್ಲಿ ಆದಿತ್ಯನು ಕೇರಳದ ಸ್ಥಾಣುರವಿಯ ಜೊತೆಗೂಡಿ ಅಪರಾಜಿತನನ್ನು ಸಿಂಹಾಸನದಿಂದ ಇಳಿಸುವುದರೊಂದಿಗೆ ಪಲ್ಲವಸಾಮ್ರಾಜ್ಯದ ಅಂತ್ಯವಾಗುತ್ತದೆ.

ಹೀಗೆ ಆರನೇ ಶತಮಾನದಲ್ಲಿ ಸಿಂಹ ವಿಷ್ಣುವಿನಿಂದ ಪ್ರಾರಂಭವಾದ ಪಲ್ಲವ ಸಾಮ್ರಾಜ್ಯವು ಕ್ರಿ.ಶ. 900ರ ಸಮಯಕ್ಕೆ ಅಂತ್ಯವಾಗುತ್ತದೆ. ಅನೇಕ ಏಳುಬೀಳುಗಳನ್ನು ಕಂಡ ಪಲ್ಲವರು ಕಡೆಯಲ್ಲಿ ವಿಜಯಾಲಯ ಚೋಳವಂಶದ ಆದಿತ್ಯನಿಗೆ ತಮ್ಮ ಸ್ಥಾನ ತೆರವು ಮಾಡಿಕೊಡುತ್ತಾರೆ. ಆದಾಗ್ಯೂ ಹಲವು ಪಲ್ಲವವಂಶದ ರಾಜರುಗಳು ಹದಿನೇಳನೇ ಶತಮಾನದವರೆಗೂ ಚೋಳರ, ವಿಜಯ ನಗರದವರ ಸಾಮಂತರಾಗಿ, ಕೆಲವೊಮ್ಮೆ ಸ್ವತಂತ್ರರಾಗಿಯೂ ಇತಿಹಾಸದಲ್ಲಿ ಕಾಣಸಿಗುತ್ತಾರೆ. ಆದರೆ ಪಲ್ಲವ ಸಾಮ್ರಾಜ್ಯದ ಗತವೈಭವ ಮತ್ತೆಲ್ಲೂ ಮರುಕಳಿಸುವುದಿಲ್ಲ.

ಪಲ್ಲವರ ಚರಿತ್ರೆಯು ತನ್ನ ಉತ್ತುಂಗದ ಕಾಲದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯತಕ್ಕ ಸಾಧನೆ ಮಾಡಿದೆ. ಮೊತ್ತ ಮೊದಲ ಪಲ್ಲವರಾಜನು ದಂಡಕಾರಣ್ಯವನ್ನು ಕಡಿದು ವ್ಯವಸಾಯ ಯೋಗ್ಯ ಭೂಮಿಯನ್ನು ಅಭಿವೃದ್ಧಿಪಡಿಸಿದ್ದನು. ನೀರಾವರಿ ಸೌಲಭ್ಯಗಳನ್ನು ಕಲ್ಪಿಸಿದ್ದನು. ನಂತರದ ರಾಜರೂ ಬೃಹತ್ ಕೆರೆಗಳನ್ನು ಕಟ್ಟಿಸಿ ನದಿಗಳಿಗೆ ನಾಲೆಗಳನ್ನು ನಿರ್ಮಾಣ ಮಾಡಿಸಿದರು. ಅವರ ಉಪನಾಮವಾದ' ಕಾಡುವೆಟ್ಟಿ' ಅವರು ಕಾಡುಕಡಿದು ನಾಡು ಮಾಡಿದ ಕಾರಣದಿಂದಲೇ ಬಂದಿದೆಯೆಂದು ನಾವು ಭಾವಿಸಬಹುದು. ಆ ಹೆಸರುಗಳು ಈಗಲೂ 'ಕಾರ್ವೆಟಿನಗರ/ಕಾಡುವೆಟ್ಟಿನಗರ' (ಚಿತ್ತೂರು ಜಮೀನ್ದಾರಿ ಕೇಂದ್ರ ನಗರ) ಮತ್ತು 'ಕಾಡುವೆಟ್ಟಿ' (ಚೆನ್ನೈ ಸಮೀಪ ಆವಡಿ ಪೂನಮಲ್ಲಿ ನಡುವೆ ಬರುವ ಗ್ರಾಮ) ಆಗಿ ಅಸ್ತಿತ್ವದಲ್ಲಿ ಇವೆ.

ಪಲ್ಲವ ಸಾಮ್ರಾಜ್ಯದಲ್ಲಿ ಭಕ್ತಿ ಪಂಥದ ಎರಡು ಶಾಖೆಗಳಾದ ಶೈವ ಮತ್ತು ವೈಷ್ಣವ ಧರ್ಮಗಳೂ ಏಳಿಗೆ ಹೊಂದಿದವು, ಜೈನ ಮತ್ತು ಬೌದ್ಧಕ್ಕೂ ಪ್ರೋತ್ಸಾಹ ಸಿಕ್ಕಿತು. ಪಲ್ಲವ ಶಿಲ್ಪಕಲೆಯು ಗುಹಾಂತರ ದೇವಾಲಯಗಳಲ್ಲಿ ತನ್ನದೇ ಆದಂತಹ ಛಾಪು ಮೂಡಿಸಿತು. ವಿಶಿಷ್ಟ ಶೈಲಿಯ ದೇವಾಲಯಗಳು ಕೂಡಾ ನಿರ್ಮಾಣ ಆದವು. ಸಂಗೀತ, ನೃತ್ಯ, ಲಲಿತಕಲೆಗಳೂ ಬೆಳೆದವು. ಸಂಸ್ಕೃತ ಸಾಹಿತ್ಯಕ್ಕೆ ಕೂಡಾ ಮನ್ನಣೆ ಸಿಕ್ಕಿತು. ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿಯೂ ರಾಜ್ಯವು ಬೆಳವಣಿಗೆ ಸಾಧಿಸಿತ್ತು. ಸಾಮ್ರಾಜ್ಯದ ಗಡಿಯು ಬೆಳೆದು ಉತ್ತರ ಆರ್ಕಾಟ್, ದಕ್ಷಿಣ ಆರ್ಕಾಟ್, ಚೆಂಗಲ್ಪಟ್ಟು, ತಿರುಚಿನಾಪಲ್ಲಿ, ಮತ್ತು ತಂಜಾವೂರುಗಳನ್ನು ತನ್ನಲ್ಲಿ ಸೇರಿಸಿಕೊಂಡಿತ್ತು. ಸಾಮಂತ ಪ್ರದೇಶಗಳಾಗಿ ಒರಿಸ್ಸಾ, ನರ್ಮದಾಗಳ ವರೆಗೂ ವಿಸ್ತಾರವಾಗಿತ್ತು. ಪಶ್ಚಿಮಕ್ಕೆ ದಕ್ಷಿಣ ಪಿನಾಕಿನಿ ನದಿಯ ಜಲಾನಯನ ಪ್ರದೇಶವಾದ ಬೆಂಗಳೂರಿನವರೆಗೂ ಪಲ್ಲವ ಸಾಮ್ರಾಜ್ಯ ಹಬ್ಬಿತ್ತು.

**ಸುದರ್ಶನ್ ರೆಡ್ಡಿ ಡಿ.ಎನ್.**
ಬೆಂಗಳೂರು. ಮೊ : 9845142825

# ನೊಳಂಬರ ಕೆರೆಕಟ್ಟೆಗಳು

ಹಿಂದಿನ ಸಂಚಿಕೆಯಿಂದ

ನೊಳಂಬರು ದೇವಾಲಯಗಳಿಗಿಂತ ಹೆಚ್ಚಾಗಿ ಲೋಕೋಪಯೋಗಿ ಕೆಲಸಗಳಿಗೆ ಮಹತ್ವವನ್ನು ಕೊಟ್ಟಿರುವುದನ್ನು ಹಲವಾರು ಗಣ್ಯರು ನೀಡಿರುವ ಕೃತಿ, ಗ್ರಂಥಗಳು ಮತ್ತು ಶಾಸನಗಳನ್ನು ಓದುವ, ನೋಡುವ ಮೂಲಕ ನಾವು ತಿಳಿಯಬಹುದು. ದೇವಾಲಯಗಳ ಪರಿಶುದ್ಧತೆ ನಿರ್ವಹಣೆಗೆ ಕೊಟ್ಟಷ್ಟೆ ಗಮನವನ್ನು ಕೆರೆ-ಕಟ್ಟೆಗಳ ಪರಿಶುದ್ಧತೆಗೆ ಕೊಟ್ಟಿರುವುದು ಸ್ಪಷ್ಟವಾಗಿ ಕಾಣುತ್ತದೆ. ಕಾಲುವೆಗಳನ್ನು ನಿರ್ಮಿಸಿ ಕೆರೆ-ಕಟ್ಟೆ ಬಾವಿಗಳ ಮೂಲಕ ಸಂಪರ್ಕಕೊಟ್ಟಿರುವುದು. ಕೃಷಿಯ ಮೇಲೆ ಕಸುಬಿನ ರೈತಾಪಿ ಜನರಿಗೆ ಅನುಕೂಲ ಮಾಡಿಕೊಟ್ಟಿರುವರು. ಇದು ನೊಳಂಬರ ಆಡಳಿತದ ಮೂಲ ಧ್ಯೇಯವಾಗಿತ್ತೆಂದು ಹಿರಿಯ ಲೇಖಕರುಗಳು ಸ್ಪಷ್ಟವಾಗಿ ತಿಳಿಸಿದ್ದಾರೆ.

ಸಾರ್ವಜನಿಕವಾಗಿ ಮತ್ತು ದನಕರುಗಳು, ಪ್ರಾಣಿ-ಪಕ್ಷಿಗಳ ಕುಡಿಯುವ ನೀರಿನ ಅನುಕೂಲಕ್ಕಾಗಿ ದಾರಿ ಹಾಗೂ ಒಣ ಪ್ರದೇಶದ ಭಾಗಗಳಲ್ಲಿ ಕಲ್ಯಾಣಿಗಳು ಹಾಗೂ ಏತದ ಬಾವಿಗಳನ್ನು ನಿರ್ಮಿಸಿದ್ದು ಇಂದು ಸಹ ಕೆಲಸ್ಥಳಗಳಲ್ಲಿ ಉಪಯುಕ್ತವಾಗಿ ಇವೆ. ಕಾರಣಾಂತರಗಳಿಂದ ಕೆಲವು ಮುಚ್ಚಿಹೋಗಿದ್ದರೆ ಕೆಲವು ಮಳೆಯ ಕೊರತೆಯಿಂದ ಅನುಪಯುಕ್ತವಾಗಿವೆ. ನೀರು ಸಕಲ ಜೀವಸಂಕುಲಕ್ಕೂ ಅವಶ್ಯಕವಾದ ಕಾರಣ ಜಲಸಂರಕ್ಷಣಾ ಕಾರ್ಯ ಅತ್ಯುತ್ತಮ ಮೌಲ್ಯಯುತ ಕಾರ್ಯವೆಂದು ನೊಳಂಬ ಅರಸರು ತಿಳಿದಿದ್ದರು.

ದಾನಗಳಲ್ಲೆಲ್ಲ ಶ್ರೇಷ್ಠವಾದ ದಾನ ಉದಕ (ಜಲ)ದಾನ ಎಂಬುದು ನೊಳಂಬರ ವಾಣಿ, ಕೆರೆ, ಕಟ್ಟೆ, ಬಾವಿಗಳ ಪರಿಶುದ್ಧತೆಯನ್ನು ಹಾಳುಮಾಡುವವರಿಗೆ, ಅಥವಾ ನಾಶಮಾಡುವವರಿಗೆ ಕಠಿಣ ಶಿಕ್ಷೆಯನ್ನು ಕೊಡುತ್ತಿದ್ದರು. ಹಾಗೂ ಸಂಬಂಧಪಟ್ಟ ಊರುಗಳಿಂದ ಅವರಿಗೆ ಹೊರಹಾಕುವ ಭಯವು ಇರುತ್ತಿತ್ತು. ದೇವರು, ದೇವಾಲಯಗಳಿಗೆ ಕೇಡು ಮಾಡಿದ್ದರೆ ಪ್ರಾಪ್ತವಾಗುವಷ್ಟೆ, ಪಾಪವು ಜಲ ಪಾವಿತ್ರತೆ ಕೆಡಿಸಿದವರಿಗೂ ತಟ್ಟುವುದೆಂಬ ಭಯಬೀತಿ ನಂಬಿಕೆಯನ್ನು ಜನರಲ್ಲಿ ಬೆಳೆಸಿದ್ದರು. ನೊಳಂಬರು "ಕೆರೆಯನ್ನು ಹಾಳು ಮಾಡಿದವರನ್ನು ಮಹಾಪಾತಕರೆಂದು" ಕರೆದು ಅಂತಹ ವ್ಯಕ್ತಿಗಳನ್ನು ಬಂಧನದಲ್ಲಿಡುವುದು ಅಥವಾ ಊರುಗಳಿಂದ ದೂರವಿಡುವ ಶಿಕ್ಷೆ ನೀಡುತ್ತಿದ್ದರು. ಈ ಎಲ್ಲಾ ಎಚ್ಚರಿಕೆ ಹಾಗೂ ಜವಾಬ್ದಾರಿ ಚಟುವಟಿಕೆಗಳ ಸಕ್ರೀಯ ಪಾಲನೆಯ ಕಾರಣ ದೇವಾಲಯದಷ್ಟೆ ಕೆರೆಕಟ್ಟೆಗಳು ಪರಿಶುದ್ಧ, ಪುಣ್ಯ, ಪೂಜಾ ಸ್ಥಳಗಳಾಗಿದ್ದವು. ಆದರೆ ಇಂದು ಇದು ಕೇವಲ ಕಲ್ಪನೆಯೇ ಎನ್ನುವಂತಾಗಿದೆ.

ಮೇಲಿನ ಎಲ್ಲ ಪದ್ಧತಿ ಆಚರಣೆಗಳು ನೊಣವಿನಕೆರೆ ಪರಿಸರದಲ್ಲಿ ಇದ್ದಿತೆಂದು ಸಾಕಷ್ಟು ಸಾಕ್ಷ್ಯಾಧಾರಗಳನ್ನು ಕಾಣಬಹುದು. ಪ್ರವಾಸಿಗರಿಗೆ ಅನುಕೂಲಕ್ಕಾಗಿ ಕೆರೆಗಳ ಸನಿಹದಲ್ಲಿ ದೇವಾಲಯ ಹಾಗೂ ಛತ್ರಗಳನ್ನು ನಿರ್ಮಿಸುವ ಪದ್ಧತಿಯನ್ನು ನೊಳಂಬರು ಪಾಲಿಸುತ್ತಿದ್ದರು. ಇದೇ ರೀತಿ ಮಾಡುತ್ತಿದ್ದ ಮತ್ತು ಮಹತ್ಕಾರ್ಯವೆಂದರೆ ಆರೋಗ್ಯ ಕೇಂದ್ರಗಳ ಸ್ಥಾಪನೆ. ಕೆರೆಕಟ್ಟೆ ಪರಿಸರದಲ್ಲಿ ಗುಂಡು ತೋಪು, ಹೂತೋಟಗಳನ್ನು ಬೆಳೆಸಿ ಆ ಹಿತಕರ ಸ್ಥಳಗಳಲ್ಲಿ ಆರೋಗ್ಯ ಕೇಂದ್ರ, ಛತ್ರಗಳನ್ನು ನಿರ್ಮಿಸುತ್ತಿದ್ದರು. ಆರೋಗ್ಯವೇ ಭಾಗ್ಯವೆಂಬುದನ್ನು ಅರಿತ ಪ್ರಭುಗಳು ಈ ಅತ್ಯಗತ್ಯ ಸೇವಾ ಕಾರ್ಯದತ್ತ ಗಮನನೀಡುತ್ತಿದ್ದರು ಎನ್ನುವುದು ತಿಳಿಯುತ್ತದೆ. ನಿರ್ಮಾಣಕ್ಕೆ ಕೊಡುವಷ್ಟೇ ಪ್ರಾಮುಖ್ಯತೆಯನ್ನು ನಿರ್ವಹಣೆಗೂ ನೀಡಿ ಜನೋಪಯೋಗಿ ಸತ್ಕಾರ್ಯಗಳ ಪಾಲಕರಾಗಿ, ರಾಜ್ಯಾಧಿಕಾರ ನಡೆಸಿದವರು ನೊಳಂಬರು. ಸಕಲ ಜೀವ ರಾಶಿಗೂ ಲೇಸನ್ನು ಬಯಸಿ ಸತ್ಕಾರ್ಯ, ಲೋಕೋಪ ಯೋಗಿ ಕೆಲಸಮಾಡಿರುವ ಇವರು ಪ್ರಶಂಸನಾರ್ಹರೆನ್ನುವುದರಲ್ಲಿ ಅರ್ಥವಿದೆ.

ಶ್ರೀಕ್ಷೇತ್ರ ಧರ್ಮಸ್ಥಳ ಮಂಜುನಾಥಸ್ವಾಮಿ ದೇವಾಲಯದ ಧರ್ಮಾಧಿಕಾರಿಗಳು ಆದ ಶ್ರೀ ವೀರೇಂದ್ರ ಹೆಗ್ಗಡೆಯವರು ಸಮಾರಂಭವೊಂದರಲ್ಲಿ ನೀಡಿದ ನುಡಿಮಾಣಿಕ್ಯವಿದು, ನಾವು ಇಲ್ಲಿಯವರೆಗೂ ದೇವಾಲಯಗಳ



**ಶಿವಕುಮಾರ್ .ಎಸ್**
ಈಡೇನಹಳ್ಳಿ,
ತಿಪಟೂರು ತಾ. ತುಮಕೂರು ಜಿಲ್ಲೆ.

ಪುನರುಜ್ಜೀವನ, ಜೀರ್ಣೋದ್ಧಾರ ಕಾರ್ಯಕ್ಕೆ ನೆರವಾಗುತ್ತಿದ್ದವು. ಇನ್ನು ಮುಂದೆ ಅತ್ಯಗತ್ಯವಾಗಿರುವ ಕೆರೆ–ಕಟ್ಟೆಗಳ ದುರಸ್ತಿ ಹಾಗೂ ಶುದ್ಧೀಕರಣಕ್ಕಾಗಿ ಸಹಕಾರ ನೀಡುವೆವು. ಇದು ಬಹಳ ಸಂತೋಷದ ವಿಷಯ ಇಂದಿನ ಜನಾಂಗ ಶ್ರೀಯುತರ ವಾಣಿಯನ್ನು ದೈವವಾಣಿಯೆಂದು ತಿಳಿದು ಜಾಗೃತರಾಗುವುದರಲ್ಲಿ ಸಂಶಯವಿಲ್ಲ. ಈ ಕಾರ್ಯ ಯಶಸ್ವಿಯಾಗಿ ಆರೋಗ್ಯಕರ ಹಿತಪರಿಸರ ಪುನರ್ ನಿರ್ಮಾಣವಾಗಲೆಂದು ಬಯಸೋಣ. ಈ ಮೂಲಕ ನೊಳಂಬ ಅರಸರ ಮಹತ್ವಾಕಾಂಕ್ಷೆಯಾಗಿದ್ದ ಹಸಿರು ಕ್ರಾಂತಿ ಯಶಸ್ವಿಯಾಗಲಿ. ಸಕಲ ಜೀವರಾಶಿಗೂ ನೆಮ್ಮದಿ ಸಿಗಲಿ ಆರೋಗ್ಯ ಭಾಗ್ಯ ಸರ್ವರಿಗೂ ಇರಲಿ. "ಸರ್ವೇಜನ: ಸುಖಿನೋಭವಂತು", ಎಂಬ ವಾಣಿ ಜಗಜ್ಜನಿಕವಾಗಲಿ.

**ಕೆರೆ ಕಟ್ಟೆಗಳ ವಿನ್ಯಾಸ :**

ಇಂದಿನ ಜನಾಂಗ ಬೆರಗುಗೊಳ್ಳುವಂತೆ ವಿನ್ಯಾಸವುಳ್ಳ ಸುಸಜ್ಜಿತ, ಸಂರಕ್ಷಿತ ಸುಂದರ ಕೆರೆಗಳನ್ನು ವಿಶ್ವಕ್ಕೆ ನೀಡಿದ್ದಾರೆ. ಒಂದು ಕೆರೆ ತುಂಬಿ ಹೆಚ್ಚುವರಿಯಾದ ನೀರು ಮತ್ತೊಂದು ಕೆರೆಗೆ ಸೇರಲು ಕಾಲುವೆಗಳನ್ನು ಹಾಗೂ ಬೇಕಾಗಿರುವ ಸರಪಳಿಯ ರೀತಿಯಲ್ಲಿ ಏರಿಗಳನ್ನು ನಿರ್ಮಿಸಿ ಕೆಲವು ಕೆರೆಗಳಿಗೆ ಎರಡು ಭಾಗದಲ್ಲಿ ಕೋಡಿಗಳನ್ನು ಮಧ್ಯದಲ್ಲಿ ತೂಬುಗಳನ್ನು ನಿರ್ಮಾಣಮಾಡಿ ಸುರಕ್ಷತೆಯ ತಂತ್ರಜ್ಞಾನವನ್ನು ಅಳವಡಿಸಿದ್ದಾರೆ. ಮುಗಿಲಲ್ಲಿ ಕಾಣುವ ಕಾಮನಬಿಲ್ಲಿನ ರೀತಿ ಭೂತಾಯಿಯ ಮಡಿಲಲ್ಲಿ ಕೆರೆಗಳನ್ನು ನಿರ್ಮಿಸಿರವರು ಕಾಮನಬಿಲ್ಲು ತಾತ್ಕಾಲಿಕ, ಕೆರೆಗಳು ಶಾಶ್ವತ.

ಪುಣ್ಯಕ್ಷೇತ್ರ ನೋನವಿನಕೆರೆ ನೈರುತ್ಯ ಭಾಗಕ್ಕಿರುವ ಗ್ರಾಮ ವಿಘ್ನಸಂತೆ, ಪಶ್ಚಿಮಕ್ಕೆ ಸೂಗೂರು, ಬಜಗೂರು, ಅಣತಿ, ಕೆಂಬಾಳು ಗ್ರಾಮಾಗಳಿವೆ ಈ ಎಲ್ಲಾ ಗ್ರಾಮಗಳ ಕೆರೆಗಳು ತುಂಬಿ ಕೋಡಿಬಿದ್ದಾಗ ನೀರು ನೋನವಿನಕೆರೆಗೆ ಸೇರುವುದು. ಪೂರ್ವಕ್ಕೆ ಬಸ್ತಿಹಳ್ಳಿ, ಚಿಗ್ಗಾವೆ, ಅಣಪನಹಳ್ಳಿ, ಧರ್ಮೇಗೌಡನಪಾಳ್ಯ, ಕೋನೇಗೌಡನಪಾಳ್ಯ, ನೆಲ್ಲಿಕೆರೆ, ಕೋಡಿಹಳ್ಳಿ, ಬುರುಡೇಘಟ್ಟ ಸೇರಿದಂತೆ ನೊಣವಿನಕೆರೆ, ಕೋಡಿ ನೀರು ಹರಿಯುವ ಸ್ಥಳ ತೊರೆಯಾಗಿ ಪರಿಣಮಿಸಿ ತೊರೆಯ ಎರಡು ಕಡೆ ವೀಳ್ಯದೆಲೆ, ಅಡಿಕೆ, ತೆಂಗು, ಬಾಳೆ, ಹೂವು ಬೆಳೆಯುವರು, ಹತ್ತಾರು ಹಳ್ಳಿಗಳು ನೊಣವಿನಕೆರೆ ನೀರಿನ ಆಶ್ರಯದಲ್ಲಿವೆ. ದಕ್ಷಿಣಕ್ಕೆ ರಂಗನಹಳ್ಳಿ ಹಾಗೂ ಮಠದಪಾಳ್ಯ, ಕಾಡಸಿದ್ದೇಶ್ವರಮಠ ಪ್ರಮುಖವಾಗಿವೆ.

ಕರ್ನಾಟಕ ಬ್ಯಾಂಕ್, ಡಿ.ಸಿ.ಸಿ ಬ್ಯಾಂಕ್ ಹಾಗೂ ಮೀನುಗಾರರ ಸಹಕಾರ ಸಂಘ, ಕೃಷಿ ಸಹಕಾರ ಸಂಘವಿದ್ದರೆ, ಕಾಡಸಿದ್ದೇಶ್ವರ ಮಠದಲ್ಲಿ ನರ್ಸಿಂಗ್ ಹಾಗೂ ಆಯುರ್ವೇದ ಆಸ್ಪತ್ರೆ, ಸರ್ಕಾರಿ ಆಸ್ಪತ್ರೆಗಳು ನಾಗರೀಕರಿಗೆ ಸೇವಾಸವಲತ್ತು ನೀಡುತ್ತಿವೆ.

**ಕೆರೆಗೆ ಹಾರ :**

ನೊಳಂಬರು ಹೊಸದಾಗಿ ನಿರ್ಮಿಸಿದ ಬೃಹತ್ ಕೆರೆ ಏರಿಯು ನೀರು ತುಂಬಿದ ನಂತರ ಹೊಡೆಯುತ್ತಿರುತ್ತದೆ. ಅಧಿಕವಾದ ನೀರು ಹೊರಹೋಗಲು ಉತ್ತರ, ದಕ್ಷಿಣ ಭಾಗಗಳಲ್ಲಿ ಕೋಡಿಗಳನ್ನು ನಿರ್ಮಿಸಿದ್ದಾರೆ. ಕೆರೆ ನಂತರ ಸುರಕ್ಷಿತವಾಗಿದೆ.

ಕೆರೆ ನಿರ್ಮಾಣದ ಪ್ರಾರಂಭದಲ್ಲಿ ಏರಿಯ ಮೇಲೆ ಗೊಲ್ಲ ಜನಾಂಗದ ಮಹಿಳೆಯೊಬ್ಬರು ನಡೆದುಕೊಂಡು ಬರುತ್ತಿರುವರು. ಮಳೆಗಾಲವಾದ ಅಂದು ಬೀಕರ ಮಳೆ ಬಿದ್ದು ಕೆರೆಗೆ ಒಳಹರಿವು ಹೆಚ್ಚಾಗಿ ಮಹಿಳೆ ಇದ್ದ ಜಾಗದಲ್ಲಿ ಏರಿ ಹೊಡೆದುಹೋಗುವುದು. ನೀರಿನ ರಭಸಕ್ಕೆ ಸಿಕ್ಕ ಮಹಿಳೆ ಆಹುತಿಯಾಗುವಳು. ಆ ಜಾಗದಲ್ಲಿಯೇ ಶವಸಂಸ್ಕಾರ ಮಾಡಿ ಏರಿ ಪುನರ್ ನಿರ್ಮಾಣವಾಗಿ ಅಲ್ಲಿ ಸ್ಮಾರಕ ಕಲ್ಲು ನೆಟ್ಟಿರುವುವರು. ಸುತ್ತ ಮುತ್ತಲಿನ ಹಳ್ಳಿಗರು ಅಲ್ಲಿ ಆ ಗೊಲ್ಲ ಸಮಾಜದ ಮಹಿಳೆಯ ದೇವಾಲಯವನ್ನು ಕಟ್ಟಿರುವರು. ಇತ್ತೀಚಿನ ದಿನಗಳಲ್ಲಿ ಕಾಯುವವಳೆಂಬ ನಂಬಿಕೆಯಲ್ಲಿ ತಮ್ಮ ಆಕಳು ಎಮ್ಮೆಗಳು, ಕರುಹಾಕಿದಾಗ ಮೊದಲ ಹಾಲಿನ ಗಿಣ್ಣು, ಮೊಸರನ್ನ ಎಡೆ ಮಾಡುವರು. ಇಂದಿಗೂ ಪೂಜಾ ಕಾರ್ಯ ನಡೆಯುತ್ತಿದೆ. ಜಾಗದ ಕೊರತೆ ಕಾರಣ ಏರಿಯ ಮೇಲೆ ಚಿಕ್ಕ ಗುಡಿಯನ್ನು ನಿರ್ಮಿಸಲಾಗಿದೆ.

ಕೆರೆಯ ಪೂರ್ವ ಭಾಗದಲ್ಲಿ ಉತ್ತರದ ಕೊನೆ, ದಕ್ಷಿಣದ ಕೊನೆಯ ಜಾಗದಲ್ಲಿ ಕೋಡಿಗಳಿದ್ದು ಎರಡು ಜಾಗದಲ್ಲೂ ನೊಳಂಬರು ಸ್ಥಾಪಿಸಿರುವ ಬಸವೇಶ್ವರ ದೇವಾಲಯಗಳಿವೆ. ಹಾಗೂ ನೊಳಂಬೇಶ್ವರ ಸಹಿತ ಪಂಚಲಿಂಗಗಳ ದೇವಾಲಯಗಳಿವೆ. ಇವು 10ನೇ ಶತಮಾನದಲ್ಲಿ ಸ್ಥಾಪಿತವಾಗಿರುವ ದೇಗುಲಗಳು. 16ನೇ ಶತಮಾನದಲ್ಲಿ ನಿರ್ಮಾಣವಾಗಿರುವ ಶ್ರೀ ಬೇಟೆರಾಯಸ್ವಾಮಿ ದೇವಾಲಯ, ವೇಣುಗೋಪಾಲಸ್ವಾಮಿ ದೇವಾಲಯ ಸುಸಜ್ಜಿತ ಹಾಗೂ ಪ್ರಮುಖ ದೇವಾಲಯಗಳಾಗಿವೆ. ಕೆರೆಯ ಕೋಡಿಯ ಪಕ್ಕದಲ್ಲಿ ಉಡಿಸಲ ಕೆಂಪಮ್ಮ ಗ್ರಾಮದೇವಾಲಯ ಹಾಗೂ ಇತರ ದೇವಾಲಯಗಳಿವೆ.

**ಧರೆಯಿಲ್ಲದೆ ಬೆಳೆಯ ಬೆಳೆಯ ಬಹುದೆ, ಧಾನ್ಯವ, ಮಳೆಯಿಲ್ಲದೆ ನೋಡಬಹುದೆ ಬೆಳೆಗಳ**

**ಒಂದು ವಸ್ತುವಿಗಾದರೂ ದ್ವಂದ್ವಬೇಕು**
**ಕಪಿಲ ಸಿದ್ಧಮಲ್ಲಿಕಾರ್ಜುನನ ನೋಡುವೊಡೆ**
**ಲಿಂಗಪೂಜೆ ಜಂಗಮದಾಸೋಹ ಬೇಕೆಬೇಕು.**

**ಮರವಿದ್ದು ಫಲವೇನು? ನೆಳಲಿಲ್ಲದನ್ನಕ್ಕ**
**ಧನವಿದ್ದು ಫಲವೇನು? ದಯವಿಲ್ಲದನ್ನಕ್ಕ**
**ಹಸುವಿದ್ದು ಫಲವೇನು? ಹಯವಿಲ್ಲದನ್ನಕ್ಕ**

**ರೂಪಿದ್ದು ಫಲವೇನು? ಗುಣವಿಲ್ಲದನ್ನಕ್ಕ**
**ಅಗಲಿದ್ದು ಫಲವೇನು? ಮನವಿಲ್ಲದನ್ನಕ್ಕ**
**ನಾನಿದ್ದು ಫಲವೇನು? ನಿಮ್ಮ ಜ್ಞಾನವಿಲ್ಲದನ್ನಕ್ಕ**

**– ಚನ್ನಮಲ್ಲಿಕಾರ್ಜುನ**

ಗುರುಸಿದ್ಧರಾಮರ ಹಾಗೂ ಅಕ್ಕನ ವಚನ ವಿಶ್ವದ ಎಲ್ಲರನ್ನು ಪ್ರಶ್ನಿಸುತ್ತದೆ. ಎಚ್ಚರಿಸುತ್ತದೆ, ಈ ವಚನದ ಜೊತೆಗೆ ಇನ್ನು ಸೇರ್ಪಡೆಯಾಗುತ್ತದೆ.

**ನೆಲವಿದ್ದು ಫಲವೇನು? ಹಸಿರಿಲ್ಲದನ್ನಕ್ಕ**
**ಊರಿದ್ದು ಫಲವೇನು, ನೀರಿಲ್ಲದನ್ನಕ್ಕ**

ಈ ಎಲ್ಲ ಮರ್ಮದ ಮಹತ್ವವನ್ನರಿತು ನೊಳಂಬರು ನಿರ್ಮಿಸಿದ್ದ ಕೆರೆಗಳು, ಬೆಳೆಸಿ ಸಂರಕ್ಷಿಸಿದ ಗಿಡ, ಮರ, ಗುಂಡುತೋಪುಗಳನ್ನು ಉಳಿಸಿ, ಬೆಳೆಸಿ ರಕ್ಷಿಸಿದರೆ ಅದೇ ಅಕ್ಕಮಹದೇವಿಯವರ ಪ್ರಶ್ನೆಗೆ ಉತ್ತರವಾಗುವುದು. ಮಾನವ ಹಾಗೂ ಸಕಲ ಜೀವರಾಶಿಗೂ ವಿಶ್ವ ಸುರಕ್ಷಿತ ತಾಣವಾಗುವುದು.

ಪ್ರೊ. ಡಿ.ವಿಪರಮಶಿವಮೂರ್ತಿಯವರು ನೊಳಂಬ ಅರಸರು ನಿರ್ಮಿಸಿರುವ ಕೆರೆಗಳು, ಛತ್ರಗಳು, ವಿದ್ಯಾಕೇಂದ್ರ, ಆರೋಗ್ಯಕೇಂದ್ರ, ಅನಾಥಾಶ್ರಮಗಳು, ದೇವಾಲಯಗಳು ಮತ್ತು ಇವುಗಳ ನಿರ್ವಹಣೆ ಕುರಿತು ಅತ್ಯುತ್ತಮ ಲೇಖನಗಳನ್ನು ನೀಡಿದ್ದಾರೆ. ಶ್ರೀಯುತರ ಲೇಖನಗಳನ್ನು ಓದಿ ಕೆರೆಕಟ್ಟೆಗಳ ಮಹತ್ವವನ್ನು ತಿಳಿಯಬಹುದಾಗಿದೆ.

---

## ಭಾಷಾ ತಂತ್ರಜ್ಞಾನದ ವಿಕಾಸ

39ನೇ ಪುಟದಿಂದ.....

ತಂತ್ರಜ್ಞಾನ ಎನಿಸಿಕೊಂಡಿದೆ. ವಿವಿಧ ರೀತಿಯ ಅಧ್ಯಯನಗಳಾಗಿ ಅದಕ್ಕೆಂದೇ ರೂಪಿಸಲಾದ ತಂತ್ರಾಂಶಗಳ ನೆರವಿನಿಂದ ಅಧ್ಯಯನ ಕೈಗೊಂಡು ನಿಖರವಾದ ಫಲಿತಾಂಶವನ್ನು ಪಡೆಯಲು ಸಹಕಾರಿಯಾಗಿದೆ.

ಭಾಷಾಧ್ಯಯನದಲ್ಲಿ ಕಂಪ್ಯೂಟರ್ ಬಳಕೆಯ ನಂತರ ಸಹಾಯಕವಾದ ಮುಖ್ಯ ಅಂಶಗಳೆಂದರೆ ವೇಗ ಮತ್ತು ಒಮ್ಮೆಗೇ ಹಲವು ಅಂಶಗಳನ್ನು ಸಂಸ್ಕರಿಸಬಹುದಾದ ಅನುಕೂಲ. ಒಂದೇ ಅಂಶವನ್ನು ಅವಶ್ಯಕತೆಗೆ ಅನುಗುಣವಾಗಿ ವಿವಿಧ ರೀತಿಯ ವಿಶ್ಲೇಷಣೆಗೆ ಒಳಗುಮಾಡಿ ಫಲಿತಾಂಶವನ್ನು ಪಡೆಯಲು ಸೌಲಭ್ಯವಿರುವ ಈ ತಂತ್ರಜ್ಞಾನದ ಮೂಲಕ ಭಾಷೆಗೆ ಸಂಬಂಧಿಸಿದ ಅಧ್ಯಯನಗಳು ನಡೆಯುತ್ತಿವೆ.

ಆರಂಭದ ಹಂತದಲ್ಲಿ ಭಾಷಾಧ್ಯಯನ ಮಾನವನ ಸ್ವಯಂಶ್ರಮದಿಂದ ನಡೆಯಿತು. ಆನಂತರ ಯಂತ್ರಗಳು, ಸಲಕರಣೆಗಳು ಅಧ್ಯಯನಕ್ಕೆ ಸಹಾಯಕವಾಗಿ ಬಂದವು. ಮುದ್ರಣ ಮಾಧ್ಯಮದಲ್ಲಿ ಬರಹದ ದಿಶೆ ಬದಲಾಯಿತು. ಮುದ್ರಣದ ಅಗತ್ಯಕ್ಕೆ ತಕ್ಕಂತೆ ಅಕ್ಷರಗಳನ್ನು ರೂಪಿಸುವ ದಿಶೆ ಬದಲಾಯಿತು. ಮುದ್ರಣದ ಲಗತ್ತಕ್ಕೆ ತಕ್ಕಂತೆ ಅಕ್ಷರಗಳನ್ನು ರೂಪಿಸುವ ಕ್ರಿಯೆ ಕಂಡುಬರುತ್ತದೆ. ಇದು ಜ್ಞಾನಪ್ರಸಾರದ ಬಹುಮುಖ್ಯವಾದ ಮೈಲಿಗಲ್ಲು.

ಆ ಬಳಿಕ ಇಂದಿನ ಕಂಪ್ಯೂಟರ್ ತಂತ್ರಜ್ಞಾನದ ವರೆಗೆ ಅನೇಕ ಸಾಧನ–ಸಲಕರಣೆಗಳು ಭಾಷಾಧ್ಯಯನಕ್ಕೆ ಪೂರಕವಾಗಿ ಬಂದಿವೆ. ಹೀಗೆ ಭಾಷಾಧ್ಯಯನದಲ್ಲಿ ಬಳಸಲಾದ ತಂತ್ರಜ್ಞಾನವನ್ನು ಮೂರು ರೀತಿಯಲ್ಲಿ ವರ್ಗೀಕರಿಸಬಹುದು.

ಓದು ಕುರಿತಂತೆ ಮೈಕ್ರೋ ಫಿಲಂ, ಮೈಕ್ರೋ ಫಿಶ್ ಮುದ್ರಣ, ಪ್ರಾರಂಭದ ಬರಹಗಳು ಒಳಗೊಂಡರೆ, ಬರಹದ ತಂತ್ರಜ್ಞಾನವಾಗಿ ವಿವಿಧ ವಸ್ತುಗಳ ಮೇಲಿನ ಬರಹ, ಕೈ ಬರಹದಿಂದ ಯಂತ್ರ ಬರಹ ಸೇರುತ್ತದೆ. ಧ್ವನಿ ಕುರಿತಂತೆ ಆಲಿಸುವಿಕೆ ಆಸಿಲೋಸ್ಕೋಪ್, ಸ್ಪೆಕ್ಟ್ರೋಗ್ರಾಮ್, ಭಾಷಾ ಪ್ರಯೋಗಾಲಯ ಹೀಗೆ ವಿವಿಧ ತಂತ್ರಜ್ಞಾನದ ಸ್ವರೂಪವನ್ನು ಗುರುತಿಸಬಹುದು.

**– ಡಾ. ಸಾಂಬಮೂರ್ತಿ**
ಕನ್ನಡ ವಿಶ್ವವಿದ್ಯಾಲಯ
ಹಂಪಿ.

# ಕಾಯಕವೇ ಕೈಲಾಸ

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥ ॥ ಓಂ ಶ್ರೀ ಗುರುಸಿದ್ಧರಾಮೇಶ್ವರಾಯ ನಮಃ ॥

ಸರ್ವರಿಗೂ ಶರಣು ಶರಣಾರ್ಥಿಗಳು

ಶ್ರೀ ಗುರುಸಿದ್ಧರಾಮೇಶ್ವರರ 852ನೇ ಜಯಂತಿ ಮಹೋತ್ಸವ ಕಾರ್ಯಕ್ರಮವು ಪ್ರತಿ ವರ್ಷದಂತೆ ಈ ಬಾರಿ ಕರ್ನಾಟಕದ ರಾಜಧಾನಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಅತ್ಯಂತ ವಿಜೃಂಭಣೆಯಿಂದ ವ್ಯವಸ್ಥಿತವಾಗಿ ವೈಭವದಿಂದ ನಡೆಯಿತು. ವಿಶೇಷವಾಗಿ ಎರಡನೇ ವರ್ಷದ ಇಷ್ಟಲಿಂಗ ದೀಕ್ಷಾ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು.

ಶ್ರೀಗುರುಸಿದ್ಧರಾಮೇಶ್ವರರ 851ನೇ ಜಯಂತಿಯಲ್ಲಿ ಬಸವಾಂಜಲಿ ಮಾತಾಜಿಯವರು ಮತ್ತು ಕೆಲವು ಸಮಾನ ಮನಸ್ಕರು ಸೇರಿ ಚಿಕ್ಕಬಾಸೂರಿನಲ್ಲಿ ಇಷ್ಟಲಿಂಗ ದೀಕ್ಷಾ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದರು. ಈ ಕಾರ್ಯಕ್ರಮ ಬೆಂಗಳೂರಿನಲ್ಲಿಯೂ ಸಹ ನಡೆಯಿತು.

ಸುಸಜ್ಜಿತವಾದ ವೇದಿಕೆಯಲ್ಲಿ ವಿಶ್ವಗುರು ಕರ್ನಾಟಕ ರಾಜ್ಯದ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಹಾಗೂ ಕಾಯಕಯೋಗಿ ನೊಳಂಬ ಲಿಂಗಾಯತ ಸಮಾಜದ ಗುರುಸಿದ್ಧರಾಮೇಶ್ವರರ ಭಾವಚಿತ್ರಗಳು ಅಲಂಕರಿಸಲಾಯಿತು.

ಮೊದಲಿಗೆ ಭಾವಚಿತ್ರಕ್ಕೆ ಶರಣರ ಸಮ್ಮುಖದಲ್ಲಿ ಪರಮಪೂಜ್ಯ ಡಾ. ಮಾತೆ ಬಸವಾಂಜಲಿ ಮಾತಾಜಿಯವರು ಪೂಜೆ ಸಲ್ಲಿಸಿದರು. ಸೇವಾ ಕಾರ್ಯಕರ್ತರು ಸಹ ಪೂಜೆ ಸಲ್ಲಿಸಿ, ಬಹಳ ಶಿಸ್ತಿನಿಂದ ಕಾರ್ಯಕ್ರಮದಲ್ಲಿ ಭಾಗಿಯಾದರು. ಲಿಂಗಾಯತ ಧರ್ಮದ ಇಷ್ಟಲಿಂಗ ಪೂಜಾ ಪ್ರಾತ್ಯಕ್ಷಿಕೆಯನ್ನು ಶ್ರೀ ಮಾತಾಜಿಯವರು ಸವಿಸ್ತಾರವಾಗಿ ತಿಳಿಸುತ್ತಾ ಸರಳವಾಗಿ ಯಾವುದೇ ಆಡಂಬರವಿಲ್ಲದೇ ಶ್ರದ್ಧಾಭಕ್ತಿಯಿಂದ ಪೂಜೆ ಮಾಡುವುದನ್ನು ತೋರಿಸಿಕೊಟ್ಟರು.

ಕರ್ನಾಟಕ ಹಾಗೂ ಬೇರೆ ಬೇರೆ ರಾಜ್ಯಗಳಿಂದ ಬಂದಿದ್ದ ಆಸಕ್ತ ಶರಣರು ಶ್ರೀ ಮಾತಾಜಿಯವರ ನೇತೃತ್ವದಲ್ಲಿ 300 ಶರಣರು ಇಷ್ಟಲಿಂಗ ದೀಕ್ಷೆಯನ್ನು ಸ್ವೀಕರಿಸಿದರು. ಶ್ರೀ ಮಾತಾಜಿಯವರು ವಚನಗಳ ಆಧಾರಿತವಾಗಿ ದೀಕ್ಷೆ ನೀಡಿ ಯಾವುದೇ ವೈದಿಕ ಆಚರಣೆಗಳಿಲ್ಲದೆ ಸರಳವಾಗಿ ಇಷ್ಟಲಿಂಗ ಪೂಜೆಯನ್ನು ಮಾಡಿಕೊಳ್ಳಬೇಕು ಎಂಬ ವಿಧಾನವನ್ನು ತೋರಿಸಿಕೊಟ್ಟರು. ಗುರು ಬಸವಣ್ಣನವರು ಕೊಟ್ಟು ಲಿಂಗಾಯತ ಧರ್ಮವನ್ನು ಶಿವಯೋಗಿ ಸಿದ್ಧರಾಮೇಶ್ವರರು ಚಿನ್ಮಯಜ್ಞಾನಿ ಚೆನ್ನಬಸವಣ್ಣನವರಿಂದ ಇಷ್ಟಲಿಂಗ ದೀಕ್ಷೆಯನ್ನು ಸ್ವೀಕರಿಸಿದ್ದಾರೆ. ಅದರಂತೆ ನಾವೆಲ್ಲರೂ ಇಷ್ಟಲಿಂಗ ದೀಕ್ಷೆಯನ್ನು ತೆಗೆದುಕೊಂಡು ಕಾಯಕ ದಾಸೋಹ ಪ್ರಜ್ಞೆಯಿಂದ ಜೀವನ ಸಾಗಿಸೋಣ ಎಂದು ಆಶೀರ್ವಚನ ನೀಡಿದರು. ಸಭಾ ವೇದಿಕೆ ನಿರ್ವಹಿಸಿದ ವ್ಯವಸ್ಥಾಪಕರು, ಮಾಧ್ಯಮ ಮಿತ್ರರು, ಛಾಯಾಗ್ರಾಹಕರು ಎಲ್ಲಾ ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳು.

ಈ ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸೇವೆ ಸಲ್ಲಿಸಿದ ಶರಣ/ಶರಣೆಯರಾದ, ಶರಣೆ ಶಶಿಕಲಾ ದೇವರಾಜ್ ಕುಟುಂಬದವರು, ಡಾ. ರಾಕೇಶ್ ಬಿ.ಸಿ. ನೊಳಂಬವಾಣಿ ಸಂಪಾದಕರು, ಎಸ್.ನಾಗರಾಜ್, ಬಸವಲೇಬಲ್ ಫೋಟೋಗ್ರಾಫರ್ ಮಲ್ಲಿಕಾರ್ಜುನಣ್ಣ, ರಾಜಕುಮಾರಣ್ಣ ಕುಟುಂಬದವರು ಹೊಸದುರ್ಗ, ಶಿವು, ದರ್ಶನ್ ಡಿಜಿಟಲ್ ಸ್ಟುಡಿಯೋ, ಪ್ರಭು ಹಿತ್ತಲಮನಿ, ರೇಣುಕಯ್ಯ HAL, ಅವಿನಾಶ್, ಕಾಂತರಾಜ್, ಮೇಲೆಗೌಡರು, ಶಿವನಗೌಡ್ರು ಸೂಡಂಬಿ, ಹರೀಶ್, ರಾಘವೇಂದ್ರ, ನಾಗರಾಜ್, ರಾಕೇಶ್ ಪದ್ಮನಾಗರಾಜ್, ಮಮತಾ ಶೇಖರ್, ಪುಷ್ಪ ಕಾಂತರಾಜ್ ಸುನಿತಾ ಪ್ರಕಾಶ್, ಶೈಲಮ್ಮ ನಟರಾಜ್, ಮಾಲಾ ಮತ್ತು ರೇಣುಕಮ್ಮ, ವಿಜಯಕುಮಾರ್, ಯಳನಾಡು, ಅನ್ನಪೂರ್ಣಮ್ಮ, ತಿಪಟೂರು ಶಿವಣ್ಣ, ಕೆನ್ನಾಮೆಟಲ್ ಭಾಗವಹಿಸಿದ ಶರಣ/ ಶರಣೆಯರೆಲ್ಲರಿಗೂ ಶರಣು ಶರಣಾರ್ಥಿ.



**ನಾಗರಾಜಪ್ಪ ಟಿ.**

ಕಾರ್ಯಕಾರಿ ಸಮಿತಿ ನಿರ್ದೇಶಕರು

ನೊಳಂಬ ಲಿಂಗಾಯತ ಸಂಘ (ರಿ.), ಬೆಂಗಳೂರು.

# ಮೂರು ರತ್ನಗಳು

**ಪೃಥಿವ್ಯಾ ತ್ರೀಣಿ ರತ್ನಾನಿ ಜಲ ಮನ್ನಂ ಸುಭಾಷಿತಮ್**
**ಮೂಢೈಃ ಪಾಷಾಣಖಂಡೇಷು ರತ್ನ ಸಂಜ್ಞಾವಿಧಿಯತೇ॥**

ನೀರು, ಅನ್ನ, ಸುಭಾಷಿತ– ಈ ಮೂರು ಪದಾರ್ಥಗಳು ಭೂಲೋಕದಲ್ಲಿ ನಿಜವಾದ ರತ್ನಗಳು, ಆದರೆ ಅಜ್ಞಾನಿಗಳು ಕಲ್ಲಿನ ಚೂರುಗಳನ್ನು ರತ್ನ ಎಂದು ತಪ್ಪಾಗಿ ಭಾವಿಸಿದ್ದಾರೆ. ರತ್ನವು ಅತ್ಯಮೂಲ್ಯವಾದ ವಸ್ತು ನವರತ್ನಗಳಿಂದ ಆಭರಣವನ್ನು ಮಾಡಿಸಿ ಧರಿಸುವುದರಿಂದ ಆರೋಗ್ಯ ಐಶ್ವರ್ಯಾದಿಗಳು ಅಭಿವೃದ್ಧಿಯಾಗುತ್ತವೆ ಎಂದು ನಾವು ನಂಬುತ್ತೇವೆ. ಸಂತೋಷ, ಆದರೆ ಆ ರತ್ನಗಳು ರತ್ನಗಳಲ್ಲ ನಿಜವಾದ ರತ್ನಗಳೇ ಬೇರೆಯಾಗಿವೆ. ಅವು ನೀರು, ಅನ್ನ ಮತ್ತು ಒಳ್ಳೆಯ ಮಾತು ಇವೇ ಅತ್ಯಮೂಲ್ಯ ರತ್ನಗಳು. ಈ ನಿಜವಾದ ರತ್ನಗಳ ಬೆಲೆಯನ್ನು ತಿಳಿಯದೆ ದಡ್ಡರಾಗಿ ಕಲ್ಲು ಚೂರುಗಳನ್ನು ರತ್ನಗಳೆಂದು ತಪ್ಪಾಗಿ ತಿಳಿದಿದ್ದೇವೆ. ಹಸಿದಾಗ ಅನ್ನ ನೀರಿನ ಅವಶ್ಯಕತೆ ಇದೆ. ಕಲ್ಲುಗಳನ್ನು ತಿಂದು ಜೀವ ಕಾಪಾಡಿಕೊಳ್ಳಲು ಸಾಧ್ಯವಿಲ್ಲ. ಜೀವ ಉಳಿಯಲು ಅನ್ನ, ನೀರು ಮತ್ತು ಮಾತುಗಳು ಅತ್ಯವಶ್ಯಕ.

1) ನೀರು–ಜೀವಜಲ, ಸಕಲ ಪ್ರಾಣಿ–ಪಕ್ಷಿಳಿಗೂ, ಗಿಡ–ಮರಗಳಿಗೂ ಅವಶ್ಯವಾಗಿ ಬೇಕಾಗಿರುವುದು ಜಲ, ನೀರಿನಿಂದಲೇ ಪ್ರಾಣ, ನೀರಿನಿಂದಲೇ ಜೀವ, ನೀರಿಲ್ಲದಿದ್ದರೆ ಜೀವನವೇ ಇಲ್ಲ. ನೀರೆಂಬುದು ಶಿವನು ಸರ್ವ ಪ್ರಾಣಿಗಳಿಗೂ ಅನುಗ್ರಹಿಸಿರುವ ಅತ್ಯಮೂಲ್ಯವಾದ ನೈಸರ್ಗಿಕ ಸಂಪತ್ತು, ಜಲವೇ ಜೀವಾಳ.

2) ಅನ್ನ–'ಅನ್ನಂ ಪ್ರಾಣಂ' ಅನ್ನವಿಲ್ಲದಿದ್ದರೆ ಜೀವಕ್ಕೆ ಶಕ್ತಿ ಇರುವುದಿಲ್ಲ, ಶಕ್ತಿ ಬರುವುದೇ ಆಹಾರದಿಂದ ಆಹಾರವಿಲ್ಲದೆ ಪ್ರಾಣಿ ಪಕ್ಷಿಗಳು ಬದುಕಿರಲಾರವು. ಅನ್ನಕ್ಕಾಗಿ ಮನುಷ್ಯನ ವ್ಯಾಪಾರಗಳು ನಡೆಯುತ್ತವೆ. ಅನ್ನದಿಂದಲೇ ಶರೀರೇಂದ್ರಿಯ, ಮನೋಬುದ್ಧಿ, ಪ್ರಾಣಗಳು ಬದುಕಿರುತ್ತವೆ. ಅನ್ನದಿಂದಲೇ ಮನುಷ್ಯರು ಹಾಗೂ ಪ್ರಾಣಿ–ಪಕ್ಷಿಗಳು ಬದುಕಿರುತ್ತವೇ ಹೊರತು, ಕಲ್ಲಿನಚೂರುಗಳಾಗಿರುವ ರತ್ನಗಳನ್ನು ತಿಂದು ಬದುಕಲು ಸಾಧ್ಯವಿಲ್ಲ. ಹಸಿವು–ದಾಹ ಉಂಟಾದರೆ ಅನ್ನ–ನೀರಿನ ಅಗತ್ಯವೇ ಹೊರತು, ಮುತ್ತು–ರತ್ನಗಳಲ್ಲ.

3) ಸುಭಾಷಿತ–ಒಳ್ಳೆಯ ಮಾತು, ನುಡಿ, ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು ಮಾತು ಸಹ ಅಮೂಲ್ಯವಾದುದು, ಆದ್ದರಿಂದಲೇ ಬಸವಣ್ಣನವರು ನುಡಿದರೆ ಮುತ್ತಿನ ಹಾರದಂತಿರಬೇಕು, ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು, ನುಡಿದರೆ ಲಿಂಗ–ಮೆಚ್ಚಿ ಅಹುದು–ಅಹುದೆನ್ನಬೇಕು ಎಂದು ತಿಳಿಸಿದ್ದಾರೆ.

ಮಾತು ಬಲ್ಲವನು ಮಾಣಿಕ್ಯ ತಂದ ಎನ್ನುವ ಹಾಗೆ ಮಾತಿನಿಂದಲೇ ಸುಖ–ಶಾಂತಿ, ತೃಪ್ತಿ ಆನಂದಗಳು ಉಂಟಾಗುತ್ತವೆ. ಒಳ್ಳೆಯ ಮಾತುಗಳಿಂದ ಶೀಲ, ವಿದ್ಯೆ, ಸಂಪತ್ತುಗಳೂ ದೊರಕುತ್ತವೆ. ಮಾತೆಂಬುದು ಜ್ಯೋರ್ತಿಲಿಂಗ, ಆದ್ದರಿಂದ ಜಗತ್ತಿನಲ್ಲಿ ಅತ್ಯಮೂಲ್ಯ ಸಂಪತ್ತುಗಳೆಂದರೆ ನೀರು, ಅನ್ನ ಮತ್ತು ಸುಭಾಷಿತಗಳು.



**ಆರ್. ರಾಜಯ್ಯ**
ನಿವೃತ್ತ ಶಿಕ್ಷಕರು, ವ್ಯವಸ್ಥಾಪಕರು,
ನೊಳಂಬ ಲಿಂಗಾಯತ ಸಂಘ,
ಬಸವೇಶ್ವರನಗರ, ಬೆಂಗಳೂರು.

---



**ಡಾ. ಪ್ರಗತಿ ಎಂ ಎಸ್., ರಾಜೀವ್ ಗಾಂಧಿ ಆರೋಗ್ಯ ವಿ.ವಿ.ಯ ದಾವಣಗೆರೆಯ ಕಾಲೇಜ್ ಆಫ್ ಡೆಂಟಲ್ ಸೈನ್ಸ್‌ನಲ್ಲಿ 2024–25ನೇ ಸಾಲಿನಲ್ಲಿ ನಡೆದ ಎಂ.ಡಿ.ಎಸ್. ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಡಾ॥ ಪ್ರಗತಿ ಎಂ.ಎಸ್. ರವರು ಸ್ನಾತಕೋತ್ತರ ಪದವಿ ವಿದ್ಯಾಭ್ಯಾಸವನ್ನು ಮುಗಿಸಿ ಒರಲ್ ಮತ್ತು ಮ್ಯಾಕ್ಸಿಲೋ ಫೇಶಿಯಲ್ ಸರ್ಜರಿನಲ್ಲಿ ಪ್ರಥಮ ರ್‍ಯಾಂಕ್ ಹಾಗೂ ಚಿನ್ನದ ಪದಕವನ್ನು ಗಳಿಸಿರುವುದು ಹೆಮ್ಮೆಯ ಸಂಗತಿ. ಇವರು ನೊಳಂಬ ಲಿಂಗಾಯತ ಸಂಘದ ಕೇಂದ್ರ ಸಮಿತಿಯ ತುಮಕೂರು ಜಿಲ್ಲಾ ನಿರ್ದೇಶಕರಾದ ಶ್ರೀಯುತ ಎಂ ಆರ್ ಸಂಗಮೇಶ್ ರವರ ಪುತ್ರಿಯಾಗಿದ್ದು, ತುಮಕೂರು ಜಿಲ್ಲೆ ತಿಪಟೂರು ತಾಲೂಕಿನ ಮುತ್ಸದ್ದಿ ರಾಜಕಾರಣಿ ಮಾರನಗೆರೆ ದಿ॥ ಎಂ.ಆರ್.ರಾಮಣ್ಣನವರ ಮೊಮ್ಮಗಳಾಗಿದ್ದು ಇವರಿಗೆ ನೊಳಂಬವಾಣಿ ಪತ್ರಿಕಾ ಬಳಗ ಮತ್ತು ನೊಳಂಬ ಲಿಂಗಾಯತ ಸಂಘವು ಅಭಿನಂದನೆಗಳನ್ನು ಸಲ್ಲಿಸುತ್ತಿದೆ.**

# ಕಾಯಕ ತತ್ವ

12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಇಡೀ ಸಮಾಜವನ್ನು ಬಡಿದೆಬ್ಬಿಸುವ ನಿಟ್ಟಿನಲ್ಲಿ ಸಾಗಿದ ಶರಣ ಸಮೂಹ ಆಧ್ಯಾತ್ಮಿಕ, ಸಾಮಾಜಿಕ, ಸಾಹಿತ್ಯಿಕ ಚಳವಳಿಯ ಚಿಂತನೆಯಲ್ಲಿ ಮುಂದೆ ಮುಂದೆ ಸಾಗಿತು. ವರ್ಗರಹಿತ, ವರ್ಣರಹಿತ, ಶ್ರಮಜೀವಿಗಳಿಂದ ತುಂಬಿದ ಮನುಷ್ಯ ಮನುಷ್ಯರ ಸಂಬಂಧಗಳನ್ನೇ ಕೇಂದ್ರವಾಗಿಟ್ಟು ಕೊಂಡು ಇಡೀ ಮಾನವ ಕುಲವನ್ನು ಕಾಯಕದ ಅಡಿಯಲ್ಲಿ ತೊಡಗಿಸುವ ಪ್ರಯತ್ನ ಮಾಡಿತು. 12ನೇ ಶತಮಾನವನ್ನು ನಾವು ಸಾಮಾಜಿಕ ಚಳವಳಿಯ ಯುಗವೆಂದು ಕರೆಯುತ್ತೇವೆ. ಆದರೆ ಇಲ್ಲಿ ಶರಣರ ಆಶಯ ದಾಸೋಹ ಮತ್ತು ಕಾಯಕ ಇವೆರಡರ ಸಮಾನತೆಯನ್ನು ಇಡೀ ಮಾನವ ಸಮೂಹಕ್ಕೆ ಅಳವಡಿಸುವುದು. ಚಿಂತನೆಯಿಂದ ಕಡೆದುಹೊರಬಂದ 'ಅನುಭಾವ' ಮತ್ತು 'ಆತ್ಮಶೋಧನೆ' ಮುಖ್ಯವಾಗಿವೆ. ಒಂದೇ ಯುಗದಲ್ಲಿ ಒಂದೇ ರೀತಿಯಲ್ಲಿ ಆಲೋಚಿಸುವ ಸಮಾನ ಮನೋಧರ್ಮಿಗಳು ಎಂದು ಶರಣರನ್ನು ಗುರುತಿಸಬಹುದು. ಉದಾಹರಣೆಗೆ ಬಸವಣ್ಣ – ಅಕ್ಕಮಹಾದೇವಿಯರದು ಭಕ್ತಿಮಾರ್ಗ, ಸಿದ್ಧರಾಮನದು ಕರ್ಮಮಾರ್ಗ, ಪ್ರಭುವಿನದು ಜ್ಞಾನಮಾರ್ಗ – ಇತ್ಯಾದಿ. ಈ ಯುಗದ ಅನೇಕ ವಚನಕಾರ್ತಿಯರು 'ಕರ್ಮಮಾರ್ಗ'ದ ಮೂಲಕ ತಮ್ಮ ಅನುಭಾವಿಕ ಸಾಧನೆಗೆ ತೊಡಗುತ್ತಾರೆ. ಹೆಣ್ಣಾಗಲಿ, ಗಂಡಾಗಲಿ ಸೋಮಾರಿಗಳಾಗಿ ಉಣ್ಣಬಾರದು ಎಂಬ ವಿಚಾರಧಾರೆ ಇವರನ್ನು ಹೆಚ್ಚು ಕ್ರಿಯಾಶೀಲವಾಗಿಸುತ್ತದೆ.

ಈ ಹಿನ್ನೆಲೆಯಲ್ಲಿ ವಿವಿಧ ಜಾತಿ, ವೃತ್ತಿ, ವರ್ಗಗಳಿಂದ ಬಂದ ಅನೇಕ ಮಹಿಳೆಯರು ತಮ್ಮ ಕಾಯಕದೊಂದಿಗೆ ಅನುಭವಗಳನ್ನು ದಾಖಲಿಸಿದ್ದಾರೆ. ಕುಟುಂಬವನ್ನು ಬಿಟ್ಟು ವಿಶ್ವಕುಟುಂಬಿಯಾದ ಉಡುತಡಿಯ ಅಕ್ಕನ ಅನುಭವಗಳಿಂದ ಹಿಡಿದು ಕೆಳವರ್ಗದ ಶರಣೆ ಸೂಳೆಸಂಕವ್ವೆಯವರೆಗು ನಾವು ಕಾಣಬಹುದು. ಈ ಕಾಲದಲ್ಲಿ ಮಹಿಳೆಯರು ಧೈರ್ಯ, ಆತ್ಮವಿಶ್ವಾಸ ಬೆಳಸಿಕೊಂಡಿದ್ದು ಅತಿ ಮುಖ್ಯ. 'ಕಾಯಕವೇ ಕೈಲಾಸ' ಎಂಬ ತಾತ್ವಿಕ ನುಡಿಗಟ್ಟಿನ ಮೂಲಕ ಸ್ತ್ರೀ ಪುರುಷರೆಲ್ಲರೂ ದುಡಿಮೆಗೆ ಮಹತ್ವ ಕೊಡುತ್ತಾರೆ. ಈ ಹಿನ್ನೆಲೆಯಲ್ಲಿ ಹೆಣ್ಣು ಆರ್ಥಿಕ ಉತ್ಪಾದನೆಯಲ್ಲಿ ತೊಡಗುವಂತಾಯಿತು. ಈ ಯುಗದ ಮಹತ್ವದ ಕೊಡುಗೆಗಳು 'ವ್ಯಕ್ತಿಸ್ವಾತಂತ್ರ್ಯ' ಹಾಗೂ 'ದುಡಿಮೆಯ ಹಕ್ಕು'. 12ನೇ ಶತಮಾನದಲ್ಲಿ ಈ ಚಳವಳಿಯ ಮೂಲಕ ಸ್ತ್ರೀಯರು ತಮ್ಮ ಸ್ಥಿತಿಗತಿಗಳ ಬಗ್ಗೆ ಸ್ವತಂತ್ರವಾಗಿ ಆಲೋಚನೆ ಮಾಡುವಂತಾದರು. ದಲಿತ ವಚನಕಾರ್ತಿಯಾದ ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ.

**ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ;**
**ಸತ್ಯಶುದ್ಧವಿಲ್ಲದುದು ಕಾಯಕವಲ್ಲ;**
**ಆಸೆಯೆಂಬುದು ಭವದ ಬೀಜ;**
**ನಿರಾಶೆಯೆಂಬುದು ನಿತ್ಯಮುಕ್ತ**
**ಉರಿಲಿಂಗ ಪೆದ್ದಿಗಳರಸನಲ್ಲಿ ಸದರವಲ್ಲ ಕಾಣವ್ವಾ**

ಎಂದು ತರಾಟೆಗೆ ತೆಗೆದುಕೊಳ್ಳುತ್ತಾಳೆ. ಶರಣರ ದೃಷ್ಟಿಯಲ್ಲಿ 'ಕಾಯಕ"ದ ಗುರಿ ಧನ, ದ್ರವ್ಯ, ಧಾನ್ಯಗಳ ಸಂಗ್ರಹಣೆ ಮಾಡುವ ಧೋರಣೆಯನ್ನು ಹೊಂದಿದುದಲ್ಲ.

**ನಾ ತಿರಿಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ**
**ಅಡಿಯ ಹಲಗೆ ಬ್ರಹ್ಮ; ತೋರಣ ವಿಷ್ಣು;**
**ನಿಂದ ಬೊಂಬೆ ಮಹಾರುದ್ರ**
**ರುದ್ರನ ಬೆಂಬಳಿಯವೆರಡು ಸೂತ್ರ ಕರ್ಣ,**
**ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ,**
**ಸುತ್ತಿತ್ತು ನೂಲು, ಕದಿರು ತುಂಬಿತ್ತು**
**ರಾಟೆಯ ತಿರುಹಲಾರೆ, ಎನ್ನ ಗಂಡ ಕುಟ್ಟಿಹ,**
**ಇನ್ನೇವೆ ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ?**

ರೆಮ್ಮವ್ವೆ ತನ್ನ ವೃತ್ತಿಯ ಪರಿಭಾಷೆಯಲ್ಲಿಯೇ ಆಧ್ಯಾತ್ಮಿಕ ಸಾಧನೆಯ ಹಂಬಲವನ್ನು ವ್ಯಕ್ತಪಡಿಸುತ್ತಾಳೆ.

ಶೂನ್ಯ ಸಂಪಾದನಕಾರ ಕೂಡ ಈ ವಿಷಯದ ಬಗೆಗೆ ಸಾಕಷ್ಟು ಚರ್ಚೆ ಮಾಡುತ್ತಾನೆ. ಲೌಕಿಕ ವೃತ್ತಿಯೇ ಕಾಯಕ. ಗೊಗ್ಗಯ್ಯ, ಸಿದ್ಧರಾಮನನ್ನು ಅಲ್ಲಮಪ್ರಭು ಹಂಗಿಸಿದ್ದು ಈ ಕಾರಣದಿಂದಲೇ ಮಾರಯ್ಯನವರ ಧರ್ಮಪತ್ನಿ ಆಯ್ದಕ್ಕಿ ಲಕ್ಕಮ್ಮ ಕೂಡ ಬದುಕಲು ಅಕ್ಕಿಯನ್ನು ಆಯುವ ಕಾಯಕ ಕೈಗೊಂಡಿದ್ದ ತನ್ನ ಗಂಡನನ್ನು ಕಟುವಾಗಿ ವಿರೋಧಿಸುತ್ತಾಳೆ.



**ಕತ್ತಿಗೆ ಚನ್ನಪ್ಪ**
ಸಾಹಿತ್ಯಧಾರೆ, ಸಿದ್ಧರಾಮ ಬಡಾವಣೆ
ಶಿವಮೊಗ್ಗ. ಮೊ : 9844572572

**ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ**
**ಇದು ನಿಮ್ಮ ಮನವೊ,**
**ಬಸವಣ್ಣನ ಅನುಮಾನದ ಚಿತ್ತವೊ ?**

ಈ ಮಾತು ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ ಸಲ್ಲದ ಬೋನ. ಅಲ್ಲಿಯೇ ಸುರಿದು ಬನ್ನಿ ಮಾರಯ್ಯ.

ಒಂದು ಸಾಮಾನ್ಯ ಹೆಣ್ಣು ಪತಿಯ ಬದುಕನ್ನು ನಿಯಂತ್ರಿಸಬಲ್ಲಳು ಎಂಬುದಕ್ಕೆ ಕೈಗನ್ನಡಿಯಂತಿದೆ. ಮಾರಯ್ಯ ದಂಪತಿಗಳ ಕಾಯಕನಿಷ್ಠೆಯನ್ನು ಕವಿ ಶಾಂತಲಿಂಗದೇಸಿಕ ಕೊಂಡಾಡುತ್ತಾನೆ. ಕವಿ ಸಿದ್ಧನಂಜೇಶನೂ ಮಾರಯ್ಯ ದಂಪತಿಗಳನ್ನು ತನ್ನ ಕಾವ್ಯದಲ್ಲಿ ಗುರುತಿಸುತ್ತಾನೆ. ಪ್ರಭುದೇವರು ಆಕೆಯನ್ನು ಕುರಿತು 'ಕಾಯಕ'ದ ಮಹಿಮೆಯ ಅರಿಯವಾಯಿತು ಎಂದರೆ, ಬಸವಣ್ಣ ಮನೆ ನೋಡಾ ಬಡವರು ಮನ ನೋಡಾ ಸಂಪನ್ನರು ಎಂದು ಅವರ ಹೃದಯ ಸಂಪತ್ತನ್ನು ಒಪ್ಪಿಕೊಳ್ಳುತ್ತಾರೆ.

ಆ ಕಾಲದ ವಚನಗಾರ್ತಿಯರು ಬಹಳಷ್ಟು ಮಂದಿ ಕೆಳವರ್ಗದಿಂದ ಬಂದವರು. ಕರ್ಮಮಾರ್ಗ, ಕಾಯಕಸಿದ್ಧಾಂತದ ಮೂಲಕ ಅನುಭಾವದ ಸಾಧನೆಗೆ ಹೊರಡುತ್ತಾರೆ. ಮಹಾದೇವಿ ಅಕ್ಕನಲ್ಲಾಗಲಿ, ನೀಲಾಂಬಿಕೆ, ಗಂಗಾಂಬಿಕೆ, ಅಮುಗೆ ಮಾರಯ್ಯ, ಹಿರೆಜಂಬೂರ ಸತ್ಯಕ್ಕ, ಬೊಂತಾದೇವಿ, ಮುತ್ತಿಗೆಯ ಮುಕ್ತಾಯಕ್ಕ ಮುಂತಾದ ವಚನಗಾರ್ತಿಯರಲ್ಲಿ 'ಕಾಯದ ಪ್ರಸ್ತಾಪ ಪದೇ ಪದೇ ಅಭಿವ್ಯಕ್ತಿಗೊಳ್ಳುತ್ತದೆಯೇ ಹೊರತು 'ಕಾಯಕ'ದ ಪ್ರಸ್ತಾಪವಿಲ್ಲ. ಅನ್ನದಾಸೋಹದಲ್ಲಿಯೇ ನಿರತರಾದ ನೀಲಾಂಬಿಕೆ, ಗಂಗಾಂಬಿಕೆ ಇವರ ವಚನಗಳಲ್ಲಿ ವ್ರತಾಚಾರ, ಭಕ್ತಿಚಿಂತನೆಗಳಿವೆ. ಆದರೆ ತಾವು ಕೈಗೊಂಡಿರುವ ಕಾಯಕವನ್ನು ತಮ್ಮ ಹೆಸರಿಗು ಮುಂಚೆ ಹೇಳಿಕೊಳ್ಳದ ಕೆಳವರ್ಗದ ವಚನಕಾರರಲ್ಲಿ ಕಾಯಕಮಹತ್ವದ ಬಗ್ಗೆ ಸಾಕಷ್ಟು ಚಿಂತನೆಗಳಿವೆ.

ಏಕೈಕ ದಲಿತ ವಚನಕಾರ್ತಿಯಾಗಿ ಅನುಭವ ಮಂಟಪದಲ್ಲಿ ಹೊರಹೊಮ್ಮಿರುವ ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆಯ ವಚನವೊಂದರಲ್ಲಿ ಕಾಯಕದ ತತ್ವ ಅಡಗಿದೆ. ಹೀಗೆ ಅನೇಕ ವಚನಕಾರ್ತಿಯರು ತಮ್ಮ ಅಂಕಿತದೊಂದಿಗೆ ಕಾಯಕದ ಪ್ರತಿಪಾದನೆ ಮಾಡಿರುವುದು ಕಂಡುಬರುತ್ತದೆ. ಉದಾ. ಮಡಕೆ ಮಾಡುವ ಕಾಯಕದಲ್ಲಿ ನಿರತಳಾದ ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ 'ಕುಂಭೀಶ್ವರಲಿಂಗ' ಎಂಬ ಅಂಕಿತ ಹೊಂದಿದ್ದರೆ ಕದಿರಕಾಯಕ ಮಾಡುವ ರೆಮ್ಮವ್ವೆ ಅಂಕಿತ 'ಗುಮ್ಮೇಶ್ವರಾ' ಸೂಳೆಸಂಕಮ್ಮನ ಅಂಕಿತ 'ನಿರ್ಲಜ್ಜೇಶ್ವರಾ'.

ಕಾಯಕತತ್ವವನ್ನು ತಮ್ಮ ಆಧ್ಯಾತ್ಮಿಕ ಸಾಧನೆಯ ಪೂರೈಕೆಗೆ ಬಳಸಿಕೊಂಡ ವಚನಕಾರ್ತಿಯರು ಕಾಯಕವನ್ನು ಆರ್ಥಿಕ ಸ್ವಯಂಪೂರ್ಣತೆಯನ್ನು ಸಾಧಿಸುವ ಒಂದು ಸಾಧನವಾಗಿ ಮಾಡಿಕೊಳ್ಳುತ್ತಾರೆ. ಸಂಗ್ರಹಪ್ರವೃತ್ತಿ, ಸೋಮಾರಿತನಗಳನ್ನು ವಿರೋಧಿಸುತ್ತಾರೆ. ಬಡತನ ದೂರ ಸರಿಯಬೇಕಾದರೆ ಪ್ರತಿಯೊಬ್ಬನೂ ದುಡಿಯಬೇಕು, ದೇಹ ದಂಡಿಸಿ ಬದುಕಬೇಕು ಎಂಬುದು ಸಿದ್ಧಾಂತವಾಗಿರುತ್ತದೆ. ತನ್ನ ಗಂಡ ಹೆಚ್ಚು ಅಕ್ಕಿ ತಂದಾಗ ಅದನ್ನು ಸ್ಪಷ್ಟವಾಗಿ ವಿರೋಧಿಸಿ ಮರಳಿ ಹಾಕಿಬನ್ನಿ ಎಂಬ ದಿಟ್ಟ ನಿಲುವಿನೊಂದಿಗೆ ಹೇಳುತ್ತಾಳೆ ಶರಣೆ ಆಯ್ದಕ್ಕಿ ಲಕ್ಕಮ್ಮ.

**'ಆಸೆಯೆಂಬುದು ಅರಸಿಂಗಲ್ಲದೆ?**
**ಶಿವಭಕ್ತರಿಗುಂಟೇ ಅಯ್ಯಾ**
**ರೋಷವೆಂಬುದು ಯಮದೂತರಿಗಲ್ಲದೆ**
**ಅಜಾತರಿಗುಂಟೇ ಅಯ್ಯಾ?**
**ಈಸಕ್ಕಿಯಾಸೆ ನಿಮಗೇಕೆ ಈಶ್ವರನೊಪ್ಪ'**

ಕಾಯಕದ ನೆಪದಲ್ಲಿ ಅನಧಿಕೃತ ಸಂಗ್ರಹ ಮಾಡುವುದು ದೊಡ್ಡ ಅಪರಾಧ ಎಂಬ ನಿಲುವು ಅವಳದಾಗಿತ್ತು. ಒಟ್ಟಿನಲ್ಲಿ ವಚನಕಾರ್ತಿಯರು ಧಾರ್ಮಿಕ ಪ್ರಜ್ಞೆಯೊಂದಿಗೆ ಸಾಮಾಜಿಕ ಕಳಕಳಿ ಹೊಂದಿದವರಾಗಿದ್ದರು. ಒಬ್ಬ ವ್ಯಕ್ತಿ ಒಂದೇ ವೃತ್ತಿಯನ್ನೇ ಅವಲಂಬಿಸಿ ಜೀವನ ಸಾಗಿಸುವ ಪದ್ಧತಿಯನ್ನು 12ನೇ ಶತಮಾನದ ಶರಣರ ಸಂವಿಧಾನವಾಗಿತ್ತು. ಅನುಭವ ಮಂಟಪದೊಂದಿಗೆ ಅಧ್ಯಾತ್ಮ, ಬೋಧನೆ, ಚಿಂತನೆ, ತತ್ವ, ವ್ರತ, ನೇಮ, ಕಾಯಕತ್ವ, ಆಚಾರಗಳ ಬಗೆಗೆ ಚಿಂತನೆ ಮಾಡುತ್ತಾ ಹೊರಗೆ 'ಕಾಯಕನಿಷ್ಠೆ' ತೋರುತ್ತಲೇ ಒಳಗಿನ ಅರಿವು, ತನ್ನತನದ ಶೋಧನೆ ಹಾಗೂ ಆತ್ಮಪರಿಶುದ್ಧತೆ ಸಾಧಿಸುವ ಬಗೆ ಇವರದಾಗಿತ್ತು ಎಂಬುದನ್ನು ಕಾಣಬಹುದು.

**ನಿಂದಿಸುವನೊಬ್ಬ, ಸ್ತುತಿಸುವನೊಬ್ಬ**
**ಇವರಿಬ್ಬರು ನಮ್ಮ ಶಿವಯೋಗಿಯ**
**ಪರಮಬಂಧುಗಳಯ್ಯ**
**ಪಾಪವನೊಬ್ಬ ಕೊಂಬ, ಪುಣ್ಯವನೊಬ್ಬ ಕೊಂಬ**
**ಕೂಡಲಸಂಗಮದೇವ ನಿಮ್ಮ ಶರಣರು ನಿತ್ಯಮುಕ್ತರು**
**– ಬಸವಣ್ಣನವರು**

# ಪೌಷ್ಟಿಕತೆ ಹಾಗೂ ಆರ್ಥಿಕತೆಗಾಗಿ ತೋಟಗಾರಿಕೆ

**ಸಾರಾಂಶ :**

'ಆರೋಗ್ಯವೇ ಭಾಗ್ಯ' ಎಂಬ ಗಾದೆ ಜನಪ್ರಿಯವಾದುದು. ನಾನಾ ಬಗೆಯ ಧನ ಸಂಪತ್ತುಗಳಿದ್ದರೂ ಆರೋಗ್ಯವಿಲ್ಲದಿದ್ದರೆ ಅನುಭವಿಸಲು ಸಾಧ್ಯವಿಲ್ಲ. ಆದ್ದರಿಂದ ಸರ್ವ ಭಾಗ್ಯಗಳಿಗಿಂತ ಆರೋಗ್ಯ ಭಾಗ್ಯ ಶ್ರೇಷ್ಠ. ಆರೋಗ್ಯವನ್ನು ಕೊಡುವುದರ ಜೊತೆಗೆ ತೋಟಗಾರಿಕೆಯು ರೈತರ ಆರ್ಥಿಕ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರವನ್ನು ಒದಗಿಸುತ್ತಿರುವುದರಿಂದ ರೈತರು ಆದಾಯ ವೃದ್ಧಿಯನ್ನು ಹೆಚ್ಚಿಸಿಕೊಂಡಿರುವುದು ಗಮನಾರ್ಹವಾಗಿದೆ.

ಇತ್ತೀಚಿನ ದಿನಗಳಲ್ಲಿ ಕೃಷಿಯು ಹೆಚ್ಚು ವಾಣಿಜ್ಯೀಕರಣಗೊಳ್ಳುತ್ತಾ ಏಕಬೆಳೆ ಪದ್ಧತಿಯೊಂದಿಗೆ, ಅಂತರಬೆಳೆ ಮಿಶ್ರಬೆಳೆ ಹಾಗೂ ಹೆಚ್ಚಿನ ಸಾಂಧ್ರತೆಯ ನಿಖರ ಕೃಷಿಯತ್ತ ಒಲವು ಮೂಡಿರುವುದನ್ನು ಕಾಣಲಾಗುತ್ತಿದೆ. ವೈಜ್ಞಾನಿಕವಾಗಿ ಕೃಷಿ ಅನುಸರಿಸಲು ಸಮಗ್ರ ಕೃಷಿ ಪದ್ಧತಿಯಲ್ಲಿ ತೋಟಗಾರಿಕೆ ಬೆಳೆಗಳಾದ ತರಕಾರಿ, ಹಣ್ಣು, ತೋಟಪಟ್ಟಿ, ಸಾಂಬಾರು, ಔಷಧಿ, ಸುಗಂಧದ್ರವ್ಯ, ಜೇನು ಕೃಷಿ, ಅಣಬೆ ಬೇಸಾಯದೊಂದಿಗೆ ವಾಣಿಜ್ಯವಾಗಿ ಪುಷ್ಪ ಕೃಷಿಯನ್ನು ಕೈಗೆತ್ತಿಕೊಂಡು ಕುಟುಂಬದ ಸಮಾಜದ ಒಟ್ಟಾರೆ ಮಾನವ ಜನಾಂಗದ ಸುಸ್ಥಿರ ಪೌಷ್ಟಿಕತೆ ಹಾಗೂ ಕೃಷಿ ಆದಾಯವನ್ನು ಹೆಚ್ಚಿಸಿಕೊಂಡು ದೇಶದ ಆರ್ಥಿಕ ಪ್ರಗತಿಗೆ ತೋಟಗಾರಿಕೆ ತನ್ನದೇ ಆದ ಪರಿಣಾಮವನ್ನು ಬೀರಿದೆ. ದೇಶದ ಆರ್ಥಿಕ ಪ್ರಗತಿ ಪ್ರತಿಶತ 33ರಷ್ಟು ತೋಟಗಾರಿಕೆಯಿಂದ ಸಾಧಿಸಿದ್ದನ್ನು ಆರ್ಥಿಕ ತಜ್ಞರು ದೃಢ ಪಡಿಸಿರುತ್ತಾರೆ.

ಪ್ರಸ್ತುತ ವರ್ಷಗಳಲ್ಲಿ ವಿಶ್ವ ಆರೋಗ್ಯ ಸಂಸ್ಥೆ (WHO) ಶಿಫಾರಸ್ಸಿನಂತೆ ಪ್ರತಿಯೊಬ್ಬರು ಪ್ರತಿದಿನ 400 ಗ್ರಾಂ ತರಕಾರಿ ಹಾಗೂ 300 ಗ್ರಾಂ ಹಣ್ಣುಗಳ ಸೇವನೆ ಮಾಡಲೇಬೇಕು. ಆಗ ಮಾತ್ರ ದೇಹವು ಆರೋಗ್ಯದ ಸಮತೋಲನ ಕಾಪಾಡಿಕೊಳ್ಳುತ್ತದೆ. ಪ್ರಸ್ತುತದಲ್ಲಿ ಭಾರತೀಯ ಗ್ರಾಮೀಣ ಜನರು ಕೇವಲ 145 ಗ್ರಾಂ ಕಾಯಿಪಲ್ಯ ಹಾಗೂ 15 ಗ್ರಾಂ ಹಣ್ಣಿನ ಸೇವನೆ ಮಾಡುತ್ತಾರೆ. ನಗರವಾಸಿಗಳು 155 ಗ್ರಾಂ ತರಕಾರಿ ಹಾಗೂ 29 ಗ್ರಾಂ ಹಣ್ಣಿನ ಸೇವನೆ ಮಾಡುತ್ತಿರುವುದು ದೃಢ ಪಟ್ಟಿದೆ, ಈ ಹಿನ್ನೆಲೆಯಲ್ಲಿ ಪ್ರತಿಶತ 80 ಕ್ಕೂ ಹೆಚ್ಚು ಭಾರತೀಯರು ಪೌಷ್ಟಿಕಾಂಶದ ಕೊರತೆಯಿಂದ ಹಲವಾರು ಆರೋಗ್ಯ ಸಮಸ್ಯೆಗೆ ಒಳಗಾಗುತ್ತಿದ್ದಾರೆ.



**ಡಾ. ಶಶಿಕುಮಾರ್ ಎಸ್.**
ಪ್ರಾಧ್ಯಾಪಕರು ಹಾಗೂ ಸಂಪಾದಕರು,
ಸಂವಹನ ಕೇಂದ್ರ ತೋವಿವಿ, ಬಾಗಲಕೋಟ.
Email: shashikumar2482@gmail.com
Cell: 9741900255

ಉತ್ತಮ ಪೌಷ್ಟಿಕತೆಗಾಗಿ ಪ್ರಸ್ತುತದಲ್ಲಿ ಪ್ರತಿಶತ 20ರಷ್ಟು ಸ್ಥಿತಿವಂತರು ಓಟ್ಸ್, ಅವಲಕ್ಕಿ, ದೇಶಿ ಹಾಲು, ಆಲಿವ್ ಎಣ್ಣೆ, ತುಪ್ಪ, ಬೆಳೆಕಾಳು ಹಾಗೂ ಸಿರಿಧಾನ್ಯಗಳನ್ನು ಸೇವಿಸುತ್ತಾರೆ. ಇದರಿಂದ ದೇಹಕ್ಕೆ ಬೇಕಾಗಿರುವ ಶಕ್ತಿ, ಪೋಷಕಾಂಶಗಳಾದ ಕ್ಯಾಲ್ಸಿಯಂ, ನಾರು, ಮ್ಯಾಗ್ನೇಷಿಯಂ, ವಿಟಾಮಿನ್ ಇ, ಸಿ, ಎ, ಡಿ, ಪೊಟ್ಯಾಷಿಯಂ, ಪ್ರೋಟೀನ್, ಕಬ್ಬಿನಾಂಶವನ್ನು ಸುಲಭವಾಗಿ ದೊರೆಯುವ ಮೂಲಗಳಾದ ತರಕಾರಿ, ಹಣ್ಣು, ಏಕದಳ ಕಾಳು, ಬೇಳೆಕಾಳು, ಹಾಲು, ಮೊಟ್ಟೆಗಳಿಂದ ಪಡೆಯುತ್ತಿದ್ದಾರೆ. ಆದರೆ ಪ್ರತಿಶತ 80 ರಷ್ಟು ಜನಸಂಖ್ಯೆಗೆ ಪ್ರತಿದಿನ ಶಿಫಾರಿತ ಅಥವಾ ನಿರ್ದಿಷ್ಟ ಪಡಿಸಿದ ಆಹಾರ ಸಿಗದಿರುವುದರಿಂದ ತೋಟಗಾರಿಕೆ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ ಬಂದಿದೆ. ತೋಟಗಾರಿಕೆ ಬೆಳೆಗಳ ಅಳವಡಿಕೆ ಹಾಗೂ ಹೆಚ್ಚಿನ ಉತ್ಪಾದನೆಯೊಂದಿಗೆ ಭಾರತೀಯರ ಅಪೌಷ್ಟಿಕತೆ ಹೋಗಲಾಡಿಸುವುದು ಅತೀ ಮುಖ್ಯವಾಗಿದೆ. ಅಂತೆಯೇ 2023-24ರ ಸಾಲಿನ ಅಂಕಿ ಅಂಶಗಳ ನೋಡಿದಾಗ ಒಟ್ಟು ತೋಟಗಾರಿಕೆ ಉತ್ಪಾದನೆ 351.92 ಮಿಲಿಯನ್ ಟನ್‌ಗಳಿಂದ 355.25 ಮಿಲಿಯನ್ ಟನ್ ಹೆಚ್ಚಾಗಿರುವುದನ್ನು ಕಾಣಲಾಗಿದೆ. ಅರ್ಥಾತ್ ಪ್ರತಿಶತ 1.37 ರಷ್ಟು ಹೆಚ್ಚಿನ ಉತ್ಪಾದನೆಯನ್ನು ಗಮನಿಸಲಾಗಿದೆ. ಬರುವ ವರ್ಷಗಳಲ್ಲಿ ಹಣ್ಣು, ತರಕಾರಿ ಹಾಗೂ ತೋಟಪಟ್ಟಿ ಬೆಳೆಗಳ ಕ್ಷೇತ್ರ ಹಾಗೂ ಉತ್ಪಾದನೆ ಹೆಚ್ಚುತ್ತಲೇ ಹೋಗಬೇಕಾಗಿದ್ದು, ದೇಶದ ಒಟ್ಟಾರೆ ಜನಸಂಖ್ಯೆಗೆ ಪೌಷ್ಟಿಕ ಆಹಾರ ಒದಗಿಸಲು ಸಾಧ್ಯವಾಗುವುದು. ಅಲ್ಲದೆ ದೇಶದ ಆರ್ಥಿಕ ಪ್ರಗತಿಗೆ ಪೂರಕವಾಗುವುದೆಂದು ತಿಳಿಯಲಾಗಿದೆ.

ಹಣ್ಣಿನ ಬೆಳೆಗಳಲ್ಲಿ ಮುಖ್ಯವಾಗಿ ದಾಳಿಂಬೆ (ಪ್ರೋಟೀನ್, ವಿಟಮಿನ್, ರೋಗನಿರೋಧಕಗಳು) ಅವಕಾಡೊ (ಆರೋಗ್ಯಕರ ಕೊಬ್ಬು, ನಾರಿನಾಂಶ ಮೆಗ್ನೇಶಿಯಂ, ವಿಟಾಮಿನ್ ಸಿ, ಇ, ಕೆ ಪ್ರೋಟೀನ್), ಪೇರಲ (ಪ್ರೋಟಿನ್, ವಿಟಾಮಿನ್

ಸಿ) ಕಿವಿ ಹಣ್ಣು (ಪ್ರೋಟೀನ್, ಪೊಟ್ಯಾಶಿಯಂ, ಫಾಸ್ಪರಸ್, ಕಬ್ಬಿಣಾಂಶ) ಚಕ್ಕೋತಾ (ಪ್ರೋಟೀನ್, ವಿಟಮಿನ್ ಸಿ, ಕ್ಯಾಲ್ಸಿಯಂ, ಕಬ್ಬಿಣಾಂಶ), ಬಾಳೆಹಣ್ಣು (ಪ್ರೋಟೀನ್, ಪೊಟ್ಯಾಶಿಯಂ ನಾರಿನಾಂಶ ಪ್ರೋಬಿಯಾಟಿಕ್ಸ್, ವಿಟಾಮಿನ್ ಎ, ಬಿ6, ಸಿ ಮೆಗ್ನೇಶಿಯಂ ಪೋಷಕಾಂಶಗಳು) ಚೆರ್ರಿ ಹಣ್ಣು (ಪೊಟ್ಯಾಷಿಯಂ, ಪ್ರೋಟೀನ್) ಹಲಸಿನ ಹಣ್ಣು (ಪ್ರೋಟೀನ್, ನಾರಿನಾಂಶ ಪೊಟ್ಯಾಶಿಯಂ, ವಿಟಾಮಿನ್ ಸಿ.ಎ, ಮಗ್ನೇಶಿಯಂ ಕಾಯಿಪಲ್ಯಗಳಾದ ಬೆಳ್ಳುಳ್ಳಿ (ಸಲ್ಫರ್ ಸಂಯುಕ್ತಗಳು-ಉರಿಯೂತ ಹಾಗೂ ಯಕೃತ್ತಿನ ಆರೋಗ್ಯಕ್ಕಾಗಿ), ಕುಂಬಳಕಾಯಿ (ಬೀಟಾ-ಕ್ರಿಪ್ಟೋಕ್ಸಾಂಥೀನ್) ಟೊಮ್ಯಾಟೋ (ಲೈಕೋಪೀನ್-ಯಕೃತ್ತಿನ ರಕ್ಷಣೆ) ಹಾಗೂ ಅರಿಶಿಣ (ಕರ್ಕ್ಯುಮಿನ್-ಉತ್ಕರ್ಷಣ ನಿರೋಧಕ), ಹೀಗೆ ಎಲ್ಲ ತರಕಾರಿಗಳಲ್ಲಿ ಆರೋಗ್ಯವರ್ಧಕ ಹಾಗೂ ಶರೀರ ಕ್ರಿಯೆಗಳಿಗೆ ಪೂರಕವಾಗುವ ಪ್ರೋಟೀನ್, ನಾರಿನಾಂಶ ವಿಟಾಮಿನ್, ಖನಿಜಾಂಶಗಳನ್ನು ಒದಗಿಸಿ ಆಹಾರ ಮತ್ತು ಆರೋಗ್ಯಕ್ಕೆ ಪೂರಕವಾಗಿವೆ.

ಆಹಾರ ಸೇವನೆಯಲ್ಲಿ ಯೋಗ್ಯವಲ್ಲದ ಕೆಲವು ಆಹಾರ ಪದಾರ್ಥಗಳಾದ ಸಕ್ಕರೆ (ದೇಹದ ತೂಕ ಹೆಚ್ಚಳ, ಹಲ್ಲು ಸವೆತ ಹೃದಯಕ್ಕೆ ತೊಂದರೆ, ಸಕ್ಕರೆ ಕಾಯಿಲೆ, ಯಕೃತ್ತಿಕ್ಕೆ ತೊಂದರೆ, ಮೂತ್ರಪಿಂಡಕ್ಕೆ ತೊಂದರೆ ಚರ್ಮ ಸುಕ್ಕುಗಟ್ಟುವಿಕೆ ಸಂದಿವಾತ, ಮೆದುಳಿನ ಕಾರ್ಯ ವಿಫಲತೆ ಹಾಗೂ ಕಣ್ಣಿಗೆ ತೊಂದರೆ) ಗೋಧಿ (ಗ್ಲುಟಿನ್ ಅಂಶ). ವಿದೇಶಿ ಆಕಳುಗಳ ಹಾಲು (ಅಲರ್ಜಿಗೆ ಕಾರಣ), ಮೈದಾ ಹಾಗೂ ತ್ವರಿತ ಆಹಾರ (ಶೇಖರಣಾ ಸಾಮರ್ಥ್ಯ ಹೆಚ್ಚಿಸಲು ಉಪ್ಪು, ಸೋಡಿಯಂ ಕ್ಲೋರೈಡ್ ಬಳಕೆ) ಮಾರುಕಟ್ಟೆಯಲ್ಲಿ ಸಿಗುವ ಲೇಸ್, ಕುರುಕುರೆ (ವ್ಯಾಕ್ಸ್ ಲೇಪಿತ), ಕಾಫಿ (ಕೆಫೆನ್ ಗಂಟಲಿನ ಉರಿತ, ಫಾಸ್ಪರಿಕ್ ಆಮ್ಲದ ಉರಿಯಿಂದಾಗಿ ಕ್ಯಾನ್ಸರ್, ಹೃದಯಘಾತ, ಮೆದುಳಿನ ತೊಂದರೆ) ಆಮ್ಲಯುಕ್ತ ಬಣ್ಣದ ತಂಪು ಪಾನೀಯಗಳು (ಕೆಫೆನ್-ಕ್ಯಾನ್ಸರ್ ಕಾರಕ ಹಾಗೂ ಹೃದಯಕ್ಕೆ ತೊಂದರೆ), ತ್ವರಿತ ಆಹಾರ ಪದಾರ್ಥಗಳಲ್ಲಿ ಹೆಚ್ಚಿನ ಅಂಶದಲ್ಲಿ ಉಪ್ಪು, ಸೋಡಿಯಂ ಕ್ಲೋರೈಡ್ ರಾಸಾಯನಿಕ ಸಂರಕ್ಷಕಗಳು, ಬಣ್ಣದ ರಾಸಾಯನಿಕಗಳು, ರುಚಿ ಹೆಚ್ಚಿಸುವ ರಾಸಾಯನಿಕಗಳು ಹಲ್ಲಿನ ಹಾಗೂ ಮೂಳೆಗಳ ಸವೆತಕ್ಕೆ ಕಾರಣವಾಗುತ್ತವೆಂದು ತಿಳಿಯಲಾಗಿದೆ.

ಈ ಎಲ್ಲ ಕಾರಣಗಳಿಂದಾಗಿ ಆರೋಗ್ಯದ ದೃಷ್ಟಿಯಿಂದ ಹಣ್ಣುಗಳು, ತರಕಾರಿ, ತೋಟಪಟ್ಟಿ ಬೆಳೆಗಳ ಉತ್ಪನ್ನಗಳು ಸಾಂಬಾರು, ಔಷಧಿ ಹಾಗೂ ಗಿಡಮೂಲಿಕೆಗಳ ನೈಸರ್ಗಿಕ ಉತ್ಪನ್ನಗಳ ಸೇವನೆಯಿಂದಾಗಿ ಆಹಾರದ ಭದ್ರತೆ ಹಾಗೂ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು. ತರಕಾರಿ, ಹಣ್ಣುಗಳು ಒಟ್ಟಾರೆ ತೋಟಗಾರಿಕೆ ಉತ್ಪನ್ನಗಳ ಉತ್ಪಾದನೆ ಕೊರತೆ ಹಾಗೂ ಹೆಚ್ಚಿನ ಬೇಡಿಕೆಯಿಂದಾಗಿ ಪ್ರತಿ ವರ್ಷವು ತೋಟಗಾರಿಕೆ ಕ್ಷೇತ್ರ ಹಾಗೂ ಉತ್ಪಾದನೆ ಹೆಚ್ಚಾಗಲು ಕಾರಣವಾಗಿವೆ.

ತೋಟಗಾರಿಕೆ ಬೆಳೆಗಳ ಅಳವಡಿಕೆ ಹಾಗೂ ಉತ್ಪಾದನೆ ಕೃಷಿಕರ ಹೆಚ್ಚಿನ ಆದಾಯಕ್ಕಾಗಿ ಹೆಚ್ಚಿನ ವೈವಿಧ್ಯೀಕರಣಕ್ಕಾಗಿ ಕ್ಷೇತ್ರದಲ್ಲಿ ಹಾಗೂ ಸಂಸ್ಕರಣೆಯಲ್ಲಿ ಹೆಚ್ಚಿನ ಉದ್ಯೋಗ ಸೃಷ್ಟಿಸಲು, ಮಹಿಳಾ ಕೃಷಿಕರನ್ನು ಕೃಷಿಯಲ್ಲಿ ತೊಡಗಿಸಲು, ವರ್ಷ ಪೂರ್ತಿ ಉತ್ಪಾದನೆ ಪಡೆಯಲು, ಕೃಷಿ ಚಟುವಟಿಕೆಗಳೊಂದಿಗೆ ರಫ್ತು ಮಾಡುವ ಅವಕಾಶಗಳನ್ನು ಹೆಚ್ಚಾಗಿ ಹೊಂದಿರುತ್ತದೆ, ಮಹಿಳಾ ಸಬಲೀಕರಣಕ್ಕಾಗಿ ಹಾಗೂ ಪೌಷ್ಟಿಕಾಂಶದ ಭದ್ರತೆಗಾಗಿ ತೋಟಗಾರಿಕೆ ಅಳವಡಿಕೆ ಅತೀ ಮುಖ್ಯವೆಂದು ಪರಿಗಣಿಸಲಾಗಿದೆ.

ಈ ಹಿಂದಿನ ಐದು ವರ್ಷಗಳ ಅಂಕಿ ಅಂಶಗಳನ್ನು ಗಮನಿಸಿದಾಗ ಹಣ್ಣಿನ ಹಾಗೂ ತರಕಾರಿ ಬೆಳೆಗಳಲ್ಲಿ ಶೇಕಡಾ 6.34 ಉತ್ಪಾದನೆ ಹಾಗೂ 4.7 ಅಧಿಕ ಕ್ಷೇತ್ರದಲ್ಲಿ ಅಳವಡಿಕೆ ಕಂಡು ಬಂದಿದೆ. ಮುಂಬರುವ ವರ್ಷಗಳಲ್ಲಿಯೂ ಸಹ ಕ್ಷೇತ್ರ ಹಾಗೂ ಉತ್ಪಾದನೆ ಹೆಚ್ಚಳಕ್ಕೆ ವಿಪುಲ ಅವಕಾಶಗಳಿದ್ದು, ಬೇಡಿಕೆ ಹಾಗೂ ಆದಾಯ ವೃದ್ಧಿಗೆ ತೋಟಗಾರಿಕೆ ಅಳವಡಿಕೆ ಅತೀ ಅವಶ್ಯಕವಾಗಿದೆ.

**ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ**
**ಲಿಂಗವ ನೆನೆದರೆ ತಪುವುವು ಅಪಮೃತ್ಯು,**
**ಕಾಲ ಕರ್ಮಂಗಳಯ್ಯಾ ದೇವ**
**ಪೂಜೆಯಮಾಟ, ದುರಿತ ಬಂಧನದೋಟ,**
**ಶಂಭು ನಿಮ್ಮಯನೋಟ,**
**ಹೆರೆ ಹಿಂಗದ ಕಣ್ಬೇಟ ಸದಾ ಸನ್ನಿಹಿತನಾಗಿ,**
**ಶರಣೆಂಬುವುದು ನಂಬುವುದು,**
**ಜಂಗಮಾರ್ಚನೆಯ ಮಾಟ,**
**ಕೂಡಲಸಂಗನ ಕೂಟ.**

**– ವಿಶ್ವಗುರು ಬಸವಣ್ಣನವರು.**